ಮಾನವಿಕ ಕರ್ನಾಟಕ

ಸಂಪುಟ ೩೪

ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೪

ಮಾನವಿಕ ಕರ್ನಾಟಕ

ಸಂಪುಟ ೩೪, ಸಂಚಿಕೆ ೨

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೪

MANAVIKA KARNATAKA : A Kannada Quarterly of the University of Mysore, Volume 34, Number 2, Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangotri, Mysore - 570 006

© ಹಕ್ಕುಗಳನ್ನು ಕಾದಿರಿಸಿದೆ

ಪ್ರಧಾನ ಸಂಪಾದಕರು
ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಸಂಪಾದಕರು
ಪ್ರೊ. ಅಂಬಳಿಕೆ ಹಿರಿಯಣ್ಣ
ಡಾ. ಆರ್. ರಾಮಕೃಷ್ಣ

ಮುದ್ರಕರು
ಚಂದ್ರಶೇಖರ ದೊಡ್ಡಮನಿ
ನಿರ್ದೇಶಕರು
ಮೈ.ವಿ.ವಿ. ಮುದ್ರಣಾಲಯ, ಮೈಸೂರು ೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ' ದ ೩೪ನೇ ಸಂಪುಟದ ಎರಡನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೦ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದವಕಾಶವನ್ನು ಸಮರ್ಥವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಜೆ. ಶಶಿಧರ ಪ್ರಸಾದ್ ರವರು ಹಾಗೂ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕ ಬಂಧುಗಳಿಗೂ ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಎಚ್. ಎಸ್. ಕಂಪ್ಯೂಟರ್ಸ್' ನ ಶ್ರೀಮತಿ ಮೀನಾ ಸುರೇಶ್ ಅವರಿಗೂ, ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಿಗೂ, ಅವರ ಸಿಬ್ಬಂದಿ ವರ್ಗದವರಿಗೂ ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಪ್ರಕೃತ ಸಂಚಿಕೆ ಒಟ್ಟು ಹತ್ತು ಲೇಖನಗಳ ಸಂಚಯವಾಗಿದ್ದು ಅವು ಸಾಮಾಜಿಕ ವಿಜ್ಞಾನ ಕ್ಷೇತ್ರಗಳಿಗೆ ನೇರವಾಗಿ ಸಂಬಂಧಿಸಿವೆ. ವಿಷಯ ಮತ್ತು ವಸ್ತುವಿನ ದೃಷ್ಟಿಯಿಂದ ಅವು ಮುಖ್ಯವಾಗಿ ಇತಿಹಾಸ, ಜೀವನಚರಿತ್ರೆ, ತತ್ತ್ವಶಾಸ್ತ್ರ, ಜಾನಪದ ಹಾಗೂ ಭಾಷಾವಿಜ್ಞಾನ ವಿವಕ್ಷೆಗಳಾಗಿವೆ.

ವಿ.ಎನ್. ಶೇಷಗಿರಿರಾವ್ ಅವರ 'ಧರ್ಮ ಮತ್ತು ವಿಜ್ಞಾನ: ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ' ಲೇಖನ ಧರ್ಮ ಮತ್ತು ವಿಜ್ಞಾನಗಳನ್ನು ಕುರಿತು ಸ್ವಾಮಿ ವಿವೇಕಾನಂದರ ದೃಷ್ಟಿ ಏನೆಂಬುದನ್ನು ವಿಶ್ಲೇಷಿಸುತ್ತದೆ. ಆಧುನಿಕ ಸಂದರ್ಭದಲ್ಲಿ ಯಾಂತ್ರೀಕರಣ, ವಿಜ್ಞಾನಗಳ ಅಗಾಧ ಬೆಳವಣಿಗೆಯ ಪರಿಣಾಮವಾಗಿ ಧರ್ಮಕ್ಕೆ ಸಾಕಷ್ಟು ಪ್ರಾಶಸ್ತ್ಯವಿಲ್ಲದಾಗಿದೆ ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಈ ಜಿಜ್ಞಾಸೆ ಪ್ರಸ್ತುತ ಎನಿಸಿದೆ. ವಿವೇಕಾನಂದರ ದೃಷ್ಟಿ ವೈಜ್ಞಾನಿಕವಾದುದು, ಬುದ್ಧಿಬದ್ಧವಾದುದು ಹಾಗೂ ಕ್ರಾಂತಿಕಾರಕವಾದುದು ಎಂಬುದನ್ನು ಸಕಾರಣವಾಗಿ ಮಂಡಿಸುತ್ತ ಅವರ ಪ್ರಕಾರ ವಿಜ್ಞಾನ ಮತ್ತು ಧರ್ಮ-ಎರಡರ ಗುರಿಯೂ ಏಕತೆಯನ್ನು ಹುಡುಕುವುದಾಗಿದೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಧರ್ಮವನ್ನು ವೈಜ್ಞಾನಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳುವುದನ್ನು ವಿವೇಕಾನಂದರು ಮೆಚ್ಚಿಕೊಳ್ಳುತ್ತಿದ್ದರು ಎಂಬ ಸಂಗತಿ ಗಮನಾರ್ಹ.

'ವಿಚಾರವಾದಿಯಾಗಿ ಸ್ವಾಮಿ ವಿವೇಕಾನಂದರು : ಮೂಢನಂಬಿಕೆಗಳ ಕಟು ವಿಮರ್ಶೆ' ಎಂಬ ಎಸ್. ವೆಂಕಟೇಶ್ ಅವರ ಬರಹವೂ ಮೇಲಿನ ಅಧ್ಯಯನಕ್ಕೆ ಪೂರಕವಾಗಿದೆ. ಮೂಢನಂಬಿಕೆಗಳ ಕಡು ವಿರೋಧಿಯಾಗಿದ್ದ ವಿವೇಕಾನಂದರು ಮತಧರ್ಮ ಗಳಲ್ಲಿಯ ಮೂಢನಂಬಿಕೆಗಳನ್ನು ಗುಡಿಸಿ ಹಾಕಲು ಆಗ್ರಹಪಡಿಸುತ್ತಿದ್ದುದನ್ನು ಪ್ರಸ್ತಾಪಿಸುತ್ತಾ ಮೂಢನಂಬಿಕೆಗಳಿಂದ ಹೊರಬರಲು ಏಕೈಕ ಮಾರ್ಗವೆಂದರೆ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳುವುದು ಹಾಗೂ ಪ್ರೇಮಮಯವಾದ ಜೀವನ ನಡೆಸುವುದು ಎಂಬ ವಿವೇಕಾನಂದರ ನಿಲುವನ್ನು ಸ್ಪಷ್ಟಪಡಿಸಲಾಗಿದೆ.

ಜಿ.ಟಿ. ಸೋಮಶೇಖರ ಅವರ 'ಭಾರತೀಯ ಇತಿಹಾಸ ಸಂಶೋಧನೆ ಮತ್ತು ಬರವಣಿಗೆಯನ್ನು ಕುರಿತ ಬ್ರಿಟಿಷ್ ಧೋರಣೆ : ಒಂದು ವಿಶ್ಲೇಷಣೆ' ಲೇಖನದಲ್ಲಿ ಭಾರತದ ಆರಂಭದ ಇತಿಹಾಸವನ್ನು ರಚಿಸಿದ ಬ್ರಿಟಿಷ್ ಆಡಳಿತಗಾರ ವಿದ್ವಾಂಸರ ಧೋರಣೆ ಮತ್ತು ಅವರ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಯತ್ನಿಸಲಾಗಿದೆ. ಮೊದಲಿಗೆ ಭಾರತದ ಇತಿಹಾಸ ರಚನೆ ಮತ್ತು ಸಂಶೋಧನೆ ವಸಾಹತುಶಾಹಿ ಪ್ರಭುತ್ವದ ಅಂಕೆಗೆ ಒಳಪಟ್ಟಿದ್ದಿತಾದ್ದರಿಂದ ಅವರ ಆಡಳಿತಾವಧಿಯಲ್ಲಿ ರಚಿತವಾದ ಇತಿಹಾಸ

ಗ್ರಂಥ ಮತ್ತು ಲೇಖನಗಳು ದೋಷಪೂರಿತವಾಗಿದ್ದು ರಾಷ್ಟ್ರೀಯವಾದಿ ಇತಿಹಾಸಕಾರರ ವಿರೋಧಕ್ಕೆ ಕಾರಣವಾಗಿದೆ ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಸದಾ ಹೊಸ ಕ್ಷೇತ್ರಗಳ ಶೋಧದಲ್ಲೇ ತಮ್ಮನ್ನು ತೊಡಗಿಸಿಕೊಳ್ಳಬಯಸುವ ಚಾರಣ ಜಾನಪದ ತಜ್ಞರೇ ಆಗಿರುವ ಟಿ. ಗೋವಿಂದರಾಜು ಅವರ 'ಚಾರಣ ಜಾನಪದ' ಕನ್ನಡ ಜಾನಪದ ಅಧ್ಯಯನವನ್ನು ವಿಸ್ತರಿಸುವ ಒಂದು ಪ್ರಾಮಾಣಿಕ ಪ್ರಯತ್ನ ಎನಿಸಿದೆ. ಬೇರೊಂದು ಕಾರ್ಯಕ್ಕಾಗಿ ವೆಚ್ಚ ಮಾಡುವ ಹಣ ಮತ್ತು ಶ್ರಮದ ಖರ್ಚಿನಲ್ಲಿಯೇ ಜಾನಪದ ಶೋಧ, ಸಂಗ್ರಹ, ಅಧ್ಯಯನಗಳನ್ನು ಹೇಗೆ ಮಾಡಬಹುದು ಎಂಬುದನ್ನು ಸೋದಾಹರಣವಾಗಿ ಪ್ರತಿಪಾದಿಸುವ ಪ್ರಯತ್ನ ಇಲ್ಲಿಯದು. ಚಾರಣದ ವೇಳೆಯಲ್ಲಿ ನಡೆಸುವ ಅವಲೋಕನ ಹೇಗೆ ಹೊಸ ಅರಿವು ಮೂಡಿಸುವಲ್ಲಿ ಸಾರ್ಥಕವಾಗಿತ್ತು ಎಂಬುದನ್ನು ಆ ಸಂದರ್ಭದಲ್ಲಿ ದೊರಕಿಸಿಕೊಂಡ ಮಾಹಿತಿಯ ಬಗೆಗೆ ಸೋದ್ದಿಶ್ಯವಾಗಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಚಾರಣ ಜಾನಪದ ಎಂದರೆ ಚಾರಣದ ನೆವದಲ್ಲಿ ಪರಿಸರ, ಸಂಸ್ಕೃತಿಗೆ ಸಂಬಂಧಿಸಿದ ಜಾನಪದವನ್ನು ಅಧ್ಯಯನಿಸುವುದಾಗುತ್ತದೆ, ವಿಶ್ಲೇಷಿಸುವುದಾಗುತ್ತದೆ. ಚಾರಣದ ಮೂಲಕ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ ಬೌದ್ಧಿಕ ಅರಿವನ್ನು ವಿಸ್ತರಿಸಿಕೊಳ್ಳುವುದೂ ಆಗಿರುತ್ತದೆ. ಚಾರಣ ಜಾನಪದದಲ್ಲಿ ಕೆಲವೊಮ್ಮೆ ಸ್ಥಳಪುರಾಣ ಇತ್ಯಾದಿ ಸೇರಿದರೂ ಚಾರಣದ ಸಂದರ್ಭದಲ್ಲಿ ಅವಕ್ಕೆ ವಿಭಿನ್ನ ದೃಷ್ಟಿಕೋನ ಪ್ರಾಪ್ತವಾಗುವುದರಿಂದ 'ಚಾರಣ ಜಾನಪದ'ವನ್ನು ಪ್ರತ್ಯೇಕ ಪ್ರಕಾರವಾಗಿಯೇ ಅಧ್ಯಯನ ಮಾಡುವ ಅಗತ್ಯವಿದೆ ಎಂದು ಲೇಖಕರು ಪ್ರತಿಪಾದಿಸುತ್ತಾರೆ.

ಆರ್. ರಾಮಕೃಷ್ಣ ಅವರ 'ಭಗವಾನ್ ಬುದ್ಧನ ಉಪದೇಶಾಮೃತ' ಲೇಖನ ಭಾರತೀಯ ಜೀವನ ದರ್ಶನದ ಮೇಲೆ ಅಪ್ರತಿಮ ಪ್ರಭಾವ ಬೀರಿದ ಬುದ್ಧನು ತನ್ನ ಉಪದೇಶಾಮೃತವನ್ನು ಸ್ಪಷ್ಟ ದೃಷ್ಟಾಂತಗಳೊಡನೆ ಅನುಯಾಯಿಗಳಿಗೆ ಉಣಬಡಿಸಿದ ರೀತಿ, ನುಡಿದಂತೆ ನಡೆದು ತೋರಿಸಿದ ವೈಖರಿ ಅನನ್ಯ-ಎಂಬುದನ್ನು ಸಾಧಾರವಾಗಿ ನಿರೂಪಿಸುತ್ತದೆ. ತನ್ನ ಮೌಲಿಕ ಉಪದೇಶಾಮೃತಗಳ ಮೂಲಕ ಬುದ್ಧನೆಂಬ ಹೆಸರನ್ನು ಸಾರ್ಥಕಗೊಳಿಸಿಕೊಂಡ ಎಂಬುದನ್ನು ಲೇಖಕರು ಹೃದ್ಯವಾಗಿ ನಿರೂಪಿಸಿದ್ದಾರೆ.

ಭಾಷಾಬೋಧಕನಿಗೆ ದ್ವಿತೀಯ ಭಾಷೆ ಮತ್ತು ಆ ಭಾಷೆಯನ್ನು ಮಾತನಾಡುವ ಜನರ ಸಂಸ್ಕೃತಿಯ ಸಂಬಂಧದ ಅರಿವಿರಬೇಕಾದುದು ಅತ್ಯವಶ್ಯಕ. ಪರಭಾಷೆಯನ್ನು ಕಲಿಸುವಾಗ ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯನ್ನು ಕುರಿತ ನಿರ್ದಿಷ್ಟ ಸಂಗತಿಗಳ ಜ್ಞಾನ ಅತ್ಯಗತ್ಯ. ಆ ಭಾಷೆಯನ್ನಾಡುವ ಜನರ ಜೀವನವಿಧಾನ, ನಂಬಿಕೆಗಳು ಮತ್ತು ಸಂಪ್ರದಾಯಗಳು, ನಡವಳಿಕೆ ಮತ್ತು ಸಾಧನೆಗಳನ್ನು ಭಾಷಾಬೋಧಕ, ಭಾಷಾ ಬೋಧನೆಯ ಜೊತೆ ಜೊತೆಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು ಅಪೇಕ್ಷಣೀಯ

ಎಂಬ ಸಂಗತಿಯನ್ನು ಪ್ರಸ್ತಾಪಿಸುವ ಬಿ.ಕೆ. ರವೀಂದ್ರನಾಥ್ ಅವರ 'ಭಾಷಾಬೋಧನೆ ಮತ್ತು ಸಂಸ್ಕೃತಿ' ಎಂಬ ಬರಹ ಈ ಹೊತ್ತಿನ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿ ಕಾಣುತ್ತದೆ. ಭಾಷೆಯ ಸಾಂಸ್ಕೃತಿಕ ಅರ್ಥ ಬಹು ಸೂಕ್ಷ್ಮವಾದುದು. ಈ ಸೂಕ್ಷ್ಮವನ್ನು ಗ್ರಹಿಸದಿದ್ದರೆ ಅವರ ಭಾಷಾಪ್ರಯೋಗ ಆಭಾಸವೂ ಹಾಸ್ಯಾಸ್ಪದವೂ ಆಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಭಾಷಾಲೋಕದ ವಿದ್ಯಾರ್ಥಿಗಳಿಗೆ ಭಾಷಾಬೋಧಕ ತಾನು ಕಲಿಸುವ ಭಾಷೆಯ ಸಂಸ್ಕೃತಿ ಮತ್ತು ನಾಗರಿಕತೆ ಬಗೆಗೆ ಸಂಬಂಧಿಸಿದ ವಿಷಯಗಳನ್ನು ಭಾಷಾಕಲಿಕೆಯ ಆರಂಭದಿಂದಲೇ ತಿಳಿಸಿಹೇಳುವುದು ಅವಶ್ಯಕ. ಆಗ ಮಾತ್ರ ಅದು ಯಶಸ್ವಿ ಬೋಧನೆಯಾಗುತ್ತದೆ ಎಂಬ ಲೇಖಕರ ಅಭಿಪ್ರಾಯ ಸಮರ್ಥನೀಯ.

ಬೇರೆ ಸಮುದಾಯಗಳಿಗೆ ಹೋಲಿಸಿದರೆ ಗೊಲ್ಲರ ಮದುವೆ ಸಂಪ್ರದಾಯಗಳು ಭಿನ್ನವೂ ವಿಶಿಷ್ಟವೂ ಆಗಿವೆ. ವಿ. ವಿಜಯಮ್ಮ ಅವರ 'ಗೊಲ್ಲರ ಮದುವೆ ಸಂಪ್ರದಾಯ' ಲೇಖನದಲ್ಲಿ ಅರುಣೆ ತರುವ ಸಂಪ್ರದಾಯ, ಸುರುಗೆ ನೀರನ್ನು ಹಾಕುವ ಸಂಪ್ರದಾಯ, ಹಸೆಶಾಸ್ತ್ರ, ಅಕ್ಕಿಶಾಸ್ತ್ರ, ಜಾಡಿ ತೀರಿಸುವ ಶಾಸ್ತ್ರ, ಮನೆ ತುಂಬುವ ಶಾಸ್ತ್ರ, ಪ್ರಸ್ತ ಇವೇ ಮುಂತಾದ ಕುತೂಹಲಕರ ಮದುವೆ ವಿಧಿ ಸಂಪ್ರದಾಯಗಳನ್ನು ವಿವರಣಾತ್ಮಕವಾಗಿ ಇಲ್ಲಿ ನಿರೂಪಿಸಲಾಗಿದೆ.

ಮ.ಸು. ಕೃಷ್ಣಮೂರ್ತಿ ಅವರ 'ಸ್ವಾಮಿ ರಾಮತೀರ್ಥರು'-ಲೇಖನ ವಿರಳ ಚೇತನವೊಂದರ ಜೀವನ ವೃತ್ತಾಂತವನ್ನು ಕಟ್ಟಿಕೊಡುತ್ತದೆ. ವೇದಾಂತಪ್ರಿಯರೂ, ಬಹು ಭಾಷಾಪಂಡಿತರೂ, ಮಹಾನ್ ದೇಶಪ್ರೇಮಿಗಳೂ ಆಗಿದ್ದ ಸ್ವಾಮಿ ರಾಮತೀರ್ಥರ ಸಿದ್ಧಿ ಸಾಧನೆಗಳನ್ನು ಸವಿವರವಾಗಿ ನಿರೂಪಿಸುವ ಪ್ರಯತ್ನ ಇಲ್ಲಿದೆ. ಆರ್ಯ ಸಮಾಜ, ಬ್ರಹ್ಮ ಸಮಾಜಗಳು ವರ್ಷಗಳ ನಿರಂತರ ಪರಿಶ್ರಮದಿಂದ ಮಾಡಲಾಗದ ಜನ ಜಾಗೃತಿಯನ್ನು ಶ್ರೀ ರಾಮತೀರ್ಥರು ತಮ್ಮ ಜೀವಿತದ ಅಲ್ಪಕಾಲದಲ್ಲಿ ಮಾಡಿ ತೋರಿಸಿದ್ದನ್ನು ಸಾಧಾರವಾಗಿ ಇಲ್ಲಿ ನಿರೂಪಿಸಲಾಗಿದೆ. ತೀರ್ಥರಾಮನು ರಾಮತೀರ್ಥನಾಗಿ ನುಡಿದಂತೆ ನಡೆದ ಮಹಂತರು. ತಮ್ಮ ಅಲ್ಪಕಾಲೀನ ಸಾತ್ವಿಕ ಜೀವನದಲ್ಲಿ ಒಂದು ಉಚ್ಚ ಆದರ್ಶವನ್ನು ಜನತೆಯ ಮುಂದಿಟ್ಟ ಚೇತನ ಎಂದು ಲೇಖಕರು ಬಣ್ಣಿಸಿದ್ದಾರೆ.

ಗರತಿಯ ಹಾಡು ಸಂಕಲನದ ತ್ರಿಪದಿಗಳಲ್ಲಿ ಚಿತ್ರಿತಳಾದ ಕನ್ನಡ ಗರತಿಯ ಸ್ಥೂಲ ಚಿತ್ರಣ ಪಿ. ಶಶಿಕಲಾ ಅವರ 'ಗರತಿಯ ಹಾಡಿನ ಕನ್ನಡ ಗರತಿ' ಲೇಖನದಲ್ಲಿದೆ. ಹೆಣ್ಣನ್ನು ಸಾಂಪ್ರದಾಯಿಕ ರೀತಿಯಲ್ಲಿ ಗ್ರಹಿಸುವ ಧೋರಣೆಯೇ ಇಲ್ಲಿದೆ.

ಇನ್ನು ಕೊನೆಯ ಲೇಖನ 'ಕರ್ನಾಟಕ ಜಾನಪದ ಮುಂದೇನು?' ಮೈಸೂರು ವಿಶ್ವವಿದ್ಯಾನಿಲಯದ ಕುಕಅಸಂ ೨೦೦೪ ಮಾರ್ಚಿ ೧೯ ರಂದು ಆಯೋಜಿಸಿದ್ದ

ಚರ್ಚಾಗೋಷ್ಠಿಯ ಸವಿಸ್ತಾರ ವರದಿಯಾಗಿದೆ. ಆ ಚರ್ಚಾಗೋಷ್ಠಿಯ ಪ್ರಸ್ತುತತೆ ಮತ್ತು ಅದರ ಫಲಿತಗಳನ್ನು ಇಲ್ಲಿ ಕ್ರೋಢೀಕರಿಸಿಕೊಡಲಾಗಿದೆ.

ಒಟ್ಟಿನಲ್ಲಿ ಈ ಸಂಚಿಕೆ ಎಂದಿನಂತೆ ಉಪಯುಕ್ತವೂ ಅಭ್ಯಾಸಯೋಗ್ಯವೂ ವೈವಿಧ್ಯಪೂರ್ಣವೂ ಆದ ವಿಷಯಗಳನ್ನಾಧರಿಸಿದ ಲೇಖನಗಳನ್ನು ತನ್ನ ಒಡಲಾಳದಲ್ಲಿ ಹುದುಗಿಸಿಕೊಂಡಿದೆ. ಈ ಬರಹಗಳನ್ನು ಈ ಸಂಚಿಕೆಗಾಗಿ ಬರೆದುಕೊಟ್ಟು ಉಪಕರಿಸಿದ ಎಲ್ಲ ಬರಹಗಾರರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

— *ಅಂಬಳಿಕೆ ಹಿರಿಯಣ್ಣ*

ಆರ್. ರಾಮಕೃಷ್ಣ

ಪರಿವಿಡಿ

ಧರ್ಮ ಮತ್ತು ವಿಜ್ಞಾನ: ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ

– ಪ್ರೊ.ವಿ.ಎನ್. ಶೇಷಗಿರಿರಾವ್

ಧರ್ಮ ಎಂಬ ಪದ ಬಹಳ ಪ್ರಾಚೀನವಾದುದು. ಅದು ಎಲ್ಲ ಭಾರತೀಯರ ನಾಲಿಗೆಯ ಮೇಲೂ ಇದೆ. ಅದು ಬಹಳ ಅರ್ಥಗರ್ಭಿತವಾದ ಪದ. ಅದನ್ನು ಕುರಿತು ವಿಪುಲವಾದ ವಾದ ವಿವಾದಗಳು ನಡೆದಿವೆ. ಸಾಮಾನ್ಯವಾಗಿ ಧರ್ಮ ಎಂದರೆ ಒಂದು ಅತೀತ ತತ್ವದ ಸುತ್ತಲೂ ನಡೆದು ಬಂದ ನಂಬಿಕೆ, ನಡವಳಿಕೆ, ಅಭ್ಯಾಸ, ಪರಂಪರೆ, ಆಚಾರ-ವಿಚಾರವೆಂದು ಅರ್ಥವಾಗುತ್ತದೆ. ಆಧುನಿಕ ಕಾಲದಲ್ಲಿ ಯಾಂತ್ರೀಕರಣ, ವಿಜ್ಞಾನಗಳ ಅಗಾಧ ಬೆಳವಣಿಗೆಯ ಪರಿಣಾಮವಾಗಿ ಧರ್ಮಕ್ಕೆ ಸಾಕಷ್ಟು ಪ್ರಾಶಸ್ತ್ಯ ವಿಲ್ಲವಾಗಿದೆ ಎಂಬ ದೂರೂ ಉಂಟು. ಈ ಹಿನ್ನೆಲೆಯಲ್ಲಿ ಧರ್ಮ ಮತ್ತು ವಿಜ್ಞಾನ ಗಳನ್ನು ಕುರಿತು ಸ್ವಾಮಿ ವಿವೇಕಾನಂದರ ದೃಷ್ಟಿ ಏನೆಂಬುದನ್ನು ಇಲ್ಲಿ ವಿಶ್ಲೇಷಿಸ ಬಹುದು.

ಧರ್ಮ ಮಾನವ ಜೀವನದ ಒಂದು ಅವಶ್ಯ ಅಂಗ. ಮಾನವನ ಮೇಲೆ ಬಾಹ್ಯದಿಂದ ಹೇರಿದ ಹೊರೆಯಲ್ಲ ಅದು ; ಅದು ಅವನ ನೈಜ ಸ್ವಭಾವ ; ಅವನ ಸ್ವರೂಪದಲ್ಲಿ ಆಳವಾಗಿ ಬೇರುಬಿಟ್ಟಿರುವ ಪ್ರವೃತ್ತಿ. ಪ್ರೀತಿ, ದಯೆ, ಭಕ್ತಿ, ಸತ್ಯ, ಸೌಂದರ್ಯ, ಸೋಪಜ್ಞತೆಗಳ ಅತ್ಯುನ್ನತ ಅಭಿವ್ಯಕ್ತಿಯೇ ಧರ್ಮ ಎಂದು ವಿವೇಕಾನಂದರು ಅಭಿಪ್ರಾಯಪಡುತ್ತಾರೆ.[1] ಆದುದರಿಂದ ಧರ್ಮವನ್ನು ಅತ್ಯಂತ ಶ್ರದ್ಧೆಯಿಂದ ಅಭ್ಯಸಿಸಬೇಕು, ಪಾಲಿಸಬೇಕು ಎಂದು ಅವರು ಒತ್ತಿಹೇಳುತ್ತಾರೆ. ಧರ್ಮವೆಂದರೆ ಮೋಸವಲ್ಲ, ಮೂಢನಂಬಿಕೆಯಲ್ಲ, ಪರಿಪೂರ್ಣತೆಯೆಡೆಗೆ ಪಯಣಿಸುವುದು. ಅನಂತಜ್ಞಾನವನ್ನು ದಿವ್ಯಾನಂದವನ್ನು ಹೊಂದುವುದು ಧರ್ಮವೆನಿಸುವುದು. ಅದರ ಆಚರಣೆಯಿಂದ ಪಡೆಯಬಹುದಾದ ಆನಂದಕ್ಕಿಂತ ಹೆಚ್ಚಿನದಾದ ಆನಂದ ಮತ್ತೊಂದು ಇಲ್ಲ ಎಂದು ವಿವೇಕಾನಂದರು ಉದ್ಘೋಷಿಸುತ್ತಾರೆ. ಭಾರತೀಯರು ಎಲ್ಲವನ್ನು ಧರ್ಮದ ಮೂಲಕವೇ ಅರ್ಥಮಾಡಿ ಕೊಳ್ಳುತ್ತಾರೆ. ವಿವೇಕಾನಂದರ ಮಾತುಗಳಲ್ಲಿ "ಭರತಖಂಡದ ಮೂಲ ಧರ್ಮದಲ್ಲಿದೆ. ನಾವು ಅದನ್ನು ಬಿಟ್ಟು ಬೇರೆಯದನ್ನು ಒಪ್ಪಿಕೊಳ್ಳ ಎನ್ನುವುದಕ್ಕೆ ಆಗುವುದಿಲ್ಲ. ಇತರ ದೇಶದವರಿಗೆ ಧರ್ಮ ಹಲವು ವಸ್ತುಗಳಲ್ಲಿ ಒಂದು. ಆದರೆ ಭಾರತೀಯರಿಗಾದರೋ ಅದಕ್ಕಾಗಿ ಉಳಿದವೆಲ್ಲ."[2]

ಧರ್ಮವನ್ನು ಕುರಿತು ವಿವೇಕಾನಂದರ ದೃಷ್ಟಿ ವೈಜ್ಞಾನಿಕವಾದುದು, ಬುದ್ಧಿಬದ್ಧವಾದುದು ಹಾಗೂ ಕ್ರಾಂತಿಕಾರಿಯಾದುದು. ಅವರ ಪ್ರಕಾರ ವಿಜ್ಞಾನ ಮತ್ತು ಧರ್ಮಗಳೆರಡರ ಗುರಿಯೂ ಒಂದೇ ಆಗಿದೆ. ಅದು ಏಕತೆಯನ್ನು ಹುಡುಕುವುದಾಗಿದೆ. ಭೌತಿಕ ಜಗತ್ತಿನ ಮೂಲವನ್ನು ಕುರಿತು ವಿಜ್ಞಾನ ಪರಿಶೀಲಿಸಿದರೆ, ಧರ್ಮ ಆಧ್ಯಾತ್ಮಿಕ ಜಗತ್ತಿನ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತದೆ. ಅವರ ಪ್ರಕಾರ ಎಲ್ಲಾ ಜ್ಞಾನವೂ ಒಂದು ಅರ್ಥದಲ್ಲಿ ಧರ್ಮವಾಗಿದೆ ; ಇನ್ನೊಂದು ಅರ್ಥದಲ್ಲಿ ವಿಜ್ಞಾನವಾಗಿದೆ. ಅವುಗಳೆರಡರ ನಡುವೆ ಇರುವ ವ್ಯತ್ಯಾಸ, ಅವು ಅನ್ವಯಿಸಿಕೊಳ್ಳುವ ಕಾರ್ಯ ವಿಧಾನಗಳಲ್ಲಿದೆ. ವಿಜ್ಞಾನ ಪ್ರಾರಂಭದಲ್ಲಿ ವಿಶ್ಲೇಷಣಾತ್ಮಕವಾಗಿದ್ದರೂ, ಅದರ ಗುರಿ ಸಂಶ್ಲೇಷಣಾತ್ಮಕ ಜ್ಞಾನವನ್ನು ನೀಡುವುದಾಗಿದೆ. ಧರ್ಮದ ಪ್ರಾರಂಭ ಸಂಶ್ಲೇಷಣಾತ್ಮಕ ಜ್ಞಾನ ಅದರ ಕೊನೆಯೂ ಅದೇ. ಧರ್ಮವನ್ನು ವೈಜ್ಞಾನಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳುವುದನ್ನು ವಿವೇಕಾನಂದರು ಒತ್ತಿ ಹೇಳುತ್ತಾರೆ. ಅವರು ವೈಜ್ಞಾನಿಕ ಸ್ಫೂರ್ತಿಯ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತಕರಾಗಿದ್ದಾರೆ. ಭೌತಿಕ ಸತ್ಯಗಳ ಸಂಶೋಧನೆಗಿಂತ, ಆಧ್ಯಾತ್ಮಿಕ ಸತ್ಯದ ಸಂಶೋಧನೆಯ ಕಡೆಗೇ ಅವರ ಒಲವು ಹೆಚ್ಚು. ಧರ್ಮವನ್ನು ಕುರಿತು ಪಾಶ್ಚಾತ್ಯರ ಮತ್ತು ಪೌರ್ವಾತ್ಯರ ದೃಷ್ಟಿಯನ್ನು ಬಹಳ ಸ್ವಾರಸ್ಯವಾಗಿ ಹೀಗೆ ವಿವರಿಸುತ್ತಾರೆ. ಬಹುತೇಕ ಪಾಶ್ಚಾತ್ಯರ ಪ್ರಕಾರ, ಮಾನವ ಪ್ರಧಾನತಃ ಭೌತಿಕ ಶರೀರ. ಆತ್ಮವೆಂಬುದು ಭೌತಿಕ ಶರೀರದ ಒಂದು ಉಪಕ್ರಿಯೆ ಅಷ್ಟೇ. ಆದರೆ ಪೌರ್ವಾತ್ಯರ ಪ್ರಕಾರ ಮಾನವ ಪ್ರಧಾನತಃ ಅಭೌತಿಕ ಆತ್ಮ. ಶರೀರ ಆತ್ಮದ ಒಂದು ಉಪಕರಣ ಮಾತ್ರ.

ಧರ್ಮದಲ್ಲಿ ಅತಿಯಾದ ಭಾವುಕತೆಯನ್ನು, ಭಾವೋದ್ವೇಗ–ಭಾವೋದ್ರೇಕಗಳನ್ನು, ಗುಪ್ತ ವಿದ್ಯೆಯನ್ನು ಗುತ್ತಿಗೆಯನ್ನು ವಿವೇಕಾನಂದರು ಖಾರವಾಗಿ ಖಂಡಿಸುತ್ತಾರೆ. ನಮಗೆ ಬೇಕಾಗಿರುವುದು, ಕೆಲವರಿಗೆ ಮಾತ್ರ ಮೀಸಲಾದ ಗುಪ್ತವಿದ್ಯೆಯಲ್ಲ; ಭಾವೋದ್ವೇಗದ ಅನುಭಾವವೂ ಅಲ್ಲ ; ಮಾನವನನ್ನು ಮಾನವನನ್ನಾಗಿ ರೂಪಿಸುವ ಧರ್ಮ ಎಂದು ಅವರು ಸಾರುತ್ತಾರೆ.[೩] ಸತ್ಯ ಸಾರ್ವಜನಿಕವೂ ಸಾರ್ವತ್ರಿಕವೂ ಆಗಿರಬೇಕು. ಅದನ್ನು ಮುಕ್ತವಾಗಿ ಆರಾಧಿಸಬೇಕು. ಮಾನವ ಮಾನವರ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸುವಂತಹ ಧರ್ಮವನ್ನು ವಿವೇಕಾನಂದರು ತೀಕ್ಷ್ಣವಾದ ಮಾತುಗಳಲ್ಲಿ ಖಂಡಿಸುತ್ತಾರೆ. ಅಂತಹ ಧರ್ಮಗಳನ್ನು ಅವರು ಅಡಿಗೆಮನೆಯ ಧರ್ಮ ಎಂದು ಕರೆದಿದ್ದಾರೆ. ಸತ್ಯವನ್ನು ಕುರಿತ ಭಾವ ಮತ್ತು ಪ್ರೀತಿ ಅಂಧಾಭಿಮಾನ ಮತ್ತು ಭಾವೋದ್ರೇಕವಾಗಿ ಪರಿವರ್ತನೆಯಾಗದಂತೆ ಎಚ್ಚರವಹಿಸಬೇಕು. ಭಾವ ಮಿತಿಮೀರಿದಾಗ ಮಾನವ ಶರೀರ ದುರ್ಬಲವಾಗುತ್ತದೆ. ಅನುಭವದ ಸತ್ಯಾಸತ್ಯತೆಯನ್ನು ಅತ್ಯಂತ ಜಾಗರೂಕತೆಯಿಂದ ತೂಗಬೇಕು ಎಂಬುದು ವಿವೇಕಾನಂದರ ಸ್ಪಷ್ಟ ಅಭಿಮತ.

ಧರ್ಮದಲ್ಲಿ ಎರಡು ಭಾಗಗಳು. ಒಂದು ಬಾಹ್ಯ ಆಚರಣೆ, ಮತ್ತೊಂದು ಸಾರ. ಈ ಭಿನ್ನತೆಯನ್ನು ವಿಶೇಷವಾಗಿ ಗುರುತಿಸಬೇಕು ಎಂದು ವಿವೇಕಾನಂದರು

ವಿಚಾರವಂತರನ್ನು ಕೇಳುತ್ತಾರೆ. ಧರ್ಮದ ಬಾಹ್ಯ ಆಚರಣೆ, ಅದರ ಕ್ರಿಯಾವಿಧಿಗಳನ್ನು ಮತಾಚಾರವನ್ನು, ಒಟ್ಟಿನಲ್ಲಿ ಸಂಪ್ರದಾಯವನ್ನು ಹೊಂದಿರುತ್ತದೆ. ಕರ್ಮಾಚಾರ ಪದ್ಧತಿಗಳು ಪ್ರಧಾನವಾಗಿರುವ ಧರ್ಮದಲ್ಲಿ ದೇವರು ಅಷ್ಟಾಗಿ ಪ್ರೀತಿಯ ವಸ್ತುವಾಗಿರುವುದಿಲ್ಲ. ಅಂತಹ ಧರ್ಮ ಮತ್ಯಾವುದನ್ನೋ ಪಡೆಯುವ ಒಂದು ವ್ಯಾಪಾರೀ ಮಾರ್ಗವಾಗಿಬಿಡುತ್ತದೆ. ಅದು ಅಂಗಡಿಯ ಧರ್ಮವಾಗುತ್ತದೆ. ತಂತ್ರಪಂಥವನ್ನು ವಿವೇಕಾನಂದರು ಖಾರವಾಗಿ ಖಂಡಿಸುತ್ತಾರೆ. ಏಕೆಂದರೆ ಅದರ ಕರ್ಮಾಚಾರಗಳು ಅಮಾನುಷವಾಗಿವೆ. ಅನೈತಿಕತೆಯ ಅಂಚನ್ನು ಹಿಡಿಯುವ ಅಶ್ಲೀಲ ಕಾರ್ಯವಿಧಾನಗಳು ಅವು. ಹಾಗೆಯೇ ಆಹಾರ ಹವ್ಯಾಸಗಳನ್ನು ಧರ್ಮಕ್ಕೆ ಗಂಟುಹಾಕುವುದನ್ನು ವಿವೇಕಾನಂದರು ವಿರೋಧಿಸುತ್ತಾರೆ. ಮಾಡಬಾರದ್ದನ್ನು ಮಾಡಿದರೂ, ನದಿತೀರ್ಥಗಳ 'ಪವಿತ್ರ' ಸ್ನಾನ, ಮಾನವನನ್ನು ಪುನೀತನನ್ನಾಗಿ ಮಾಡುತ್ತದೆ, ಸ್ವರ್ಗಕ್ಕೇರಿಸುತ್ತದೆ ಎಂಬ ಅನುಕೂಲ ತರ್ಕವನ್ನು ಅವರು ಖಂಡಿಸುತ್ತಾರೆ. ಧರ್ಮ ಅವೈಚಾರಿಕ ಅಂಧ ಪದ್ಧತಿಯಾಗಬಾರದು ; ಪಟ್ಟಬದ್ಧ ಹಿತಾಸಕ್ತಿಗಳ ಜಾತಿಕಟ್ಟುಪಾಡುಗಳ ಬಿಗಿ ವ್ಯವಸ್ಥೆಯಾಗಬಾರದೆಂದು ವಿವೇಕಾನಂದರು ಎಚ್ಚರಿಸುತ್ತಾರೆ.

ಧರ್ಮದ ಸಾರ ಮಾನವೀಯತೆ, ದಯೆ, ಪ್ರೀತಿ. ಧರ್ಮದ ಸಾರವನ್ನು ಅರಿತು ಸಾಕ್ಷಾತ್ಕರಿಸಿಕೊಂಡಿರುವವನು ಧರ್ಮಾತ್ಮ. ಅವನು ಹೃದಯವಂತಿಕೆಯ ಪ್ರತಿರೂಪನಾಗಿರುತ್ತಾನೆ. ನ್ಯಾಯಪರತೆಯೇ ಅವನ ಜೀವಾಳ. ವಸ್ತುನಿಷ್ಠ ಧೋರಣೆ, ನಿರ್ಲಿಪ್ತತೆ, ವೈಜ್ಞಾನಿಕ ಮನೋಭಾವ, ಪರಿಪಕ್ವತೆ ಅವನಿಗೆ ತೀರ ಸಹಜ. ದ್ವೇಷ, ಕ್ಷುಲ್ಲಕತನ ಸ್ವಾರ್ಥಗಳ ಮೋಡಗಳನ್ನು ಅವನು ತನ್ನ ದಿವ್ಯಾಸ್ತ್ರವಾದ 'ಪ್ರೇಮ' ದಿಂದ ಚದುರಿಸಿಬಿಡುತ್ತಾನೆ. ಸಜ್ಜನಿಕೆ, ಸೌಜನ್ಯ, ಸೌಮನಸ್ಯ, ಸಹೃದಯತೆ, ಪ್ರಾಂಜಲ ಮನಸ್ಸು ಇವಕ್ಕೆ ಮತ್ತೊಂದು ಹೆಸರೇ ಧರ್ಮ. ನಿಜವಾದ ಧಾರ್ಮಿಕವಂತ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಉದಾತ್ತ ಚೇತನನಾಗಿದ್ದಾನೆ. ಇತರರ ಶ್ರೇಯಸ್ಸನ್ನು ಅವನು ಅಂತಃಕರಣ ಪೂರ್ವಕವಾಗಿ ಬಯಸುತ್ತಾನೆ. ಒಟ್ಟಿನಲ್ಲಿ ಅವನು ಅಭೂತಪೂರ್ವವಾದ ಅನನ್ಯ ಆನಂದದ ಖಣಿಯಾಗಿರುತ್ತಾನೆ.

ಧರ್ಮದ ಸಾರವನ್ನು ಅಲಕ್ಷಿಸಿ, ತೊಗಟೆಯಾದ ಬಾಹ್ಯ ಆಚಾರವನ್ನು ದೊಡ್ಡದನ್ನಾಗಿ ಮಾಡಿಕೊಂಡು, ಧರ್ಮವನ್ನೇ ಅಲ್ಲಗಳೆಯಬೇಡಿ ಎಂದು ವಿವೇಕಾನಂದರು ಆಧುನಿಕ ವಿಚಾರವಂತರನ್ನು ಕೇಳುತ್ತಾರೆ. ಆಧ್ಯಾತ್ಮಿಕ ಭಾವನೆಯಲ್ಲಿ ಪರಮ ಸಂತೋಷವನ್ನು ಪಡೆಯುವವರನ್ನು ವಿರೋಧಿಸುವ ಹಕ್ಕು ಯಾರಿಗೂ ಇಲ್ಲ. ಧಾರ್ಮಿಕ ನಂಬಿಕೆಗೆ ವೈಜ್ಞಾನಿಕ ಹಾಗೂ ವೈಚಾರಿಕ ನೆಲಗಟ್ಟನ್ನು ಒದಗಿಸುವುದನ್ನು ವಿವೇಕಾನಂದರು ಒತ್ತಿಹೇಳುತ್ತಾರೆ: stand up and reason out, having no blind faith. Religion is a question of being and becoming, not of believing.

ದೇವರನ್ನು ನಂಬದ ಎಷ್ಟೋ ಆಧ್ಯಾತ್ಮ ಜೀವಿಗಳಿವೆ. ಎಷ್ಟೋ ಮೃದುಹೃದಯದ

ಜೀವಿಗಳಿವೆ. ನಾವು ತಿಳಿದುಕೊಂಡಿರುವುದಕ್ಕಿಂತ ಹೆಚ್ಚಾಗಿ ಅವರು ದೇವರನ್ನು ತಿಳಿದುಕೊಂಡಿರುತ್ತಾರೆ ಎಂದು ವಿವೇಕಾನಂದರು ಸಾರುತ್ತಾರೆ. ಅವರು ಪ್ರತಿಪಾದಿಸಿದ ಧರ್ಮವನ್ನು 'ಮಾನವೀಯ ಧರ್ಮ'ಎನ್ನಬಹುದು. "ಎಲ್ಲಕ್ಕೂ ಮೊದಲ ಪೂಜೆ ನಮ್ಮ ಸುತ್ತಲಿರುವವರ ಪೂಜೆ, ಅವರೇ ನಮ್ಮ ದೇವರು" ಎಂದು ವಿವೇಕಾನಂದರು ಸದಾ ಜನರಿಗೆ ಬೋಧಿಸುತ್ತಾರೆ. "ತ್ಯಾಗವಿಲ್ಲದೆ ಯಾವುದೂ ಸಾಧ್ಯವಿಲ್ಲ. ಇತರರಿಗೆ ನೀವು ಸಹಾಯ ಮಾಡಬೇಕೆಂದು ಇದ್ದರೆ ಮೊದಲು ನಿಮ್ಮ ಆತ್ಮವಿಸರ್ಜನೆ ಆಗಬೇಕು. ....ನಿಮ್ಮ ಸ್ವಂತ ಮೋಕ್ಷವನ್ನು ಬಿಸಾಡಿ."[೪] ಮಾನವೀಯ ಅಂಶಗಳನ್ನು ಒಳಗೊಂಡಿರುವ ಜಾಗತಿಕ ಧರ್ಮದ ಅವಶ್ಯಕತೆಯನ್ನು ವಿವೇಕಾನಂದರು ಒತ್ತಿ ಹೇಳುತ್ತಾರೆ.

ಹೀಗೆ, ಧಾರ್ಮಿಕಕ್ಷೇತ್ರದಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದವರು ಸ್ವಾಮಿ ವಿವೇಕಾನಂದರು. ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿ ಧಾರ್ಮಿಕವಂತನ ಉಸಿರಾಗ ಬೇಕು. ವೈಚಾರಿಕ ಬುದ್ಧಿಯನ್ನು ಅನುಸರಿಸುವ ಪ್ರಯತ್ನದಲ್ಲಿ ಮಾನವ ನಾಸ್ತಿಕನಾದರೂ ಚಿಂತೆಯಿಲ್ಲ ಎಂದು ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಇಲ್ಲಿಯವರೆಗೂ ಹೋಗುತ್ತದೆ ಅವರ ವೈಚಾರಿಕ ನಿಷ್ಠೆ! "ವಿಚಾರ ಬುದ್ಧಿ ತತ್ವ ಮತ್ತು ಧರ್ಮಗಳಲ್ಲಿನ ಹಳೆಯ ಮೂಢನಂಬಿಕೆಗಳನ್ನು ಗುಡಿಸಿ ಹಾಕಲು ಅತ್ಯಾವಶ್ಯಕ".[೫] ವೈಚಾರಿಕತೆಯನ್ನು ಹೂಳುವ ಅಥವಾ ಅದರ ಮಹತ್ವವನ್ನು ಉಪೇಕ್ಷಿಸುವ ಗುಪ್ತವಿದ್ಯೆಯ (occultism) ಪ್ರತಿಪಾದಕರನ್ನು ವಿವೇಕಾನಂದರು ತೀವ್ರವಾಗಿ ಖಂಡಿಸುತ್ತಾರೆ.

ಅಡಿ ಟಿಪ್ಪಣಿಗಳು

೧. ಸ್ವಾ. ವಿ. ಕೃ. ಶ್ರೇ. ಸಂಪುಟ ೩, ಪು ೧೪
(ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ)

೨. ಸ್ವಾ. ವಿ. ಜೀ. ಚ, ಪು ೪೩೮
(ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೧೯೬೪)

೩. ಲೆಟರ್ಸ್ ಫ್ರಂ ಕೊಲೊಂಬೋ ಟು ಅಲ್ಮೋರಾ, ಪು ೧೩೭

೪. ಸ್ವಾ. ವಿ. ಜೀ. ಚ, ಪು ೫೧೦-೫೧೧

೫. ಸ್ವಾ. ವಿ. ಕೃ. ಶ್ರೇ, ಸಂಪುಟ ೪, ಪು ೧೫೧.

ವಿಚಾರವಾದಿಯಾಗಿ ಸ್ವಾಮಿ ವಿವೇಕಾನಂದರು : ಮೂಢನಂಬಿಕೆಗಳ ಕಟು ವಿಮರ್ಶೆ

—ಡಾ. ಎಸ್. ವೆಂಕಟೇಶ್

ಧಾರ್ಮಿಕ ಕ್ಷೇತ್ರದಲ್ಲಿ ವೈಚಾರಿಕತೆಯ ಮಹತ್ವವನ್ನು ಒತ್ತಿ ಹೇಳಿದ ಅಗ್ರಗಣ್ಯರಲ್ಲಿ ಸ್ವಾಮಿ ವಿವೇಕಾನಂದರು ಒಬ್ಬರು. ಅವರ ಪ್ರಕಾರ ಬುದ್ಧಿಯ ಔಚಿತ್ಯವನ್ನು ಪ್ರಶ್ನಿಸುವ ಹಕ್ಕು ಧರ್ಮಕ್ಕಿಲ್ಲ. ವೈಚಾರಿಕ ಬುದ್ಧಿಯ ಬೆನ್ನುಹತ್ತಿದ ವ್ಯಕ್ತಿ ನಾಸ್ತಿಕನಾದರೂ ಪರವಾಗಿಲ್ಲ ಆದರೆ ಆತ ಮೂಢನಂಬಿಕೆಗಳ, ಗುಪ್ತವಿದ್ಯೆಯ ಪರಿಪಾಲಕನಾಗದಿದ್ದರೆ ಸಾಕು ಎನ್ನುತ್ತಾರೆ.

ಎಲ್ಲಾ ಕ್ಷೇತ್ರಗಳಿಗಿಂತ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮೋಸಗೊಳಿಸುವುದು ಸುಲಭ. ಆ ಕಾರಣ ಎಲ್ಲಾ ಕ್ಷೇತ್ರಕ್ಕಿಂತ ಅಲ್ಲಿ ವೈಚಾರಿಕ ಬುದ್ಧಿಯ ಅವಶ್ಯಕತೆ ಹೆಚ್ಚು. ವೈಚಾರಿಕ ಬುದ್ಧಿ ಇಲ್ಲದಿರುವ ವ್ಯಕ್ತಿ ಬೇಗ ಆಧ್ಯಾತ್ಮಿಕತೆಯ ಮುಖವಾಡವಿರುವ ಮೂಢ ನಂಬಿಕೆಗೆ ಒಳಗಾಗುತ್ತಾನೆ.

ಮಾನವ ಸಮಾಜ ರೂಪುಗೊಂಡ ದಿನದಿಂದಲೂ ಮೂಢನಂಬಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಮೇಲೆ ಪರಿಣಾಮವನ್ನು ಬೀರುತ್ತಾ ಬಂದಿವೆ. ತಾತ್ವಿಕ ತಳಹದಿ ಇಲ್ಲದ ಅರ್ಥಶೂನ್ಯವಾದ ನಂಬಿಕೆಗಳ ಕ್ಷೇತ್ರದಲ್ಲಂತೂ ಮೂಢನಂಬಿಕೆಗಳ ಪ್ರಭಾವ ಅತಿ ಹೆಚ್ಚು. ಮೂಢನಂಬಿಕೆಗಳ ಹಂದರ ಬಹಳ ವಿಸ್ತಾರವಾದುದು. ಅದು ಯಾವುದೇ ಒಂದು ಜನಾಂಗಕ್ಕೆ ಅಥವಾ ದೇಶಕ್ಕೆ ಸೀಮಿತವಾಗಿಲ್ಲ.

ವೈಜ್ಞಾನಿಕವಾಗಿ ಸಮರ್ಥಿಸಲಾಗದ ನಂಬಿಕೆಗಳೇ ಮೂಢನಂಬಿಕೆ ಎನ್ನಬಹುದಾಗಿದೆ. ಮೂಢನಂಬಿಕೆಯನ್ನು ಕುರಿತು ವಿ. ಕೆ. ಕ್ರಾಪೆಯವರು ಯಾವ ನಂಬಿಕೆ ಯಾವ ಆಧಾರಿತ ಧರ್ಮಗಳಲ್ಲೂ ಮಾನ್ಯತೆ ಪಡೆಯದಿದ್ದರೂ ಪ್ರಚಲಿತವಾಗಿರುವುದೇ ಮೂಢನಂಬಿಕೆ ಎನ್ನುತ್ತಾರೆ.[೧]

ಮೂಢನಂಬಿಕೆಗಳು ಹಲವಾರು. ಮಾಟ ಮಂತ್ರಗಳು ಮೂಢನಂಬಿಕೆಯ ತವರೂರು. ಮರ, ಕಲ್ಲುಗಳ ಪೂಜೆಗಳು. ಶಕುನಗಳು, ಕೆಲವು ನದಿಗಳ ಸ್ನಾನದಿಂದ ಪುಣ್ಯ ಬರುವುದಾಗಿ ನಂಬಿಕೆ, ಶಕ್ತಿ ವಶಪಡಿಸಿಕೊಳ್ಳಲು. ನಿಧಿ ಪಡೆಯಲು ನರಬಲಿ.

ಶಿಶುಹತ್ಯೆ, ಪ್ರಾಣಿ ಬಲಿ, ಸತಿ ಪದ್ಧತಿ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ಮುಂತಾದವೆಲ್ಲಾ ಧಾರ್ಮಿಕ ಕ್ಷೇತ್ರದಲ್ಲಿ ಬರುವಂತಹ ಮೂಢನಂಬಿಕೆಗಳಾಗಿವೆ. ಇಂದಿಗೂ ಸಹ ಇವೆಲ್ಲ ಒಂದಲ್ಲ ಒಂದು ಧರ್ಮದಲ್ಲಿ ಜೀವಂತವಾಗಿರುವುದು ಮಾನವನ ವೈಜ್ಞಾನಿಕ ಪ್ರಜ್ಞೆಗೆ ಸವಾಲುಗಳಾಗಿ ನಿಂತಿವೆ.

ಮೂಢನಂಬಿಕೆ ಮಾನವನ ದೊಡ್ಡ ಶತ್ರು. ಆದರೆ ಸ್ವಮತಭ್ರಾಂತಿ ಅದಕ್ಕಿಂತಲೂ ಹೆಚ್ಚು ಎಂದು ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ.

ಆತ್ಮನಿಂದೆ ಮಾಡಿಕೊಳ್ಳುವುದು, ಕಾಲ್ಪನಿಕ ದೇವರೆದುರಿಗೆ ಅಳುವುದು, ಬೇಡುವುದು ಇಂತಹ ಅನೇಕ ಸಂಕುಚಿತ ಭಾವಗಳು ನಮ್ಮ ಮನಸ್ಸಿನಲ್ಲಿರುವ ಮೂಢನಂಬಿಕೆಗಳು.[೨] ಬಾಲ್ಯದಲ್ಲಿ ನಮ್ಮ ಮನಸ್ಸಿನ ಮೇಲೆ ಮೂಢನಂಬಿಕೆಗಳು ಬೀರಿದ ಪ್ರಭಾವದಿಂದಾಗಿ ವ್ಯಕ್ತಿ ಸಂಕುಚಿತನಾಗುತ್ತಾನೆ. ಆತ ದುರ್ಬಲನಾಗಿ ಮಾನಸಿಕ ಸ್ಥೈರ್ಯವನ್ನು ಕಳೆದು ಕೊಂಡು ನಿರುಪಯುಕ್ತನಾಗಿ ಸಮಾಜಕ್ಕೆ ಮಾರಕವಾಗುತ್ತಾನೆ.

ಯಾರು ದುರ್ಬಲರೋ ಅವರಿಗೆ ಬೇಕಾಗಿರುವುದು ಅವರನ್ನು ಜಾಗ್ರತಗೊಳಿಸು ವಂತಹ ಮಾತುಗಳು, "ಶುದ್ಧಾತ್ಮನು ನೀನು, ಜಾಗೃತನಾಗು, ಏಳು ಹೇ ಸರ್ವಶಕ್ತನೇ ನಿದ್ದೆ ನಿನಗೆ ತರವಲ್ಲ. ನೀನು ದುಃಖಿ ಎಂದು, ಹೀನನೆಂದು ಆಲೋಚಿಸದಿರು. ಸರ್ವ ಶಕ್ತನೇ, ಏಳು ಜಾಗೃತನಾಗು" ನಿನ್ನ ಸ್ವಭಾವವನ್ನು ಪ್ರಕಟಪಡಿಸಿ ನೀನು ಹೇಡಿಯೆಂದು ತಿಳಿಯುವುದು ನಿನಗೆ ತರವಲ್ಲ. ದುರ್ಬಲನು ನೀನೆಂದು ತಿಳಿಯುವುದು ನಿನಗೆ ತರವಲ್ಲ. ಇದನ್ನು ಮನಸ್ಸಿಗೆ ಹೇಳಿಕೊಳ್ಳಿ[೩] ಎಂದು ವಿವೇಕಾನಂದರು ಘೋಷಿಸುತ್ತಾರೆ. ಮುಂದುವರಿದು ಅವರು ಈ ರೀತಿ ಹೇಳಿದ್ದಾರೆ. "ಮುಟ್ಟಬೇಡ ಎಂಬುದೇ ನಮ್ಮ ಧರ್ಮವಾಗಿದೆ"[೪] ಇದನ್ನೇ ಜೀವನವೆಲ್ಲ ಹಾಡುತ್ತಿರುವೆವು. "ಕಳೆದ ಸಾವಿರಾರು ವರ್ಷ ದಿಂದಲೂ ಬಲಗೈಯಿಂದ ಊಟ ಮಾಡುವುದೇ, ಎಡಗೈಯಿಂದ ಊಟ ಮಾಡುವುದೇ, ನೀರನ್ನು (ತೀರ್ಥ) ಎಡಗಡೆಯಿಂದ ತೆಗೆದುಕೊಳ್ಳುವುದೇ ಅಥವಾ ಬಲಗಡೆಯಿಂದ ತೆಗೆದುಕೊಳ್ಳುವುದೇ ಎಂಬ ಮಹಾಪ್ರಶ್ನೆಗಳನ್ನು ಚರ್ಚೆ ಮಾಡುತ್ತಿರುವುದೇ ಧರ್ಮವಾಗಿದೆ."[೫] ಸಂಪ್ರದಾಯಗಳೇ ಧರ್ಮವೆಂದು ತಿಳಿದುಕೊಂಡಿರುವುದು ಒಂದು ಮೂಢನಂಬಿಕೆ. "ನಮ್ಮಂತಹ ಮಂಡೂಕಗಳನ್ನು ನಾನು ಎಲ್ಲಿಯೂ ನೋಡಿಲ್ಲ. ಪರದೇಶದಿಂದ ಏನೇ ಹೊಸ ವಿಷಯ ಬಂದರೂ ಅದನ್ನು ಅಮೆರಿಕಾ ಮೊದಲು ಸ್ವೀಕರಿಸುವುದು. ಆದರೆ ನಮ್ಮ ಹಾಗೆ ಪ್ರಪಂಚದಲ್ಲಿ ಯಾರೂ ಇಲ್ಲ."[೬]

ಹೊಸ ವಿಚಾರವನ್ನು ಸ್ವಾಗತಿಸದೇ ಇರುವುದು ಸಹ ಮೂಢನಂಬಿಕೆಯ ಒಂದು ಮುಖ ಎಂದು ವಿವೇಕಾನಂದರು ತಿಳಿದಿದ್ದರು. ಮಾನವನನ್ನು ರಕ್ಷಿಸದೆ ಪಶು ಪಕ್ಷಿಗಳನ್ನು ರಕ್ಷಿಸುವ ಸೋಗನ್ನು ಒಂದು ಮೂಢನಂಬಿಕೆ ಎಂದು ವಿವೇಕಾನಂದರು ಭಾವಿಸಿದ್ದರು. "ಹೊರಗೆ ಬಂದರೆ ಜಾತಿ ಕೆಡುವುದು. ನೂರಾರು ವರ್ಷಗಳಿಂದ ಎಷ್ಟಿದವೆ ಹೆಚ್ಚು ಬೆಳೆದು ಕಲ್ಲಾದ ಮೂಢನಂಬಿಕೆಯ ಹೊರೆಯನ್ನು ತಲೆಯ ಮೇಲೆ ಹೊತ್ತಿರುವಿರಿ.

ನೂರಾರು ವರ್ಷಗಳಿಂದಲೂ ಈ ಆಹಾರ ಮುಟ್ಟಲು ಯೋಗ್ಯವೋ, ಆ ಆಹಾರ ಮುಟ್ಟಲು ಯೋಗ್ಯವೋ ಎಂಬ ಘನ ವಿಚಾರವನ್ನು ವಿಮರ್ಶಿಸುವುದರಲ್ಲೇ ನಿಮ್ಮ ಬುದ್ಧಿವಂತಿಕೆಯನ್ನು ವ್ಯಯ ಮಾಡಿರುವಿರಿ"[೭] ಎಂದು ವಿವೇಕಾನಂದರು ವಿಷಾದದಿಂದ ನುಡಿದಿದ್ದಾರೆ. ಆಹಾರವನ್ನು ಕುರಿತು ಉಂಟಾಗಿರುವ ಮೂಢನಂಬಿಕೆ ಇಂದಿಗೂ ಹಾಗೆಯೇ ಉಳಿದುಕೊಂಡಿರುವುದು ಸಮಾಜದಲ್ಲಿನ ಅಂಧಶ್ರದ್ಧೆಯನ್ನು ತೋರಿಸುತ್ತದೆ.

ಪವಾಡಗಳನ್ನು ಕುರಿತು ಮಾತನಾಡುತ್ತಾ ವಿವೇಕಾನಂದರು ಈ ರೀತಿ ಹೇಳುತ್ತಾರೆ "ಧರ್ಮದಲ್ಲಿ ಪವಾಡಗಳಿಗೆ ಯಾವ ಸ್ಥಾನವೂ ಇರಕೂಡದು. ಪವಾಡಗಳನ್ನು ಮಾಡುತ್ತೇವೆ ಎನ್ನುವವರೆಲ್ಲಾ ಭ್ರಷ್ಟರು, ಆಧ್ಯಾತ್ಮಿಕ ಜೀವನದ ತಳಹದಿಯೇ ಶುದ್ಧ ಚಾರಿತ್ರ್ಯ"[೮] "ಪ್ರತಿ ಒಂದು ಕಾರ್ಯಕ್ಕೆ ಒಂದು ಕಾರಣ ಇರಬೇಕೆಂಬ ಸಾರ್ವತ್ರಿಕ ಕಾರ್ಯಕಾರಣವಾದ ವಿಜ್ಞಾನದ ಬೆನ್ನೆಲುಬು. ಪವಾಡಗಳಲ್ಲಿನ ನಂಬಿಕೆ ವೈಜ್ಞಾನಿಕ ಸ್ಫೂರ್ತಿಗೆ ವಿರುದ್ಧವಾದುದು. ಪವಾಡಕ್ಕೂ ಧರ್ಮಕ್ಕೂ ಯಾವ ಸಂಬಂಧವಿಲ್ಲ; ಇರಕೂಡದು"[೯] ಎನ್ನುವುದು ವಿವೇಕಾನಂದರ ನಿಶ್ಚಿತ ಅಭಿಪ್ರಾಯ. ವ್ಯಕ್ತಿ ಯಾವಾಗ ಮಾಯ-ಮಂತ್ರ, ಪವಾಡಗಳ ಕಡೆ ಮನಸ್ಸು ಕೊಡುವನೋ ಆಗ ದೇವರನ್ನು ಮರೆಯುತ್ತಾನೆ. ಹಣ ಕೀರ್ತಿಗಳ ಬಲೆಗೆ ಬಿದ್ದು ತನ್ನ ನಿಜ ಸ್ವರೂಪವನ್ನು ಮರೆಯುತ್ತಾನೆ. ಅಂಥವರಿಂದ ಸಮಾಜಕ್ಕೆ ಬಹಳ ಕೆಡಕಾಗುವುದರಿಂದ ಅವರಿಂದ ದೂರವಿರಬೇಕೆಂದು ವಿವೇಕಾನಂದರು ಜನರನ್ನು ಎಚ್ಚರಿಸುತ್ತಾರೆ. ಮೂಢನಂಬಿಕೆಗಳಿಂದ ಹೊರಬರಲು ವಿವೇಕಾನಂದರು ಸೂಚಿಸಿರುವ ದಾರಿ ಎಂದರೆ ವೈಜ್ಞಾನಿಕ ಮನೋಬುದ್ಧಿಯನ್ನು ರೂಢಿಸಿಕೊಳ್ಳುವುದು ಹಾಗೂ ಪ್ರೇಮಮಯ ಜೀವನ.

ಮೂಢನಂಬಿಕೆ ಮಾನವ ತನ್ನ ಸಹಜ ಸ್ವಭಾವದ ಪಾವಿತ್ರ್ಯತೆಯನ್ನು ಕಳೆದು ಕೊಳ್ಳುವಂತೆ ಮಾಡುವುದು. ಯುಕ್ತಿ ದೇವರು ಕೊಟ್ಟಿರುವ ಶ್ರೇಷ್ಠವಾದ ಬಹುಮಾನ. ಅದನ್ನು ಅಲ್ಲಗಳೆಯಲಾಗುವುದಿಲ್ಲ. ಬರಿ ಕೇಳಿದ್ದನ್ನೇ ನಂಬದೆ ಈಶ್ವರನ ವರಪ್ರಸಾದ ವಾದ ವಿವೇಚನೆಯಿಂದ ಅದನ್ನು ವಿಶ್ಲೇಷಿಸಬೇಕು. ಯುಕ್ತಿ ವಿರೋಧವಾಗಿ ನಂಬುವುದು ಈಶ್ವರನಿಂದೆ ಎನ್ನುತ್ತಾರೆ ವಿವೇಕಾನಂದರು. ವಿಚಾರದ ಪ್ರಾಮುಖ್ಯತೆಯನ್ನು ಅಲ್ಲಗಳೆದಾಗ ಮಾನವ ಮೃಗಕ್ಕೆ ಸಮನಾಗುವನು, ಜ್ಞಾನೇಂದ್ರಿಯಗಳನ್ನು ಅಧೋಗತಿಗೆ ಎಳೆದು ನಾಶವಾಗುವನು ಎಂದು ಹೇಳುತ್ತಾರೆ ವಿವೇಕಾನಂದರು.

ಮಾನವನನ್ನು ಮಾನವನನ್ನಾಗಿ ರೂಪಿಸುವ ಧರ್ಮದ ವಿಶ್ಲೇಷಣೆ ವಿಚಾರದಿಂದ ಆಗಬೇಕು. ಅದನ್ನು ಮುಕ್ತವಾಗಿ ಆರಾಧಿಸಬೇಕು. ಧರ್ಮದಲ್ಲಿನ ಪುಕ್ಕಟೆ ಹೆಗ್ಗಳಿಕೆ, ಗುರು ಆಡಂಬರ, ಅರ್ಥಹೀನ ಭಾವುಕತೆಗೆ ಕಡಿವಾಣವೇ ವೈಜ್ಞಾನಿಕ ವಿಚಾರ. ವಿಚಾರ ಬುದ್ಧಿ ಮತ ಧರ್ಮಗಳಲ್ಲಿಯ ಮೂಢನಂಬಿಕೆಗಳನ್ನು ಗುಡಿಸಿ ಹಾಕಲು ಅವಶ್ಯಕವೆಂದು ವಿವೇಕಾನಂದರು ಸಾರುತ್ತಾರೆ.

"ಪ್ರೇಮವೇ ಜೀವನದ ಏಕ ಮಾತ್ರ ನಿಯಮ."[೧೦] ಶಾಂತಿ, ದಯೆ, ಸಮತ್ವ,

ವಿಶ್ವ ಭ್ರಾತೃತ್ವಗಳು ಇಂದು ಕೇವಲ ಶಬ್ದಗಳಾಗಿ ಮಾತ್ರ ಉಳಿದಿವೆ. ಇವನ್ನು ನಾವು ಅನುಭವವೇದ್ಯವನ್ನಾಗಿ ಮಾಡಿಕೊಳ್ಳಬೇಕು. ಪ್ರೇಮದ ಗುರಿ ಪ್ರೇಮವೇ ಆಗಿದೆ. ಇದನ್ನರಿತು ಮಾನವ ಬಾಳಲು ಕಲಿತರೆ ಸಮಾಜದ ಎಲ್ಲಾ ಸಮಸ್ಯೆಗಳು ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ.

ಅಡಿ ಟಿಪ್ಪಣಿಗಳು

೧. ಎಂ. ಲೀಲಾವತಿ ; ಮೂಢನಂಬಿಕೆ ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು -೧೮, ೧೯೭೫, (ಪು. ೨)

೨. ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ ಸಂ. ೩, ೧೯೮೪, (ಪು. ೨೯೧)

೩. ಅದೇ, (ಪು. ೨೯೨)

೪. ಅದೇ, ಸಂ. ೫, ಪು. ೬೦, ಸಂ. ೬, (ಪು. ೨೫೫)

೫. ಅದೇ, ಸಂ. ೫ (ಪು. ೬೦)

೬. ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ ಸಂ. ೬ ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, ೧೯೮೮, (ಪು. ೧೨೮.)

೭. ಅದೇ. ಪು. ೭೭ ಹಾಗೂ ವಿವೇಕಾನಂದರ ಕೃತಿ ಸಂಪುಟ, (ಪು. ೪೯೩)

೮. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು. (ಪು. ೧೯೮)

೯. ಜೀವ ಈಶ್ವರ ಧರ್ಮ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು (ಪು. ೧೪)

೧೦. ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂ. ೩, (ಪು. ೩೮೯.)

ಭಾರತೀಯ ಇತಿಹಾಸ ಸಂಶೋಧನೆ ಮತ್ತು ಬರವಣಿಗೆಯನ್ನು ಕುರಿತ ಬ್ರಿಟಿಷ್ ಧೋರಣೆ : ಒಂದು ವಿಶ್ಲೇಷಣೆ

– ಜಿ. ಟಿ. ಸೋಮಶೇಖರ್

ಈ ಲೇಖನದಲ್ಲಿ ಭಾರತದ ಆರಂಭದ ಇತಿಹಾಸವನ್ನು ರಚಿಸಿದ ಬ್ರಿಟಿಷ್ ಆಡಳಿತಗಾರ ವಿದ್ವಾಂಸರ ಧೋರಣೆ ಮತ್ತು ಅವರ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಲಾಗಿದೆ. ಭಾರತದ ಪ್ರಾಚೀನತೆಯನ್ನು ಕುರಿತು ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಪ್ರಥಮಾರ್ಧ ಭಾಗದಲ್ಲಿ ಬಹಳಷ್ಟು ಸಂಶೋಧನೆ ನಡೆದಿದೆ. ಆಧುನಿಕ ಐತಿಹಾಸಿಕ ಸಂಶೋಧನೆಯು ಪರಕೀಯ ಆಡಳಿತದ ನಿರ್ದೇಶನಕ್ಕೊಳಪಟ್ಟಿದ್ದು, ಅಂದಿನ ಸಮಕಾಲೀನ ಭಾರತದ ಬೌದ್ಧಿಕ ಬೆಳವಣಿಗೆಯ ಮೇಲೆ ಅಗಾಧ ಪ್ರಭಾವ ಬೀರಿತು. ಬ್ರಿಟಿಷ್ ರಾಜ್ಯಾಡಳಿತದಿಂದ ನಿರ್ಮಾಣಗೊಂಡ ಈ ಪರಿಸ್ಥಿತಿಯು ಸಮಕಾಲೀನ ಇತಿಹಾಸಕಾರರ ಐತಿಹಾಸಿಕ ವಿಚಾರಧಾರೆಯ ಮೇಲೆ ಮಾತ್ರವೇ ಅಲ್ಲದೆ ಐತಿಹಾಸಿಕ ಸಂಶೋಧನೆ ಮತ್ತು ಬರವಣಿಗೆಯ ತಂತ್ರದ ಮೇಲೂ ಪರಿಣಾಮ ಬೀರಿತು. ಈ ದೃಷ್ಟಿಯಿಂದ ಬ್ರಿಟಿಷ್ ಸರ್ಕಾರ ಐತಿಹಾಸಿಕ ಆಕರಗಳನ್ನು ಶೋಧಿಸಿ ಇತಿಹಾಸಕಾರರ ಇತಿಹಾಸ ಪುನರ್ರಚನಾ ಅವಶ್ಯಕತೆಯನ್ನು ಪೂರೈಸುವಂತೆ ನಿರ್ದೇಶನ ನೀಡಿತು.

ಬ್ರಿಟಿಷರು ಭಾರತ ದೇಶಕ್ಕೆ ಬಂದು ವಸಾಹತು ಸ್ಥಾಪಿಸಿದುದು ಮತ್ತು ವಸಾಹತಿನ ಜನತೆಯ ಬಗೆಗಿನ ವಿಷಯವಾಗಿ ಹೆಚ್ಚಿನ ತಿಳಿವಳಿಕೆ ಪಡೆದುದು ಜೊತೆ ಜೊತೆಯಾಗಿ ಜರುಗಿದವು. ಇದು ಭಾರತೀಯರ ಪ್ರಾಚೀನ ಹಾಗೂ ಪ್ರಾದೇಶಿಕ ಭಾಷೆಗಳ ಕಲಿಕೆ, ಸಮಗ್ರ ಪರಿವೀಕ್ಷಣಾ ಕಾರ್ಯಕೈಗೊಳ್ಳುವುದು ಮತ್ತು ಜಾತಿ, ಸ್ವಾಸ್ಥ್ಯ, ಜನಾಂಗ ಸ್ಥಿತಿ, ವ್ಯಾಪಾರ, ಜನರು ಕೊಳ್ಳುವ ಶಕ್ತಿ, ಭೂಸುಧಾರಣಾ ವಿಧಾನಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸುವುದು ಮುಂತಾದ ಚಟುವಟಿಕೆಗಳು ಅತ್ಯಂತ ಕಠಿಣ ಶ್ರಮ ಮತ್ತು ಪ್ರಯತ್ನಗಳಿಂದ ಆರಂಭವಾದವು. ಇಲ್ಲಿ ಕಲಿತ ಭಾಷೆಗಳು ಮತ್ತು ಸಂಗ್ರಹಿಸಿದ ದತ್ತಾಂಶಗಳು ಬ್ರಿಟಿಷರಿಗೆ ಭಾರತ ದೇಶದ ಇತಿಹಾಸ ರಚನೆಗೆ ಸಾಕಷ್ಟು ಆಧಾರಗಳ ತಳಹದಿಯಾದವು. ಇತಿಹಾಸ ರಚನೆ ಕಾರ್ಯ ವನ್ನು ಪ್ರಾದೇಶಿಕ ಹಾಗೂ ಅಖಿಲ ಭಾರತದ ಆಧಾರದ ಮೇಲೆ ಕೈಗೊಳ್ಳಲಾಯಿತು.

ಭಾರತದಲ್ಲಿ ಬ್ರಿಟಿಷರು ಸೃಷ್ಟಿಸಿದ ಪರಿಸ್ಥಿತಿಗಳು ಇತಿಹಾಸಕಾರರ ನಿರ್ದಿಷ್ಟ ಐತಿಹಾಸಿಕ ನಿರೂಪಣೆಗಳು ಮಾತ್ರವಲ್ಲದೆ, ಇತಿಹಾಸ ಸಂಶೋಧನೆ ಮತ್ತು ಲೇಖನಗಳ ವಿಧಾನದ ಮೇಲೆಯೂ ಪರಿಣಾಮ ಬೀರಿದವು. ಇತಿಹಾಸಕಾರನ ಆಕರಗಳ ಅಗತ್ಯಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಸಂಶೋಧನೆಯ ಮೇಲೆ ರಾಜಕೀಯ ವಿದ್ಯಮಾನಗಳ ಪರಿಣಾಮಗಳು ಸ್ಪಷ್ಟವಾಗುತ್ತವೆ. ಐತಿಹಾಸಿಕ ಆಧಾರಗಳು ಇತಿಹಾಸಕಾರನಿಗೆ ಅವರ ವೃತ್ತಿಗೆ ಭೋಜನ ಉಪಕರಣಗಳಿದ್ದಂತೆ. ಅವುಗಳಿಲ್ಲದಿದ್ದರೆ ಅವನ ಸಂಶೋಧನೆ ಮತ್ತು ಬರವಣಿಗೆಗಳಿಗೆ ಭದ್ರಬುನಾದಿ ಇಲ್ಲದಂತಾಗುತ್ತದೆ.

ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದಲ್ಲಿ ಕೆಲವು ಆಕರಗಳ ಮೇಲಿನ ಸಂಶೋಧನೆ ಮತ್ತು ಸಂಗ್ರಹ ಕಾರ್ಯಗಳು ಸರ್ಕಾರದ ಧೋರಣೆಯನ್ನು ಅವಲಂಬಿಸಿದ್ದವು. ಪ್ರಸ್ತುತ ನಾವು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಬೇರುಗಳು ನಮ್ಮ ವಸಾಹತುಶಾಹಿಯ ಗತಕಾಲದಲ್ಲಿ ಕಂಡು ಬರುತ್ತದೆ. ಅದನ್ನು ನಾವು ಸಮರ್ಪಕವಾಗಿ ಅರಿತುಕೊಳ್ಳದಿದ್ದಲ್ಲಿ ನಮ್ಮ ವರ್ತಮಾನದ ಇತಿಹಾಸವನ್ನು ಸರಿಯಾಗಿ ಅರಿತುಕೊಳ್ಳಲು ಅಸಮರ್ಥ ರಾಗುತ್ತೇವೆ. ಭಾರತೀಯ ಇತಿಹಾಸ ಸಂಶೋಧನೆ ಮತ್ತು ಬರವಣಿಗೆಯನ್ನು ಕುರಿತ ಮೂಲ ಉದ್ದೇಶ ಭಾರತದ ಗತಕಾಲದ ನೈಜ ಚಿತ್ರಣ ರೂಪಿಸಲು ಬ್ರಿಟಿಷರು ಉತ್ಸುಕ ರಾಗಿದ್ದರೆಂದಲ್ಲ. ಇವುಗಳ ವಾಸ್ತವ ಉದ್ದೇಶ ವಸಾಹತು ಸ್ಥಾಪನೆ, ಭಾರತೀಯರ ವಶೀಕರಣ ಮತ್ತು ಬ್ರಿಟಿಷ್ ವಸಾಹತು ಆಡಳಿತವನ್ನು ಸುಭದ್ರಪಡಿಸುವುದು, ಸಾರೋದ್ಧಾರ ಮಾಡುವುದು (perpetuate) ಮತ್ತು ಸಮಂಜಸವಾದುದು ಎಂದು ಸಮರ್ಥಿಸುವುದು. ಅದಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಎತ್ತದಿದ್ದರೆ ವಸಾಹತಿನ ಗತಕಾಲದ ಸಂಶೋಧನೆ ಅಪೂರ್ಣವಾಗುವುದು:

ಅ. ಭಾರತ ದೇಶದ ಗತಕಾಲದ ಇತಿಹಾಸ ರಚನೆಗೆ ಹಾಗೂ ಅದನ್ನು ಭಾರತೀಯರಿಗೆ ತಮ್ಮದೇ ಆದ ಧಾಟಿ ಮತ್ತು ಧೋರಣೆಯಲ್ಲಿ ನಿರೂಪಿಸುವುದಕ್ಕೆ ಅವರಿಗೆ ಪ್ರೇರಣೆ ಯಾವುದು? ಮತ್ತು ಹಾಗೆ ಮಾಡುವುದರಿಂದ ಇಡೀ ಭಾರತದ ಇತಿಹಾಸವೇ ಪ್ರೇರೇಪಿಸಲ್ಪಟ್ಟಿತೇ?

ಆ. ಈ ಅವಧಿಯಲ್ಲಿ ರಚನೆಯಾದ ಐತಿಹಾಸಿಕ ಗ್ರಂಥಗಳನ್ನು ಅವಲೋಕಿಸಿದಾಗ ಕಂಡು ಬರುವ ಅಸಂಬದ್ಧ ಅಸಮರ್ಪಕ ಲೋಪದೋಷಗಳೇನು? ಆಡಳಿತ ರೂಢ ಬ್ರಿಟಿಷ್ ಇತಿಹಾಸಜ್ಞರು (Administrative historians) ಯಾವ ರೀತಿಯಲ್ಲಿ ಸತ್ಯಕ್ಕೆ ದೂರವಾದ ಚಿತ್ರಣ ಮತ್ತು ಸಂಗತಿಗಳನ್ನು ಸೃಷ್ಟಿಸಿದರು?

ಇ. ಈ ಚಿತ್ರಣಗಳನ್ನು ಸೃಷ್ಟಿಸಲು ಅವರಿಗೆ ಭಾರತೀಯ ಸಮಾಜದ ಜೈವಿಕ ಬೆಳವಣಿಗೆಯ ವಿಷಯದಲ್ಲಿದ್ದ ಮೌಢ್ಯ/ಅರಿವಿಲ್ಲದಿದ್ದುದು ಕಾರಣವೇ? ಅಥವಾ ಭಾರತ ದೇಶವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು, ತಮ್ಮ ವಸಾಹತುಶಾಹಿ ಯೋಜನೆ (colonial project)ಯ ಭಾಗವಾಗಿ: ಅಂಗವಾಗಿ

ಉದ್ದೇಶಪೂರ್ವಕವಾಗಿ ಮಾಡಿದ ಸಮರ್ಥನೆಯೇ?

ಈ. ಅಹುದಾದಲ್ಲಿ, ವಸಾಹತುಶಾಹಿಯನ್ನು ಶಾಶ್ವತವಾಗಿಡುವಂತೆ ಮಾಡುವಲ್ಲಿ ಈ ಆಡಳಿತ ಇತಿಹಾಸಕಾರರ ಪಾತ್ರವೇನು?

ಭಾರತದಲ್ಲಿ ಬ್ರಿಟಿಷ್ ವಸಾಹತಿಶಾಹಿ ವ್ಯವಸ್ಥೆ ಪರಿಚಯವಾದುದು, ಅವರ ಉನ್ನತವಾದ ಸೈನಿಕಶಕ್ತಿ ಮತ್ತು ಆರ್ಥಿಕ ಪ್ರಾಬಲ್ಯದಿಂದ. ಆದರೆ ವಸಾಹತು ಜನತೆಯ ಬಗೆಗೆ ವಿಷಯಗಳನ್ನು (knowledge about colony) ಕೂಲಂಕಷವಾಗಿ ತಿಳಿದುಕೊಳ್ಳುವ ಮೂಲಕ ಭದ್ರವಾದ ತಳಹದಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿತು. ಭಾರತ ದೇಶವನ್ನು ಆಳಲು ಅಗತ್ಯವಾದ ಸೈದ್ಧಾಂತಿಕ ಬುನಾದಿ (Ideological foundation) ರೂಪಿಸುವ ಸಲುವಾಗಿ ಇತಿಹಾಸ ಪುನರ್ರಚನಾ ಕಾರ್ಯ ಕೈಕೊಂಡರು. ಇದರ ಮೂಲಕ ತಮ್ಮ ಆಳ್ವಿಕೆಯನ್ನು ಶಾಸನಬದ್ಧವಾಗಿ ಮಾಡುವುದು ಅವರ ಧ್ಯೇಯವಾಗಿದ್ದಿತು. ಅಲೆಗ್ಸಾಂಡರ್ ಡೋ, ಜೇಮ್ಸ್‌ಮಿಲ್, ವಿ. ಎ. ಸ್ಮಿತ್, ಎಲ್ಫಿನ್ ಸ್ಟೋನ್, ಮಾರ್ಕ್‌ವಿಲ್ಕ್ಸ್ ಮೊದಲಾದವರು ರಚಿಸಿದ ಇತಿಹಾಸ ಗ್ರಂಥಗಳ ಮೂಲಕ ಸತ್ಯಕ್ಕೆ ದೂರವಾದ ಸಂಗತಿಗಳನ್ನು ಭಾರತೀಯರಿಗೆ ವಿತರಿಸುವುದರ ಮೂಲಕ ಶಾಸನಬದ್ಧತೆಯನ್ನು ಒದಗಿಸುವುದು ಅವರ ಉದ್ದೇಶವಾಗಿದ್ದಿತು. ಇದರಿಂದ ಜನರಲ್ಲಿ ಹಿಂದಿನ ಯಾವ ಆಡಳಿತಕ್ಕಿಂತಲೂ ಬ್ರಿಟಿಷರ ಆಡಳಿತವು ಅತ್ಯಂತ ಉತ್ಕೃಷ್ಟವಾದುದೆಂಬ ನಂಬಿಕೆ ಬರುವಂತೆ ಮಾಡುವುದು ಅವರ ಗುರಿ.

ಭಾರತದಲ್ಲಿ ಬ್ರಿಟಿಷ್ ಪ್ರಭುತ್ವ ಸ್ಥಾಪನೆಯ ತತ್ವಾದರ್ಶಗಳು ಮತ್ತು ಅದರ ಸಮರ್ಥನೆಯನ್ನು ೧೯ನೆಯ ಶತಮಾನದ ದ್ವಿತೀಯಾರ್ಧ ಭಾಗದಲ್ಲಿ ಭಾರತದ ಗತಕಾಲಕ್ಕೆ (ಬ್ರಿಟಿಷ್ ಪೂರ್ವಕಾಲದ) ಸಂಬಂಧಿಸಿದ ವಿಷಯ ಮತ್ತು ಮಾಹಿತಿಯನ್ನು ಸಂಗ್ರಹಿಸುವ ಪ್ರಯತ್ನ ನಡೆಸಲಾಯಿತು. ಇದು 'ದೈವದತ್ತ ಕಾರ್ಯ' (the work of providence) ಎಂಬ ನಂಬಿಕೆಗೆ ಪ್ರತಿಯಾಗಿ ಭಾರತದ ಗತಕಾಲದ ಸಂಶೋಧನೆಯ ಕಡೆಗೆ ದೃಷ್ಟಿ ಬೀರಿದರು. ಲಾರ್ಡ್ ಕರ್ಜನ್ ತನ್ನ ಆಡಳಿತವನ್ನು ಭಾರತದ ಮಹಾನ್ ಆಡಳಿತಗಾರರಾದ ಅಶೋಕ, ಅಕ್ಬರ್ ಮತ್ತು ಔರಂಗಜೇಬರ ಪಂಕ್ತಿಗೆ ತನ್ನನ್ನು ಸಮೀಕರಿಸಿಕೊಂಡಿರುವ ವಿಷಯವನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.

ಇವನಿಗಿಂತ ಪೂರ್ವದಲ್ಲೇ ವಸಾಹತುಶಾಹಿ ಶಿಕ್ಷಣ ತಜ್ಞನಾದ ಹಂಟರನು ಭಾರತದ ಗತಕಾಲದ ರಾಜರು ಮತ್ತು ಚಕ್ರವರ್ತಿಗಳ ಜೊತೆಗೆ ಬ್ರಿಟಿಷ್ ಆಡಳಿತಗಾರರನ್ನು ಸೇರಿಸಿ 'ರೂಲರ್ಸ್ ಆಫ್ ಇಂಡಿಯಾ' ಎಂಬ ಗ್ರಂಥ ಮಾಲಿಕೆಯನ್ನು ರಚಿಸಿರುವುದು ಅವರ ಮೂಲೋದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಬ್ರಿಟಿಷ್ ಆಡಳಿತಗಾರರಲ್ಲಿ ಬೆಳೆಯುತ್ತಿದ್ದ ಐತಿಹಾಸಿಕ ಜಾಗೃತಿಗೆ ಜಿಲ್ಲಾ ಗೆಜೆಟಿಯರ್ ಮತ್ತೊಂದು ವ್ಯಕ್ತ ಉದಾಹರಣೆ ಹಾಗೂ ಇದು ಸಾಮ್ರಾಜ್ಯಶಾಹಿ ಐತಿಹಾಸಿಕತೆಯ ದ್ಯೋತಕವಾಗಿದೆ.

ಭಾರತದಲ್ಲಿ ಬ್ರಿಟಿಷ್ ಆಡಳಿತಗಾರರು ಇತಿಹಾಸ ವಿರೋಧಿಗಳಾಗಿರದೆ,

ವಾಸ್ತವವಾಗಿ ಅವರು 'ಇತಿಹಾಸಪ್ರಜ್ಞೆ ಉಳ್ಳವರೂ', ಇತಿಹಾಸದ ವಿಷಯದಲ್ಲಿ 'ಸ್ನೇಹಪರರೂ' ಆಗಿದ್ದರು. ಆದಾಗ್ಯೂ ಬ್ರಿಟಿಷ್ ಆಡಳಿತ ಒಟ್ಟಾರೆಯಾಗಿ ಹಾಗೂ ವಿಶೇಷವಾಗಿ ಆಡಳಿತರೂಢರು (ವೈಯಕ್ತಿಕವಾಗಿ) ವಿಲಿಯಂ ಜೋನ್ಸ್‌ನ ಕಾಲದಿಂದಲೂ ಭಾರತದ ಪ್ರಾಚೀನ ವೈಭವವನ್ನು ತೆರೆದಿಡಲು ಉತ್ಸಾಹಿತರಾಗಿದ್ದು, ಅದರಲ್ಲಿ ಆಸಕ್ತಿಯನ್ನು ವಹಿಸಿದರು. ಆದರೂ ಹಿಂದೂ ಸಂಸ್ಕೃತಿ ಅಥವಾ ಮುಸಲ್ಮಾನ ನಾಗರಿಕತೆಗಳಿಗಿಂತ ಬ್ರಿಟಿಷರ ನಾಗರಿಕತೆಯು ಉತ್ಕೃಷ್ಟವಾದುದು ಹಾಗೂ ಭಾರತೀಯರ ಹಿತದೃಷ್ಟಿಯಿಂದ ಭಾರತ ದೇಶವನ್ನು ನಾಗರಿಕ ಮತ್ತು ಆಧುನಿಕ ಮಾರ್ಗದಲ್ಲಿ ಕೊಂಡೊಯ್ಯುವುದು ಬ್ರಿಟಿಷರ ಉದ್ದೇಶವೆಂಬ ತಿಳಿವಳಿಕೆ ಮೂಡಿಸಲು ಕೈಗೊಂಡ ಕ್ರಮಗಳಾಗಿದ್ದವು. ಇವರು ಮುಂದುವರಿದು ಹಿಂದೂಗಳು ಮತ್ತು ಮುಸಲ್ಮಾನರ ಸಾಮಾಜಿಕ ವ್ಯವಸ್ಥೆ ವಿಭಿನ್ನತೆಯಿಂದ ಕೂಡಿದೆ. ಆದುದರಿಂದ ಇವೆರಡೂ ಕೋಮುಗಳ ನಡುವೆ ಮೂಲಭೂತ ಮತ್ತು ಹೊಂದಾಣಿಕೆಯಾಗದಂತಹ ಭೇದಗಳಿವೆ ಎಂದು ಪ್ರತಿಪಾದಿಸಿದರು. ಜೊತೆಗೆ ಪ್ರಾಚೀನ ಭಾರತದ ಇತಿಹಾಸ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸರ್ಕಾರವು ತೋರಿಸಿದ ಅತ್ಯುತ್ಸಾಹವು ಮಧ್ಯಕಾಲೀನ ಭಾರತದ ಇತಿಹಾಸ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಡಿಮೆಯಾಗಿದ್ದಂತೆ ಕಂಡುಬರುತ್ತದೆ. 'ಒಡೆದು ಆಳುವ ನೀತಿ'ಯ ಬೀಜ ಅಂಕುರಾರ್ಪಣೆಯಾಗಿರುವುದು ಈ ವಸಾಹತಿಶಾಹಿ ಪಂಥದ ಧೋರಣೆಯಲ್ಲಿ ಕಾಣಬಹುದು.

ಈ ತರಹದ ಚಿತ್ರಣ ಮತ್ತು ಪ್ರತಿಮೆಗಳನ್ನು (Images) ಬ್ರಿಟಿಷರ ಆಡಳಿತಕ್ಕೆ ನೈತಿಕ ಅಸ್ತಿಭಾರ ಒದಗಿಸಲು ಹಾಗೂ ಭಾರತದಲ್ಲಿ ಉದಯಿಸುತ್ತಿದ್ದ ನೂತನ ಸಾಮಾಜಿಕ ವರ್ಗದವರಿಗೆ ಅದು ಬೌದ್ಧಿಕವಾಗಿ ಒಪ್ಪಿಗೆಯಾಗುವಂತೆ ಮಾಡಲು ಸೃಷ್ಟಿಸಿದರು. ಹೀಗೆ ಇತಿಹಾಸವನ್ನು ವಸಾಹತು ಅಧೀನತೆ (colonial subjugation) ಮತ್ತು ವಸಾಹತು ಅಧಿನಾಯಕತ್ವ (colonial hegemony) ವನ್ನು ಸ್ಥಾಪಿಸಲು ಒಂದು ಸೈದ್ಧಾಂತಿಕ ಸಾಧನ (Ideological tool) ವಾಗಿ ಬಳಸಿಕೊಂಡರು.

ಅಷ್ಟೇ ಅಲ್ಲದೇ ಆಡಳಿತಗಾರರು ಭಾರತೀಯರು ಕೈಗೊಳ್ಳುವ ಇತಿಹಾಸ ಅಧ್ಯಯನ, ಸಂಶೋಧನೆ ಮತ್ತು ಲೇಖನಗಳ ಮೇಲೂ ಸಹ ಗಮನ ಇಡಲಾರಂಭಿಸಿದ್ದನ್ನು ಕಾಣಬಹುದು. ಇಂತಹ ಧೋರಣೆಗೆ ಕಾರಣವೇನಿರಬಹುದೆಂಬುದನ್ನು ವಿಶ್ಲೇಷಿಸಿದರೆ, ದೇಶೀಯರ ಈ ಯತ್ನವು ತಮ್ಮ ಸಾಮ್ರಾಜ್ಯಶಾಹಿ ಕೇಂದ್ರಿತ ನೀತಿ (Imperial-oriented policy)ಗೆ ಸವಾಲಾಗಬಹುದೆಂಬ ಭೀತಿ ಇದ್ದಿರಬಹುದೇ? ಅಥವಾ ಸಂದರ್ಭಾನುಸಾರ ನೀತಿಯೇ (policy of expediency) ? ಅಥವಾ ಸಮಯೋಪಾಯ ನೀತಿಯೇ ? ಎಂಬುದನ್ನು ಪರಿಶೀಲಿಸುವುದು ಯುಕ್ತ.

ಈ ಧೋರಣೆಗೆ ಪೂರಕವಾಗಿ ೧೮೮೨ ರಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿ (The secretary of state for India) ಯವರು ಭಾರತೀಯ ವಿದ್ಯಾರ್ಥಿಗಳಿಗೆ

ಇತಿಹಾಸ ವಿಧಾನದಲ್ಲಿ ತರಬೇತಿ ನೀಡುವುದು ಮತ್ತು ಅವರನ್ನು ಇತಿಹಾಸ ವಿಮರ್ಶಕರನ್ನಾಗಿ ರೂಪಿಸುವುದು ಸರ್ಕಾರದ ಕರ್ತವ್ಯವೆಂಬುದನ್ನು ಮನಗಂಡರಾದರೂ, ಅವರ ವಾಸ್ತವ ಉದ್ದೇಶ ಕೇವಲ ಅವರ ಧೋರಣೆಗೆ ಬದ್ಧವಾಗುವಂತಹ ನಾಲ್ಕಾರು ಮಂದಿ ಭಾರತೀಯರಿಗೆ ತರಬೇತಿ ನೀಡಲು ಮಾತ್ರ ಸೀಮಿತವಾಗಿದ್ದಿತು. ಇದನ್ನು ವಿಶದೀಕರಿಸಲು ಈ ಸಂದರ್ಭದಲ್ಲಿ ಒಂದು ಉದಾಹರಣೆ ಉಲ್ಲೇಖಿಸುವುದು ಯುಕ್ತ. ೧೯ನೆಯ ಶತಮಾನದ ೭ನೆಯ ದಶಕದ ಅಂತ್ಯಕ್ಕೆ ಮಹಾರಾಷ್ಟ್ರ ಪ್ರಾಂತದಲ್ಲಿ ಮರಾಠಾ ಇತಿಹಾಸ ರಚನೆಗೆ ಅಗತ್ಯವಾದ ದಾಖಲೆಗಳ ಸಂಗ್ರಹ ಚಳವಳಿ ಆರಂಭವಾಯಿತು. ರಾನಡೆ ಮತ್ತು ಕೆ.ಟಿ. ತೆಲಾಂಗ್ ಬ್ರಿಟಿಷ್ ಮುಂಬಯಿ ಸರ್ಕಾರಕ್ಕೆ ಮೇಲಿಂದ ಮೇಲೆ ಮರಾಠಾ ಇತಿಹಾಸದ ಆಧಾರಗಳ ಗಣಿಯಂತಿದ್ದ ಕಡತಗಳು ಮತ್ತು ಪೇಷ್ವಾದಫ್ತರದ ರುಮಾಲುಗಳ ಸಂಗ್ರಹ ಮತ್ತು ಅವಲೋಕನಕ್ಕೆ ಅವಕಾಶ ಕೋರಿ ಭಿನ್ನವಿಸಿಕೊಂಡರು. ಆದರೆ ಅದು ಸರ್ಕಾರದ ಕಿವಿಯ ಮೇಲೆ ಬೀಳಲೇ ಇಲ್ಲ.

ಮರಾಠಾ ಇತಿಹಾಸದ ವಿಷಯದಲ್ಲಿ ಹೆಚ್ಚುತ್ತಿದ್ದ ಸಾರ್ವಜನಿಕ ಆಸಕ್ತಿ ಒತ್ತಡಕ್ಕೆ ಅಂದಿನ ಬ್ರಿಟಿಷ್ ಮುಂಬಯಿ ಸರ್ಕಾರವು ಕೊನೆಗೂ ಮಣಿದು ಪೇಶ್ವಾದಫ್ತರ್‌ನ ಪತ್ರಗಳ ಸಂಕಲನವನ್ನು ಡೆಕ್ಕನ್ ವರ್ನಾಕ್ಯುಲರ್ ಸೊಸೈಟಿಯ ವಶಕ್ಕೆ ಕೆಲವು ನಿಬಂಧನೆಗಳನ್ನು ವಿಧಿಸಿ ಒಪ್ಪಿಸಿತು. ಆ ನಿಬಂಧನೆಗಳೆಂದರೆ ೧. ಭಾರತೀಯರು ಸಂಗ್ರಹಿಸಿದ ವಿಷಯವನ್ನು ಮುದ್ರಿಸಬೇಕಾದ ನಮೂನೆಯನ್ನು ಪುಣೆಯ ಬ್ರಿಟಿಷ್ ಕಮೀಷನರೇ ನಿಗದಿಪಡಿಸಬೇಕು ; ೨. ಡೆಕ್ಕನ್ ವರ್ನಾಕ್ಯುಲರ್ ಸೊಸೈಟಿಯು ಮಾಡಿದ ಟಿಪ್ಪಣಿಯನ್ನು ಪರೀಕ್ಷಿಸಿ ಕಮೀಷನರೇ ಒಪ್ಪಿಗೆ ಸೂಚಿಸಬೇಕು ಮತ್ತು ೩. ಈ ಸೊಸೈಟಿಯು ಮುದ್ರಿಸಿದ ಸಂಪುಟಗಳನ್ನು ಸರ್ಕಾರದ ಉಪಯೋಗಕ್ಕಾಗಿ ಉಚಿತವಾಗಿ ನೀಡಬೇಕು, ತದನಂತರ ಸೊಸೈಟಿಯು ಎಂ. ಜಿ. ರಾನಡೆಯವರು ರಚಿಸಿದ 'ಪೇಶ್ವೆಗಳ ದಿನಚರಿಯ ಪೀಠಿಕೆ' (Introduction to the Peshwa Dairies) ಎಂಬ ಕೃತಿಯನ್ನು ಸೊಸೈಟಿಯ ಸಂಕಲನದ ಪ್ರಥಮ ಸಂಪುಟಕ್ಕೆ ಸೇರಿಸಬೇಕೆಂಬ ಸೊಸೈಟಿಯವರ ಸಲಹೆಯನ್ನು ಬ್ರಿಟಿಷ್ ಮುಂಬಯಿ ಸರ್ಕಾರದ ಮುಂದಿಟ್ಟಾಗ, ಯಾವ 'ಪೀಠಿಕಾ' ವಿಷಯವೇ ಆಗಲಿ ಸಾರ್ವಜನಿಕರಿಗಾಗಿ ಪ್ರಕಟವಾಗುವ ಮುನ್ನ ಸರ್ಕಾರದ ಒಪ್ಪಿಗೆ ಪಡೆಯಬೇಕಾದುದು ಅಗತ್ಯವೆಂದು ಅದನ್ನು ತಿರಸ್ಕರಿಸಿತು.

೧೯ನೆಯ ಶತಮಾನದ ಅಂತ್ಯದಿಂದಲೂ ಬ್ರಿಟಿಷ್ ಆಡಳಿತಗಾರರು ಮರಾಠಾ ಇತಿಹಾಸ ರಚನೆಯ ವಿಷಯವನ್ನು ಒಂದು 'ಗಂಭೀರ ಸಮಸ್ಯೆ' (serious Issue) ಯಾಗಿ ಪರಿಗಣಿಸಿದ್ದರು. ಅವರ ಭಾವನೆಯಲ್ಲಿ ಅದು ಬ್ರಿಟಿಷ್ ಸಾಮ್ರಾಜ್ಯದ ತಳಹದಿಗೆ ಅಪಾಯ ಒಡ್ಡಬಹುದೆಂಬ ಭೀತಿ ಇದ್ದಿತು. ಈ ಸಂದರ್ಭದಲ್ಲಿ ಮತ್ತೊಂದು ನಿದರ್ಶನವನ್ನು ಪರಿಶೀಲಿಸಬಹುದು. ಜಿ. ಎಸ್. ಸರದೇಸಾಯಿಯವರು 'ಸೆಲೆಕ್ಷನ್ಸ್ ಫ್ರಮ್ ದಿ ಪೇಶ್ವಾದಫ್ತರ್' (selections from the Peshwa Daftar) ಎಂಬ

ಕೃತಿಯನ್ನು ರಚಿಸಿದಾಗ, ಅದನ್ನು ಸರ್ಕಾರದ ದೋಷ ವಿಮರ್ಶೆ (censorship) ಗೆ ಒಳಪಡಿಸುವಂತೆ ಸೂಚಿಸಿತು. ಪುಣೆಯ ಕೇಂದ್ರೀಯ ವಿಭಾಗದ ಆಯುಕ್ತರು ಗ್ರಂಥದ ಶಿರೋನಾಮೆಯ ವಿಷಯದಲ್ಲಿ ಅಸಮಾಧಾನ ವ್ಯಕ್ತಪಡಿಸಿ, 'ಉತ್ತರ ಭಾರತದಲ್ಲಿ ಮರಾಠಾ ಸಾಮ್ರಾಜ್ಯ ವಿಸ್ತರಣೆ' (Expansion of the Maratha Empire in the North India) ಎಂಬ ಶೀರ್ಷಿಕೆಗೆ ಬದಲಾಗಿ ಅದನ್ನು 'ಉತ್ತರ ಅಥವಾ ಉತ್ತರ ಭಾರತದ ಮೇಲೆ ಮರಾಠರ ಆಕ್ರಮಣಗಳು' (the Incursions of the Marathas into the North or Northern India) ಎಂದು ಬದಲಾಯಿಸುವಂತೆ ಸೂಚಿಸಿದರು. ಇದು ಇತಿಹಾಸದ ಅರ್ಥ ವಿವರಣೆಯಲ್ಲಿ ಅಂದಿನ ಬ್ರಿಟಿಷ್ ಸರ್ಕಾರದ ನೇರ ಹಸ್ತಕ್ಷೇಪಕ್ಕೆ ಒಂದು ಉದಾಹರಣೆ. ಈ ನಿಲುವುಗಳಿಗನುಗುಣವಾಗಿ ಬ್ರಿಟಿಷ್ ಸರ್ಕಾರದ ಪ್ರಾಯೋಜಕತ್ವದಲ್ಲಿ ಕಲ್ಕತ್ತ, ಮುಂಬಯಿ ಮತ್ತು ಮದರಾಸುಗಳಲ್ಲಿ 'ಏಷ್ಯಾಟಿಕ್ ಸೊಸೈಟಿ' ಶಾಖೆಗಳು ಹಾಗೂ ಸರ್ಕಾರದ ವತಿಯಿಂದ ಪುರಾತತ್ವ ಸರ್ವೇಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅವನ್ನು ಸರ್ಕಾರವೇ ನಿರ್ವಹಿಸಲಾರಂಭಿಸಿತು.

ಹೀಗೆ ಭಾರತದ ಇತಿಹಾಸ ರಚನೆ ಮತ್ತು ಸಂಶೋಧನೆ ವಸಾಹತುಶಾಹಿ ಪ್ರಭುತ್ವದ ಅಂಕೆಗೆ ಒಳಪಟ್ಟಿದ್ದಿತು ಎಂಬುದು ಮೇಲಿನ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ಇದು ಸರ್ಕಾರದ ಉದ್ದೇಶಪೂರಿತ ಪ್ರಯತ್ನವೂ ಹೌದು. ಇಂತಹ ಧೋರಣೆಯಿಂದ ಬ್ರಿಟಿಷ್ ಆಡಳಿತಾವಧಿಯಲ್ಲಿ ರಚಿಸಲ್ಪಟ್ಟ ಇತಿಹಾಸ ಗ್ರಂಥ ಮತ್ತು ಲೇಖನಗಳು ದೋಷದಿಂದ ಕೂಡಿದ್ದು, ರಾಷ್ಟ್ರೀಯವಾದಿ ಇತಿಹಾಸಕಾರರ ವಿರೋಧಕ್ಕೆ ಕಾರಣವಾಗಿದೆ.

BIBLIOGRAPHY

1. ರೊಮಿಲಾ ಥಾಪರ್, ಹರ್ಬನ್ಸ್ ಮುಖಿಯಾ, ಬಿಪಿನ್ ಚಂದ್ರ, ಅನು. ಗೋಪಾಲಕೃಷ್ಣರಾವ್ ಕೆ.ಎಲ್. : ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ. ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು - 98

2. Bearce, George D : British attitudes towards India (1784-1858) (Oxford, 1961)

3. Cohn. S. Bernard : Colonialism and its forms of knowledge (Oxford, 1997)

4. Cohn. S. Bernard : An Anthropologist among the Historians and other Essays (Oxford. 2000)

5. Edward Said : Orientalism

6. Ernst Breisach : Historiography; Ancient, Medieval and Modern (Chicago, 1983)

7. Gooch G.P. : History and Historians in the Nineteenth century (1913)

8. Grewal J.S. : The Beginning of British interest in India's past (1963)

9. Griffiths P.J : The British Impact on India (London, 1952)

10. S.N. Mukherjee : Sir William Jones : A Study in Eighteenth Century British attitude to India (Cambridge, 1968)

11. Michal Stanford : The Nature of Historical Knowledge (New York, 1986)

12. Om Prakash Kejariwali : The Asiatic Society of Bengal and the Discovery of India's Past (1784-1938) (Oxford, 1988)

13. Rice B.L. : Mysore and Coorg from the Inscriptions (London, 1908)

14. Thomson J.N. & : A History of Historical Writings (New York, 1942)

15. Wilks Marks : Historical Sketches of the South of India in an attempt to trace the History of Mysore (3 Vols) (London, 1810 - 1817)

16. Surendra Rao B : A Critical Study of James Mill as a Historian of India (Unpublished Ph.D. Thesis, 1975)

ಚಾರಣ ಜಾನಪದ

– ಡಾ. ಟಿ. ಗೋವಿಂದರಾಜು

ಜಾನಪದ – ಎನ್ನುವುದು ನಮ್ಮ ಸಮಸ್ತ ಬದುಕನ್ನು ಒಳಗೊಂಡಿದೆ ಅಥವಾ ಎಲ್ಲೆಡೆಯೂ ಜಾನಪದ ಅಡಗಿದೆ ಎಂಬುದು ನಮ್ಮ ಈಚಿನ ಅಧ್ಯಯನಕಾರರ ನಂಬಿಕೆಯಾಗಿದೆ. ತಾತ್ವಿಕವಾಗಿ ಹೀಗೆ ನಂಬಿದರೂ ಪ್ರಾಯೋಗಿಕವಾಗಿ ಎಷ್ಟುಜನ ಹಾಗೆ ಎಲ್ಲೆಡೆ ಜಾನಪದವನ್ನು ಗುರುತಿಸಿ, ಸಂಗ್ರಹಿಸಿ ಅಧ್ಯಯನ ಮಾಡುತ್ತಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಏಕೆಂದರೆ, ನಮ್ಮಲ್ಲಿ ಹೊಸಹೊಸದನ್ನು ಅದೂ ತಾವು ಇದ್ದೆಡೆಯೇ ಹುಡುಕಿ, ತೋರಿಸುವವರು ಅಪರೂಪ. ಅನ್ಯಮೂಲಗಳಿಂದ ಆರ್ಥಿಕ ನೆರವು ಪಡೆದವರು ಬುಡಕಟ್ಟುಗಳ ಅಧ್ಯಯನವೋ ಇನ್ನೊಂದೋ ನೆಪ ಮಾಡಿಕೊಂಡು ದೂರಕ್ಕೆ ಹೋಗುವುದುಂಟು. ಅಂತಹ ಆರ್ಥಿಕ ಸೌಲಭ್ಯ ಇಲ್ಲದವರು ಏನು ಮಾಡುವುದು? ಅವರು ಜಾನಪದ ಶೋಧ, ಸಂಗ್ರಹಗಳನ್ನು ಮಾಡಲು ಸಾಧ್ಯವಿಲ್ಲವೇ? ಯಾವ ಖರ್ಚು ಇರದೆ, ಇದ್ದಲ್ಲಿಯೇ ಅಂತಹ ಜಾನಪದ ಸಂಗ್ರಹ, ಅಧ್ಯಯನ ಮಾಡಬಹುದು ಎಂಬುದನ್ನು ಈ ಅಧ್ಯಯನಕಾರನ 'ಕ್ಯಾಂಡಿಡ್ ಜಾನಪದ' ಕುರಿತ ಬರಹದಲ್ಲಿ ಈಗಾಗಲೇ ತೋರಿಸಿಕೊಡಲಾಗಿದೆ.

ಈಗ ಬೇರೊಂದು ಕಾರ್ಯಕ್ಕಾಗಿ ಮಾಡುವ ಹಣ ಮತ್ತು ಶ್ರಮದ ಖರ್ಚಿನಲ್ಲಿಯೇ ಜಾನಪದ ಶೋಧ, ಸಂಗ್ರಹದ, ಅಧ್ಯಯನಗಳನ್ನು ಹೇಗೆ ಮಾಡಬಹುದು ಎಂಬುದನ್ನು ಈ ಮುಂದೆ ಸೋದಾಹರಣವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಚಾರಣ ಕ್ರಿಯೆ ಮನುಷ್ಯನ ಆದಿಮ ಪ್ರವೃತ್ತಿಗಳಲ್ಲಿ ಒಂದು. ಅದು ಆಧುನಿಕದಲ್ಲಿಯೂ ಮುಂದುವರೆದಿದೆ. ಆದರೆ, ಆದಿಮನು ಆಹಾರ, ಸುರಕ್ಷತೆಗಳಿಗಾಗಿ ಸದಾ ಚಾರಣಿಗನಾಗಿದ್ದರೆ ಆಧುನಿಕ ನಗರವಾಸಿಯು ಆ ಕಾರಣಗಳೇಅಲ್ಲದೆ ನಿಸರ್ಗವನ್ನು ಕುರಿತ ಅಧ್ಯಯನಾಸಕ್ತಿ (ಪ್ರೇಕ್ಷಣೀಯ ಸ್ಥಳಗಳ ಧಾರ್ಮಿಕ, ಸಾಂಸ್ಕೃತಿಕ ಆಸಕ್ತಿಯೂ ಸೇರಿ) ಹಾಗೂ ಆರೋಗ್ಯ ಸಬಲತೆಗಾಗಿಯೂ ಈಚೆಗೆ ಹೆಚ್ಚು ಹೆಚ್ಚು ಚಾರಣಿಗನಾಗುತ್ತಿದ್ದಾನೆ. ಬೆಟ್ಟ, ಗುಡ್ಡ, ಕಾಡು, ಕಣಿವೆ, ದ್ವೀಪಾಂತರ ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿಗೆಲ್ಲಾ ಚಾರಣ ಹೋಗುವುದು ಹಲವರಿಗೆ ವಯಸ್ಸು, ಲಿಂಗ ಹಾಗೂ ವರ್ಗ ಭೇದವಿರದ ಹವ್ಯಾಸ, ಅಷ್ಟೇ ಅಲ್ಲ, ಫ್ಯಾಷನ್ ಸಹ ಆಗಿದೆ.

'ಕೋಶ ಓದು, ದೇಶ ಸುತ್ತು' ಎನ್ನುವುದು ಹಳೆಯ ಗಾದೆ. ಜ್ಞಾನಾರ್ಜನೆಗೆ ಇವೆರಡೂ ಪರಸ್ಪರ ಪೂರಕವಾದುವೇ. ಆದರೂ ಕೋಶದಲ್ಲಿ ದೊರೆಯದ್ದು, ತಾಜಾ ಆದದ್ದು ನಾಡಾಡಿಯಾದವನಿಗೆ ದೇಶಸುತ್ತುವ ಚಾರಣಿಗನಿಗೆ ದೊರೆಯುತ್ತದೆ. ಆಧುನಿಕ ಯಾಂತ್ರಿಕ ಬದುಕಿನ ಹಲವು ಪ್ರತಿಕೂಲ ಪರಿಣಾಮಗಳಿಂದ ಸಂಕಷ್ಟಕ್ಕೆ ಗುರಿಯಾದ ನಾಗರಿಕನಲ್ಲಿ ತನ್ನ ಆರೋಗ್ಯ ಉಳಿಯಬೇಕು, ಆ ಮೂಲಕ ತಾನೂ ಉಳಿಯಬೇಕು; ಅದಕ್ಕಾಗಿ ನಿಸರ್ಗವನ್ನು ಅರಿಯಬೇಕು ಉಳಿಸಬೇಕು ಎಂಬ ಪರಿಸರ ಕಾಳಜಿ ತೀವ್ರವಾಗಿದೆ. ಇದರಿಂದ ಹುಟ್ಟಿಕೊಂಡ 'ಚಾರಣ' ಪರಿಕಲ್ಪನೆ ಹಿಂದಿನ ಯಾತ್ರಾರ್ಥಿಗಳಂತೆ ಕೇವಲ ಧಾರ್ಮಿಕ ಆಸಕ್ತಿ ಇಲ್ಲದ ಆಧುನಿಕರನ್ನು ಸದಾ 'ಚಲನಶೀಲ'ವಾಗುವಂತೆ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ. ಛಾಯಗ್ರಹಣದ ಹವ್ಯಾಸವೂ ಮೂಡಿದ ಮೇಲೆ ನನ್ನಲ್ಲಿ ಚಾರಣದ ಆಕರ್ಷಣೆ ಇಮ್ಮಡಿಯಾಯಿತು. ಹಾಗೆ ಕೆಲವರ್ಷಗಳಿಂದ ಅಲ್ಲಿ, ಇಲ್ಲಿ ಅಲೆದಾಡಿದ ಮೇಲೆ ಸ್ವತಃ ಜಾನಪದ ಅಧ್ಯಯನಾಸಕ್ತನೂ ಆದ ನನಗೆ ಇನ್ನೊಂದು ಅಂಶದ 'ಜ್ಞಾನೋದಯ' ವೂ ಆಯಿತು. ಹೀಗಾಗಿ ನನ್ನ ಚಾರಣಕ್ಕೆ ಈಗ ನಾಲ್ಕು ಆಯಾಮ ಅಥವಾ ಉದ್ದೇಶಗಳಿವೆ ೧. ಛಾಯಾಗ್ರಹಣ, ೨. ಜಾನಪದ ಅಧ್ಯಯನ, ೩. ನಿಸರ್ಗವೀಕ್ಷಣೆ ಮತ್ತು ೪. ಆರೋಗ್ಯ ಸಂವರ್ಧನೆ.

ಅಂದರೆ, ಚಾರಣದ ಒಂದೇ ಖರ್ಚಿನಲ್ಲಿಯೇ ಈ ಎಲ್ಲಾ ಉಪಲಾಭಗಳು; ಕೆಲವೊಮ್ಮೆ ಬಂಪರ್‌ಲಾಭಗಳು ಇದ್ದಲ್ಲಿ ಜಾನಪದ ಅಧ್ಯಯನದ ಹಾಗೆ (ಉದಾ. ಕ್ಯಾಂಡಿಡ್ ಜಾನಪದ) ಹೋದಲ್ಲಿ ಜಾನಪದ ಅಧ್ಯಯನ (ಚಾರಣ ಜಾನಪದ) ಹೇಗೆ ಸಾಧ್ಯ ಎಂಬುದನ್ನು ಕೆಲವು ನಿದರ್ಶನಗಳೊಂದಿಗೆ ಇಲ್ಲಿ ಗಮನಿಸೋಣ

ಸುಮಾರು ೧೯೯೩ ರಲ್ಲಿ ಮೈಸೂರಿನ ವಿವೇಕ್ ಅಡ್ವೆಂಚರ್ಸ್‌ನ ಸ್ನೇಹಿತರೊಂದಿಗೆ ಶೃಂಗೇರಿ ಹತ್ತಿರದ ಋಷ್ಯಶೃಂಗಕ್ಕೆ ಚಾರಣ ಹೋಗಿದ್ದು, ಆ ಗಿರಿಯ ತಪ್ಪಲಲ್ಲಿ ನಡೆಯುತ್ತಿದ್ದಾಗ ದೂರದಲ್ಲಿ ಕಂಡ ಕಿತ್ತಲೆ ಮನೆ ಕೊಡಿಗೆ, ಹುಲುಗಾರು ಬೈಲು ಪ್ರದೇಶದಲ್ಲಿ ವಾಸಿಸುತ್ತಿದ್ದ ಗೌಡ್ಲು ಹಾಗೂ ಮರಾಠಿನಾಯಕರು ಎಂಬ "ಗಿರಿಜನರ" ಬದುಕಿನ ಬಗ್ಗೆ ನನ್ನ ಜೊತೆಯವರು ಕೆಲವು ಸ್ವಾರಸ್ಯದ ಸಂಗತಿಗಳನ್ನು ಹೇಳಿದ್ದರು. ಹಾಗೆಯೇ, ದಾರಿಯಲ್ಲಿ ಅಲ್ಲಲ್ಲಿ ಕಂಡ ಜೇಡ ಮತ್ತಿತರ ಕೀಟಗಳ ಪ್ರಸ್ತಾಪ ಬಂದಾಗ ಜೊತೆ ಇದ್ದ ಒಂದು ಹುಡುಗಿ 'ಜೇನುಹುಳು, ಜೇಡನ ಹುಳುಗಳು' ಕತೆ ಹೇಳಿತು. ಇನ್ನಾರೋ ಒಬ್ಬರು 'ಮನೆಮೂಲೆ ಸೇರಿದ ಇರುವೆ ಕತೆ' ಹೇಳಿದರು. ಮತ್ತೊಬ್ಬರು 'ರಾತ್ರಿನಿದ್ದೆಯಲ್ಲಿ ನಡೆದವನ' ಕತೆ ಹೇಳಿದರು. ಇವೆಲ್ಲಾ ನಿಸ್ಸಂಶಯವಾಗಿ ಆ ಚಾರಣದ ಭಾಗವಾಗಿಯೇ, ಅಲ್ಲಿನ ನಿಸರ್ಗದ ವ್ಯವಹಾರದ ಕಾರಣವಾಗಿಯೇ ಪ್ರೇರಿತವಾಗಿ ಕೇಳಿಬಂದ ಜನಪದ ಕತೆಗಳು.

ಅಲ್ಲಿಂದ ಹಿಂದಿರುಗಿದ ಮೇಲೆ ಆಗಿನ್ನು ಚೆನ್ನಾಗಿ ನೆನಪಿದ್ದ ಆ ಕತೆಗಳನ್ನು ಕುರಿತು ಲೇಖನ ಮಾಡುವ ಉತ್ಸುಕತೆಯಿಂದ ಬರಹ ಪ್ರಾರಂಭಿಸಿದೆ. ಆದರೆ, ಬೇರೇನೋ ಕೆಲಸಗಳ ಒತ್ತಡ ಬಂದು ಆ ಕತೆಗಳನ್ನು ಅಕ್ಷರರೂಪಕ್ಕೆ ಇಳಿಸುವುದು ತಪ್ಪಿ. ಲೇಖನವೂ

ಅರ್ಧಕ್ಕೆ ನಿಂತುಹೋಗಿದೆ. ಈಗ ಆ ಕತೆಗಳ ವಿವರಗಳು ನೆನಪಿಗೆ ಬರುತ್ತಿಲ್ಲ ಎಂಬುದು ನೋವುಂಟು ಮಾಡುತ್ತಿದೆ. ಆದರೆ, ಚಾರಣದ ಭಾಗವಾಗಿಯೂ ಆಧುನಿಕ ಜಾನಪದ ಹೊಸ ನುಡಿಗಟ್ಟುಗಳು ಹೇಗೆ ಹುಟ್ಟಿಕೊಳ್ಳಬಹುದು ಎಂಬುದಕ್ಕೆ ಒಂದು ನಿದರ್ಶನದ ಟಿಪ್ಪಣಿ ಮಾತ್ರ ಉಳಿದಿದೆ.

ಚಾರಣ ನುಡಿಗಟ್ಟು – ಹಳಿತಪ್ಪಿದ ಬೋಗಿ ಪುಶ್ ಅಂಡ್ ಪುಲ್ ರೈಲು

ಚಾರಣಕ್ಕೂ ರೈಲಿಗೂ ಏನು ಸಂಬಂಧ ಎಂದು ಆಶ್ಚರ್ಯವಾಗಬಹುದು. ಮುಂದೆ ಓದಿ ನೋಡಿ – ನಗರದ ಮಧ್ಯಮ, ಕೆಳಮಧ್ಯಮ ವರ್ಗದ ಗೃಹಿಣಿಯರ ಬದುಕು, ಮನಸ್ಥಿತಿ ಅನೇಕ ಒತ್ತಡಗಳಿಗೆ ಸಿಲುಕಿ ಸದಾ ಅಲ್ಲಿಂದ ಬಿಡುಗಡೆಗೆ ಹಾತೊರೆಯುತ್ತಿರುತ್ತದೆ ಎನಿಸುತ್ತದೆ. ಅಂತಹವರಿಗೆ ಯಾರಾದರೂ ಅಕ್ಕಪಕ್ಕದವರು ಹೇಳುವ ಚಾರಣ, ಅಲ್ಲಿನ ಪ್ರಶಾಂತ ನಿಸರ್ಗ, ಹಕ್ಕಿ ಪಕ್ಷಿಗಳ ಇಂಚರ, ಸುಂದರ ಸೂರ್ಯಾಸ್ತ, ಸೂರ್ಯೋದಯ ಇವುಗಳ ವರ್ಣರಂಜಿತ ಕತೆಗಳನ್ನೆಲ್ಲಾ ಕೇಳಿ, ಚಾರಣ ಎಂದರೆ, ಲಾಲ್‌ಬಾಗಿನ ಪಿಕ್‌ನಿಕ್ ಎಂದೇ ಭಾವಿಸಿ, ಬಹಳ ಉತ್ಸುಕತೆಯಿಂದ ಹೊರಟುಬಿಡುತ್ತಾರೆ. ದೂರದ ಬಸ್ ಪ್ರಯಾಣ ಮಾಡಿಬಂದು ಬೆಟ್ಟ ಗುಡ್ಡವನ್ನು ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಏರುತ್ತಿದ್ದ ಹಾಗೆಯೇ ವಾಸ್ತವದ ಜ್ಞಾನೋದಯವಾಗ ತೊಡಗುತ್ತದೆ. ಅದರಲ್ಲೂ ಸ್ಥೂಲಕಾಯದವರಾಗಿ, ಅದೂ ಇದೂ ಸ್ವಲ್ಪ ತೊಂದರೆ ಇದ್ದರಂತೂ ಮುಗಿಯಿತು.

ಸರೀಕರ ಜೊತೆ ನಗೆಪಾಟಲಿಗೆ ಈಡಾಗಬಾರದೆಂಬ ಏಕೈಕ ಉಮೇದಿನಿಂದ, ಇದ್ದಬದ್ದ ಶಕ್ತಿಯನ್ನೆಲ್ಲಾ ಬಳಸಿಕೊಂಡು ಕಣಿವೆ ಇಳಿದು ಗುಡ್ಡ ಹತ್ತಿ ನಡುಭಾಗಕ್ಕೆ ಬರುತ್ತಿದ್ದಂತೆ ಅವರಿಗೆ ಹುಟ್ಟಿದ ದಿನ ಕಂಡೋಗಿಬಿಡುತ್ತದೆ. ಅವರಿವರ ಪ್ರೋತ್ಸಾಹದ ಮಾತುಗಳಿಗೂ ಬೆಲೆಕೊಡುವುದು ಸಾಧ್ಯವಾಗದೆ, ಒಬ್ಬರ ಹಿಂದೆ ಒಬ್ಬರಂತೆ ಸಾಗುತ್ತಿದ್ದ ಸಾಲಿನಿಂದ ಆಕೆ ಹೊರಜರುಗಿ, ಸಿಕ್ಕಿದ ಬಂಡೆಯನ್ನೇ ಆಶ್ರಯಿಸಿ 'ಧರಣಿ ಕೂತು ಬಿಡುತ್ತಾರೆ'. ಬೋಗಿಗಳ ಸಾಲಿನಲ್ಲಿ ಒಂದು ಹಳಿತಪ್ಪಿದರೆ ಏನಾಗುತ್ತದೆ? ಅದೇ ಪರಿಸ್ಥಿತಿ ಈಗ ಉಳಿದ ಚಾರಣ ತಂಡದ್ದು. ಮುಂದಕ್ಕೂ ಹೋಗುವಂತಿಲ್ಲ, ಹಿಂದಕ್ಕೂ ಬರುವಂತಿಲ್ಲ, ಅಲ್ಲಿಯೇ ನೆಮ್ಮದಿಯಾಗಿ ಉಳಿಯುವಂತೆಯೂ ಇಲ್ಲ. ಋಷ್ಯಶೃಂಗದ ಗಿರಿ ನಡುವಿನಲ್ಲಿ ಆದದ್ದು ಹೀಗೆಯೇ. ಅಂತಹವರನ್ನು ನೋಡಿಯೇ ತಂಡದಲ್ಲಿದ್ದವ ರೊಬ್ಬರು ಉದ್ಗರಿಸಿದ್ದು: "ಓ ಬೋಗಿ ಹಳಿ ತಪ್ಪಿತು."

ಆಮೇಲೆ, ಎಲ್ಲರೂ ಸುತ್ತುವರಿದು, ಶುಶ್ರೂಷೆ ಮಾಡಿ, ಪ್ರೋತ್ಸಾಹದ ಮಾತನಾಡಿ ಕೊನೆಗೆ ಒತ್ತಾಯ ಪೂರ್ವಕವಾಗಿ ಸಾಲಿಗೆ ಸೇರಿಸಿಕೊಂಡು ಪಯಣ ಮುಂದುವರೆಸಿದಾಗ ಇನ್ನಾರೋ ಉಸುರಿದರು: "ಈಗ ಇದು ಪುಷ್ ಅಂಡ್ ಪುಲ್ ರೈಲು!" ಸಾಲಿನ ಹಿಂದಿನವನು ನಡೆಯಿರಿ, ನಡೆಯಿರಿ ಎಂದು 'ತಳ್ಳ' ಬೇಕು, ಮುಂದಿನವನು 'ಬನ್ನಿ, ಬನ್ನಿ' ಎಂದು 'ಎಳೆಯ'ಬೇಕು.

ಕಕ್ಕೆ - ಕರಡಿ

ಈ ವರ್ಷ (೨೦೦೪) ಬಿಳಿಗಿರಿರಂಗನಬೆಟ್ಟದ ಕೆ. ಗುಡಿ, ಕ್ಯಾತೇದೇವರ ಗುಡಿ) ಅರಣ್ಯಕ್ಕೆ ಹೋಗಿದ್ದೆ. ಕಾಡು ನೋಡುವುದು ಆ ಸಂದರ್ಭದಲ್ಲಿ ಸಾಧ್ಯವಾದರೆ ವನ್ಯಜೀವಿಗಳ ಛಾಯಾಚಿತ್ರ ತೆಗೆಯುವುದು ಉದ್ದೇಶ. ಹಾಗೆ ಹೋದಾಗ, ಒಂದುದಿನ ಕಲ್ಲುಕೆರೆ ಹಳ್ಳಭಾಗದಲ್ಲಿ ಅಲ್ಲಿನ ಸೋಲಿಗರು 'ರೊಟ್ಟಿಪರ' ಮಾಡುತ್ತಿದ್ದ ಅಪರೂಪದ ಬುಡಕಟ್ಟು ಆಚರಣೆ ಕಣ್ಣಿಗೆ ಬಿದ್ದಿತು. ಅದನ್ನೆಲ್ಲಾ ನೋಡಿ, ಹಿಂದಿರುಗುತ್ತಿದ್ದಾಗ ಅಲ್ಲಲ್ಲಿ ಹಳದಿಹೂಗಳನ್ನು ಮೈತುಂಬಾ ಹೊತ್ತುನಿಂತ ಕಕ್ಕೆಮರಗಳು ಬೇಸಿಗೆಯ ಒಣಮರಗಳ ನಡುವೆ ಎದ್ದುಕಾಣುತ್ತಿದ್ದವು. ಹಾಗೆಯೇ ಸಾಂದರ್ಭಿಕವಾಗಿ ಕಾಡು ಮೃಗಗಳ ಪ್ರಸ್ತಾಪವೂ ಬಂದು, ನನ್ನ ಜೊತೆ ಇದ್ದ ಸೋಲಿಗರವ ಈ ಮರದ ಕಾಯಿ ಅಂದರೆ ಕರಡಿಗೆ ಭಾರೀ ಇಷ್ಟ ಅಂದ. ಏಕೆ? ಅಂದೆ.

'ಆ ಕಾಯೀಲಿ ಎಣ್ಣೆ ಅಂಶ ಇರ್ತದೆ. ಅದರ ರುಚಿಗೆ ತುಂಬಾ ತಿಂದಾಕಿಬಿಡ್ತದೆ. ಆಮೇಲೆ ಅದರ ಪಾಡು ನೋಡಬೇಕು. ಭೇದಿಕಿತ್ಗಂತದೆ...!'

'ಈ ಆಹಾರದಿಂದಲೇ ಅದಕ್ಕೆ ಹಾಗೆ ಆಗಿದೆ ಅಂತ ಹೇಗೆ ಗೊತ್ತಾಗುತ್ತದೆ?'

'ದಾರೀ ಉದ್ದಕ್ಕೂ ಉಚ್ಗಂಡೋಗಿರ್ತದೆ...'

-ಕರಡಿ ಆಹಾರ ವಿಶೇಷ, ಕಕ್ಕೆ ಕಾಯಿಯ ಗುಣ ವಿಶೇಷ ನಿಸರ್ಗದ ಒಡನಾಡಿಗಳಾದ ಸೋಲಿಗರು ಪರಿಸರದ ಆಗುಹೋಗುಗಳ ಬಗೆಗೆ ಎಷ್ಟು ಸೂಕ್ಷ್ಮವಾದ ತಿಳಿವಳಿಕೆ ಹೊಂದಿರುತ್ತಾರೆ. ಮೊದಲಾದ ಪರಿಸರ ಸಂಗತಿಗಳು ಈ ಚಾರಣದಿಂದಾಗಿ ಗಮನಕ್ಕೆ ಬರುವಂತಾದವು.

ನಂಬಿಕೆ

ಮಾರನೆಯ ದಿನ (೧೦-೦೪-೨೦೦೪) ಅದೇ ಪರಿಸರದ ಬೂದಿಪಡಗದ ಭಾಗದಲ್ಲಿ ಇಲಾಖೆಯ ಸಿಬ್ಬಂದಿಯೊಂದಿಗೆ ನಡೆದು ಹೋಗುತ್ತಿದ್ದೆ. ಕಾಡು ಚಿಗುರಲು ಮಳೆಗಾಗಿ ಕಾದು ನಿಂತಿತ್ತು! ಅಲ್ಲೇ ಒಂದು ಕಡೆ ಎಸ್.ಟಿ.ಎಫ್‌ನವರು ವೀರಪ್ಪನ್‌ಗಾಗಿ ಬೀಡುಬಿಟ್ಟಿದ್ದರು. ವೀರಪ್ಪನ್ ಅರಣ್ಯ ಇಲಾಖೆ ವಶದಲ್ಲಿದ್ದಾಗ ಆತ ತಪ್ಪಿಸಿಕೊಂಡು ಹೋಗದಂತಿರಲೆಂದು ಆತನೊಂದಿಗೆ ತಾನೂ ಬೇಡಿ ಹಾಕಿಸಿಕೊಂಡು ಕಾವಲು ಮಾಡುತ್ತಿದ್ದ ಗಟ್ಟಿ ಆಸಾಮಿ ಚಿಕ್ಕಮಲ್ಲ ಎಂಬ ವಾಚರ್ ಸಹ ಅಂದು ನನ್ನ ಜೊತೆ 'ಚಾರಣ' ಮಾಡುತ್ತಿದ್ದರು. ಅವರದು ನಿತ್ಯ ಇದೇ ಕಾಯಕ ಹಾಗೆ ನಡೆಯುತ್ತಿರುವಾಗ ಅವರು ತಮ್ಮ ನಿತ್ಯ ಚಾರಣದ ಜವಾಬ್ದಾರಿ ಬಗ್ಗೆ ಮಾತಿನ ನಡುವೆ ಹೇಳಿದ್ದು.

'ಕಾಡು ಕಬ್ಬ ಎಲ್ಲಾ ಹಾಳಾಗದಂಗೆ ನೋಡಬೇಕು.' ತಕ್ಷಣ 'ಕಾಡು ಕಬ್ಬ' ಎಂಬ ಅಪರೂಪದ, ಪರಿಸರ ಹಿನ್ನೆಲೆಯ ಶಬ್ದ ವಿಶೇಷ ನನ್ನ ಗಮನ ಸೆಳೆಯಿತು, ಗುರುತಿಸಿ ಕೊಂಡೆ. ಇದು ಆ ಚಾರಣದಿಂದಾಗಿಯೇ ಲಭ್ಯವಾದ ಒಂದು ಭಾಷಾ ವಿಶೇಷ ಮಾಹಿತಿ.

ಹಾಗೆ ನಡೆಯುತ್ತಿರುವಾಗಲೇ ಒಂದೆಡೆ ನಿಂತು ಅವರು ಕಾಡಿನ ನಡುವಿಗೆ ಕೈಮುಗಿದರು. ಏಕೆ? ಅಂದೆ. ಆ ದಿಕ್ಕಿನಲ್ಲಿ ಒಂದೆಡೆ ಸೋಲಿಗರ ದೇವರ ಗುಡಿ ಇದೆ ಅಂದರು. ಹಾಗೇ ಮುಂದೆ ಬರುತ್ತಿದ್ದಂತೆ, ದಾರಿಯ ಅಂಚಿನ ಒಂದು ಮರತೋರಿಸಿ

'ಅದಕ್ಕೆ ಸಿಡ್ಲು ಹೊಡೆದದೆ'-ಎಂದರು. ನೋಡಿದೆ ಅವರ ಆಲೋಚನೆ ಸರಿ ಅಲ್ಲ-ಅನ್ನಿಸಿತು. ಏಕೆಂದರೆ - ಅದೇ ಮರದಲ್ಲಿನ ಇನ್ನೊಂದು ಎತ್ತರವಾದ ಕೊಂಬೆ ಏನೂ ಐಬು ಆಗದೆ ಚೆನ್ನಾಗಿಯೇ ತಲೆ ಎತ್ತಿ ನಿಂತಿತ್ತು. ಎತ್ತರವಿದ್ದುದಕ್ಕೆ ಸಿಡಿಲು ಹೊಡೆಯದೆ, ಅದಕ್ಕಿಂತಾ ಕೆಳಗಿನದಕ್ಕೆ ಹೇಗೆ ತಾಕಲು ಸಾಧ್ಯ? ತರ್ಕವನ್ನು ಮುಂದಿಟ್ಟೆ. ಆಗ ನಡೆದ ಸಂವಾದ :

'ಅದರಾಗೆ ಹಾವಿತ್ತೂ ಅಂತ ಕಾಣ್ತದೆ... ಪೊಟರೇಗೆ ನಾಗರಾವು ಇದ್ದರೆ ಸಿಡ್ಲು ಹೊಡೀತದಂತೆ...'

'ಹಾವಿಗೆ ಯಾಕೆ ಹೊಡೀತದೆ?'

'ತಾಮ್ರ, ಕಂಚುಗೆ ಹೊಡೀತದಂತೆ. ಹಂಗೇ ನಾಗರಾವು ಇದ್ದರೆ ಆ ಮರಕ್ಕೂ ಹೊಡೀತದಂತೆ...'

'ಯಾಕೆ?'

'ಯಾಕೋ ಗೊತ್ತಿಲ್ಲ. ನಮ್ಮ ಹಿರೇರು ಹೇಳುತ್ತಿದ್ದದ್ದು ನಾನು ಹೇಳಿದೆ...'

ಕಂಚು, ಕಬ್ಬಿಣದಂತಹ ಲೋಹಗಳಿಗೆ ಸಿಡಿಲು ಹೊಡೆಯುತ್ತದೆ ಎಂಬ ಜನಪದರ ಹಳೆಯ ನಂಬಿಕೆ ನಮ್ಮ ಬಯಲು ಸೀಮೆಯಲ್ಲಿಯೂ ಇದ್ದದ್ದೆ. ಆದರೆ ನಾಗರ ಹಾವಿಗೂ ಹೊಡೆಯುತ್ತದೆ ಎಂಬುದು ಈ ಭಾಗದ ನಂಬಿಕೆ, ಹೊಸದಾಗಿ ಈ ಚಾರಣದಲ್ಲಿ ನನ್ನ ಗಮನಕ್ಕೆ ಬಂದಿತು.

ಹಾಗೇ ಮುಂದುವರೆಯುತ್ತಿದ್ದಾಗ ಅಲ್ಲೊಂದು ಕೊಂಬೆ ಮೇಲೆ ಕುಳಿತಿದ್ದ ಸಣ್ಣ ಗಾತ್ರದ ಗೂಬೆಯ ಚಿತ್ರ ಕ್ಲಿಕ್ಕಿಸಲು ಸಾಧ್ಯವೇ? - ಎಂದು ಪ್ರಯತ್ನಿಸಿದೆ. ಆಗ ಚಿಕ್ಕಮಲ್ಲು ಹೇಳಿದ್ದು 'ಅದು ಗುಬ್ಲಕ್ಕಿ ಅಂತ. ಇದರ ಫೋಟೋನ ಮನೇಲಿ ಇಟ್ಕೊಳ್ಳಬಾರದು.'

ಅಂದು ಮಧ್ಯಾಹ್ನದ ಬಳಿಕದ ತಿರುಗಾಟದಲ್ಲಿ ಬೂದಿಪಡಗದ ಇನ್ನೊಂದು ಬದಿಯ ಕಾಡಿಗೆ ಹೋದೆವು. ಪುಣಜೂರು ರೇಂಜಿನ ವಾಚರ್‌ಗಳಾದ ಬೇದೇಗೌಡ, ಜಡೇಗೌಡ (ಸು. ೩೫ ವರ್ಷ) ಹಾಗೂ ಶಿವಮಲ್ಲು (ಪ.ಜಾ) ಜೊತೆಗೆ ಬಂದರು. ಸೋಲಿಗರಲ್ಲಿ 'ಬೇದೆ' ಎಂಬ ಹೆಸರೂ ಇರುವುದು ಗಮನ ಸೆಳೆಯಿತು. ಆ ಶಬ್ದದ ನಿಷ್ಪತ್ತಿ ಗೊತ್ತಾಗಲೇ ಇಲ್ಲ. ಆ ಕಾಡಿನಲ್ಲಿನ "ಹುಲಿಕಟ್ಟೆ" ಎಂಬ ನೀರೊಣಗಿದ ಕಟ್ಟೆ ಬಳಿ ವಿಶ್ರಾಂತಿಗೆ ಕುಳಿತಿದ್ದೆವು. ಆಗ ಒಂದು ಹಕ್ಕಿ ಕೂಗಿತು. ನನಗೆ ಚಿಕ್ಕಂದಿನಿಂದ ಚಿರಪರಿಚಿತವಾದ ದನಿ ಅದು. 'ಯಾವ ಪಕ್ಷಿ ಅದು' ಅಂದೆ. ಶಿವಮಲ್ಲು "ಭೂಸ್ವಾರ"-ಅಂದ. ಬೆಂಗಳೂರು ಭಾಗದ ನಮ್ಮ ಚನ್ನಾದೇವಿಯಲ್ಲಿ ಅದನ್ನು ಬೆಳವ (ನ ಹಕ್ಕಿ) ಎಂದು ಕರೆಯುತ್ತೇವೆ. ನಮ್ಮಮ್ಮ ಹಾಡುವ ಗೀತೆಯಲ್ಲಿ ಅದನ್ನು ಬೂದು ಬೇಳವ ಎಂದು ಉಲ್ಲೇಖಿಸಲಾಗಿದೆ. ಮಂಡ್ಯಭಾಗದವರು ಅದನ್ನು ಸ್ವಾತಿ, ಸೋರೆ ಹಕ್ಕಿ ಎಂದೂ ಗುರುತಿಸುತ್ತಾರೆ. ಈತ 'ಭೂ ಸ್ವಾರ'-ಅಂದನಲ್ಲ! ಆಮೇಲೆ ಹೊಳೆಯಿತು ಆ ಹಕ್ಕಿ ಬೂದು ಬಣ್ಣಕ್ಕಿರುವುದರಿಂದ ಆ 'ಬೂದು' ಎಂಬುದೇ ಈತನ ನುಡಿಯಲ್ಲಿ 'ಭೂ' ಆಗಿದೆ ಎಂದು.

ಅದು ಪಾರಿವಾಳದಂತಹ ಒಂದು ಕಾಡುಪಕ್ಷಿ. ಅದರ ಕತ್ತಿನ ಸುತ್ತಲೂ ಮಿರುಗುವ ಮಣಿಸರದಂತಹ ವಿಶೇಷ ಕಂಡು ಬರುತ್ತದೆ. ತನ್ನ ಜೀವ ಉಳಿಸಿದ್ದಕ್ಕಾಗಿ ಮುತ್ತಿನ ಶೆಟ್ಟಿಯೊಬ್ಬ ಕೊಟ್ಟ ಮುತ್ತಿನ ಹಾರವೇ ಆ ಪಕ್ಷಿಯ ಕೊರಳ ಹಾರವಾಗಿ ಉಳಿದಿದೆ-ಎಂದು ನನ್ನ ಅಮ್ಮ ಕತೆ ಹೇಳಿದ್ದು ನೆನಪಿಗೆ ಬಂದಿತು. ಈ ಭಾಗದವರಲ್ಲಿಯೂ ಅಂತಹ ಕತೆಗಳಿರುವುದು ಶಿವಮಲ್ಲುವಿನಿಂದ ತಿಳಿದುಬಂದಿತು. ಆತ ಆ ಹಕ್ಕಿ ಬಗ್ಗೆ ಪ್ರಸ್ತಾಪಿಸುತ್ತಲೇ ಸ್ವಯಂ ಸ್ಫೂರ್ತನಾಗಿ ನಿರೂಪಿಸುತ್ತಾ 'ಅದು, ಉಪ್ಪುನ್‌ಸೆಟ್ಟಿ ನೀತರ್‍ನ್; ನಾ ಪರ್' ಅಂತ ಕೂಗ್ತದೆ - ಅಂದ. ಕುತೂಹಲದಿಂದ 'ಅಂದರೆ!' ಎಂದೆ. ಆತ ಅರ್ಥ ಮಾಡಿಸುವವನಂತೆ ಒಂದು ಕತೆಯನ್ನೇ ಹೇಳಿದ.

'ಉಪ್ಪುನ್ ಸೆಟ್ಟಿ ಕಾಡಿಗೋಗಿದ್ದಾಗ ಮರಿ ಸಿಕ್ತು. ಇನ್ನ ಹಾರ್ ಬಿಡ್ತದೆ-ಅಂತ, ಅದ್ರ ರೆಕ್ಕೆ ಪುಕ್ಕಾ ಎಲ್ಲಾ ತರದು ಬ್ಯಾಗೊಳಗೆ ಇಕ್ಕಂಡಿದ್ದ. ಹೋಯ್ತಾ, ಹೋಯ್ತಾ ಅದು ಪುರ್ ಅಂತ ಹಾರ್ ಬಿಡ್ತನಿ. ಆವಾಗ ಕೂಗ್ತು : 'ಉಪ್ಪುನ್ ಸೆಟ್ಟಿ, ನೀ ತರ್‍ನ ; ನಾ ಪರ್'- ಅಂತು : ನೀನು ರೆಕ್ಕೆ ತರ್‍ದೆ ನಾನು ನಿನಗೆ ಸಿಗದೆ ಹಾರ್‍ದೆ-ಅಂತ.

ಆತ ಮುಂದುವರೆದು ಇನ್ನೂ ಕುತೂಹಲದ ಕತೆ ಹೇಳಿದ. 'ಇದರಾಗೇ ಇನ್ನೊಂದು ಪಕ್ಷಿ ಇರ್‍ತದೆ. ಅದು ಇನ್ನೂ ಚಿಕ್ಕದು ಕೈ ಸ್ವಾರೆ-ಅಂತ. ಅದಕ್ಕೆ ಕತ್ತಿನ ಸುತ್ತ 'ಸರ' ಇರಲ್ಲ -ಅದು ಕೈಗೆ ಸಿಕ್ಕಿದ್ದರಿಂದ ಕೈಸ್ವಾರೆ ಅಂತಾರೆ. ಅದು 'ಕೂಸು ಕ್ವಾ ; ದ್ವಾಸೆ ಕ್ವಾ'-ಅಂತ ಕೂಗ್ತದೆ.

'ಕೇಸನ ಪಕ್ಷಿ ಅಂತ ಒಂದು ಅದೆ. ಅದು 'ಕೇತ ಸತ್ತ ; ಮಕ್ಕ ಕೆಟ್ಟ'- ಅರುಚ್ತದೆ. ಅದು ಬಿಳಿಗಿರಿರಂಗನ ಸಾಪ-ಅಂತ ಹಿರೀಕರು ಹೇಳ್ತಾರೆ'

ಜೊತೇಲಿ ಇದ್ದ ಸೋಲಿಗರೂ ಅದನ್ನು ಅನುಮೋದಿಸಿದರು

ಬಗನಿಗೂಟದ ಕತೆ

'ಬಗನಿಗೂಟ' ಎಂಬುದು ಕನ್ನಡ ಜಾನಪದ ವಲಯದಲ್ಲಿ ಪ್ರಸಿದ್ಧ ನುಡಿಗಟ್ಟೇ ಆಗಿ ಹೋಗಿದೆ. ಇದರ ಹಿನ್ನೆಲೆಯಲ್ಲಿ ಒಂದು ಕತೆಯೂ ಇದೆ ಅಥವಾ ಆ ನುಡಿಗಟ್ಟು ಅರ್ಥವಾಗಬೇಕಾದರೆ ಈ ಕತೆಯನ್ನು ಕೇಳಲೇಬೇಕು. ನಮ್ಮ ಚಾರಣದ ಅಂಗವಾಗಿ ಆ ಕತೆಯೂ ಒಮ್ಮೆ ಪ್ರಸ್ತಾಪಕ್ಕೆ ಬಂದಿತು ;

ಸಂಜೆ ಅದೇ 'ಪಡಗ'ದ ಪ್ರಖ್ಯಾತ ವೀರಪ್ಪನ್ ಕೈಕೊಟ್ಟ 'ಐಬಿ'ಯ ಎದಿರು ಅಂಗಳದಲ್ಲಿ ಕುಳಿತಿದ್ದೆವು. ಬೆಂಗಳೂರಿನಿಂದ ಅಪರಾಹ್ನವಷ್ಟೇ ಬಂದಿದ್ದ ಗೆಳೆಯರ ತಂಡವೂ ಜತೆಗಿತ್ತು. ಮೇಲೆ ಮಿನುಗುವ ಚುಕ್ಕೆಗಳು ; ಕೆಳಗೆ, ಹತ್ತಿರದಲ್ಲಿಯೇ ಸಾಗಿ ಹೋಗುತ್ತಿದ್ದ ಹಿಂಡು ಹರಿಣಗಳ ಕಣ್ಣುಗಳಷ್ಟೇ ನಮ್ಮ ಕುತೂಹಲದ ಬ್ಯಾಟರಿ ಬೆಳಕಿಗೆ ಮಿನುಗಿ, ಕತ್ತಲಲ್ಲಿ ಸಾಲು ಹಣತೆಗಳು ಹರಿದು ಹೋಗುತ್ತಿದ್ದಂತಹ ಅಪರೂಪದ ಅನುಭವದ ಜೊತೆಗೆ ಕಾಡಿನಲ್ಲಿ ಕಂಡದ್ದು, ಕೇಳಿದ್ದರ ವಿನಿಮಯಗಳೂ ನಡೆಯುತ್ತಿದ್ದವು. ಆಗ ಯಾವುದೋ ಹಂತದಲ್ಲಿ ಬಗನಿಮರದ ಪ್ರಸ್ತಾಪಬಂದಿತು. ಅದು ಹೇಗಿರುತ್ತದೆ? ಎಂಬ ಪ್ರಶ್ನೆಯೂ ಎದ್ದಿತು. ಮಾತಿನಲ್ಲಿ ಒಬ್ಬ 'ಶ್ಯಾನು

ಭೋಗ'ರೂ ಭಾಗಿಯಾಗಿದ್ದುದರಿಂದ, ಚರ್ಚೆಗೆ ಭಿನ್ನ ಆಯಾಮವೂ ಬಂದಂತಾಯಿತು. ವಲಯಾಧಿಕಾರಿ ಬಂಧು ಅಶ್ವತ್ಥನಾರಾಯಣ ಅವರು -ಬಗನಿಗೂಟದ ಕತೆ ಗೊತ್ತಾ? ಎಂದರು. ಹಿಂದೆ ಯಾವಾಗಲೋ ಕೇಳಿದ್ದರೂ ಆ ಕ್ಷಣಕ್ಕೆ ನೆನಪಿಗೆ ಬರಲಿಲ್ಲ. ಹೇಳಿದರು:

ಒಬ್ಬ ಶ್ಯಾನುಭೋಗನಿಗೆ ಸಾಯುವ ಹೊತ್ತಿನಲ್ಲಿ ಚಿಂತೆ ಬಂದಿತು. ಮಗ ಸ್ವಲ್ಪ ದಡ್ಡ ನನ್ನ ಹಾಗೆ ಅವನೂ ಊರವರ ಸೇವೆಯಿಂದ ಸುಖ ಜೀವನ ಮಾಡುವಂತೆ ಮಾಡುವುದು ಹೇಗೆ ? ಕೊನೆಗೆ ಊರ ಮುಖಂಡರನ್ನೆಲ್ಲಾ ಕರೆಸಿ- ನಿಮ್ಮಂಥಾ ಒಳ್ಳೇ ಜನರನ್ನ ಬಿಟ್ಟುಹೋಗೋಕೆ ನನಗೆ ಮನಸ್ಸಿಲ್ಲ. ಆದ್ದರಿಂದ, ನನ್ನದೊಂದು ಕೊನೇ ಆಸೇನ ನೀವು ಈಡೇರಿಸಿಕೊಡಬೇಕು. ನಾನು ಸತ್ತ ತಕ್ಷಣ ಬಗನಿಗೂಟಾನ ನನ್ನ ಹಿಂದಿನಿಂದ ಹೊಡೆದುಬಿಟ್ಟರೆ ನಾನು ಇಲ್ಲೇ ಇದ್ದಂಗೆ ಆಗ್ತದೆ, ನನ್ನ ಆತ್ಮ-ತೃಪ್ತಿಯಿಂದ ಸ್ವರ್ಗಸೇರುತ್ತದೆ-ಅಂತ ಹೇಳಿ ಅವರಿಂದ ಭಾಷೆ ತೆಗೆದುಕೊಂಡ. ಅದರಂತೆ ಆ ಹಳ್ಳೀ ಜನ ಆತ ಸತ್ತ ತಕ್ಷಣ ಬಗನಿಗೂಟ ಹೊಡೆದರು.

ಆ ಕ್ಷಣಕ್ಕಾಗಿಯೇ ಕಾಯುತ್ತಿದ್ದ ಶ್ಯಾನುಭೋಗನ ಮಗ ತನ್ನ ಅಪ್ಪ ಮೊದಲೇ ಹೇಳಿಕೊಟ್ಟಿದ್ದ ಉಪಾಯದಂತೆ ಹೋಗಿ ಪೊಲೀಸರಿಗೆ ದೂರು ಕೊಟ್ಟ-ನನ್ನಪ್ಪನನ್ನ ಊರವರು ಸಾಯಿಸಿದ್ದಾರೆ-ಅಂತ. ಪೊಲೀಸರು ಬಂದಾಗ ಹೆದರಿದ ಜನ ಶ್ಯಾನುಭೋಗನ ಮಗನಿಗೆ ಆತ ಕೇಳಿದಷ್ಟು ಹಣ, ಜಮೀನು ಎಲ್ಲಾ ಕೊಟ್ಟು ಆತನೊಂದಿಗೆ ರಾಜಿ ಮಾಡಿಕೊಂಡರು. ಹೀಗೆ, ಆತನ ಸುಖ ಜೀವನಕ್ಕೆ ಬೇಕಾದಷ್ಟು ಹಣ, ಊರವರ ಭಯ - ಗೌರವ ಎಲ್ಲವೂ ಆತನಿಗೆ ಆ 'ಬಗನಿಗೂಟ'ದಿಂದ ದೊರೆತವು!

ಹೀಗೆ ಚಾರಣದಲ್ಲಿ ಮರ, ಗಿಡ, ಪಕ್ಷಿ, ಪ್ರಾಣಿ, ಬೆಟ್ಟ, ಸ್ಥಳ, ಜನಾಂಗ... ಎಲ್ಲದರ ಬಗೆಗೆ ಜಾನಪದ ಸಂಗತಿಗಳು ಪ್ರಸ್ತಾಪವಾಗುವ ಸಂದರ್ಭಗಳಿರುತ್ತವೆ. ಗುಡ್ಡದ ಮೇಲಿನ ಬಂಡೆಗಳ ವಿನ್ಯಾಸಕ್ಕೂ ಹೇಗೆ ಐತಿಹ್ಯ ಪುರಾಣ ಹುಟ್ಟಿಕೊಳ್ಳಬಹುದು ಎಂಬುದಕ್ಕೆ ಚಿತ್ರದುರ್ಗ ಬೆಟ್ಟದ ಮೇಲೆ 'ಹಡಗಿ'ನಂತೆ ಕಾಣುವ ಒಂದು ಬಂಡೆ ಹಾಗೂ ಒಂದು ಕಡೆಯಿಂದ ನೋಡಿದರೆ ಆನೆಯಂತೆ ಕಾಣುವ, ಇನ್ನೊಂದು ಬದಿಯಲ್ಲಿ 'ಗಣೇಶ' ಇರುವ ಬಂಡೆಯ ಬಗೆಗೆ ಇರುವ ಜನಪದ ಪುರಾಣಗಳನ್ನು ನೆನಪಿಸಿಕೊಳ್ಳಬಹುದು. ಹಾಗೆಯೇ, ಅಲ್ಲಿನ "ಅಕ್ಕ ತಂಗೆಯರ ಕೊಳದ ಬಗೆಗಿನ ಜನಪದ ಐತಿಹ್ಯವನ್ನೂ ಗಮನಿಸಬಹುದು. ಅಲ್ಲಿನ ತುಪ್ಪದ ಕಣಜ (ಸಂಗ್ರಹಾಗಾರ) ನಮಗೆ ಪ್ರಾಚೀನ ಜನಪದ ಆಹಾರ ವಿಜ್ಞಾನವನ್ನು (ವಿಶೇಷವಾಗಿ 'ಜಟ್ಟಿ'ಗಳ ಆಹಾರ ವೈದ್ಯ ವಿಶೇಷಕ್ಕೆ ಸಂಬಂಧಿಸಿ), ಮದ್ದು ಅರೆಯುವ (ಬೀಸುವ) ಕಲ್ಲುಗಳು ಜಾನಪದೀಯ ತಂತ್ರಗಾರಿಕೆಯ ಕುಶಲತೆಯನ್ನು ತಿಳಿಸಿಕೊಡುವ ಸಾಕ್ಷಿಗಳಾಗಿ ಉಳಿದಿವೆ.

ಐತಿಹ್ಯಗಳಲ್ಲಿ ಚಾರಿತ್ರಿಕ ಅಂಶಗಳು ಅಡಗಿವೆ; ಆ ಮೂಲಕ ಚರಿತ್ರೆಯ ಗತಿಯನ್ನು ಅಧ್ಯಯನ ಮಾಡಬಹುದು ಎಂಬ ನಂಬಿಕೆಗಳು ಜಾನಪದ ವಿದ್ವಾಂಸರಲ್ಲಿವೆ. ಅಂತಹ ಒಂದೆರಡು ಪ್ರಯತ್ನಗಳೂ ನಡೆದಿವೆ. ಆದರೂ ಎಲ್ಲ ಐತಿಹ್ಯ, ಸ್ಥಳ ಪುರಾಣಗಳೂ ವಿಶ್ವಾಸನೀಯವಲ್ಲ-ಎಂಬ ಎಚ್ಚರಿಕೆಯೂ ಅಧ್ಯಯನಕಾರಲ್ಲಿರಬೇಕು. ಉದಾಹರಣೆಗೆ-

ಕೋಲಾರ ಜಿಲ್ಲೆಯ ಅವನಿಯ ಬೆಟ್ಟದಲ್ಲಿಯೇ ವಾಲ್ಮೀಕಿಯ ಆಶ್ರಮವಿದ್ದು, ಅಲ್ಲಿಯೇ ಸೀತೆಯು ಲವಕುಶರೊಂದಿಗೆ ಇದ್ದಳು; ಬಂಡೆ ಮೇಲಿನ ಕೊಳದ ದಡದಲ್ಲಿ ಆಕೆ ಹಣತೆ ಹಚ್ಚಿಟ್ಟು, ಬಟ್ಟೆ ಒಗೆಯುತ್ತಿದ್ದಳು ಎಂದೋ ಹಗಲೊತ್ತು ಆಕೆಗೆ ಪುರುಸೊತ್ತು ಇರಲಿಲ್ಲವೇ? ಎಂದು ಪ್ರಶ್ನಿಸಿದರೆ ಧಾರ್ಮಿಕ ಶ್ರದ್ಧೆಯಿರದ ಅಧಿಕ ಪ್ರಸಂಗಿಗಳಾಗಿ ಬಿಡುತ್ತೀರಿ. ಗುಹೆಯಂತಿರುವ ಒಂದು ಬಂಡೆಗಲ್ಲು 'ಮನೆ'ಯ ಚಾವಣಿ ಬಂಡೆಯಲ್ಲಿನ ತಗ್ಗುಗಳನ್ನು ತೋರಿಸಿ ಅವು ಲವಕುಶರು ಮಲಗುತ್ತಿದ್ದ ತೊಟ್ಟಿಲುಗಳೆಂದೋ, ಸೀತೆ ಅಡುಗೆ ಮಾಡುತ್ತಿದ್ದ ಪಾತ್ರೆ ಪಡಗಗಳೆಂದೋ ತಾವು ಸ್ವತಃ ಕಂಡವರಂತೆ, ವಾಲ್ಮೀಕಿಗಿಂತಲೂ ಮಿಗಿಲಾಗಿ ಕತೆ ಹೇಳುತ್ತಾರೆ. ಸ್ವಲ್ಪ ಬುದ್ಧಿ ಇರುವ ಯಾರಿಗೇ ಆದರೂ ಇವು ನೈಸರ್ಗಿಕ ಕಾರಣಗಳಿಂದ, ಶಿಲೆಯು ಶಿಥಿಲವಾಗಿ ಉಂಟಾದ ಗುಳಿಗಳು ಎಂಬುದು ಸುಲಭವಾಗಿ ಅರಿವಾಗುತ್ತದೆ. ಕೆಲವೆಡೆ ಯಾರೋ ಕಲ್ಲು ಕುಟಿಗ ಬೇಕಂತಲೇ ಉಳಿಯಿಂದ ಕೆತ್ತಿ ಕೆಲವು ಗುರುತು ಮಾಡಿರುವುದೂ (ಉದಾ. 'ಹಣತೆ'ಇಟ್ಟ ಸ್ಥಳ) ಸ್ಪಷ್ಟವಾಗುತ್ತದೆ. ಕೆಲವು ಕಿಡಿಗೇಡಿಗಳು 'Tolet' ಅನ್ನು 'Toilet' ಎಂದು ತಿದ್ದಿ ದಾರಿತಪ್ಪಿಸುವುದಿಲ್ಲವೇ ಹಾಗೆ, ಆದರೂ ಗ್ರಾಮೀಣರು ಪ್ರವಾಸಿ ಚಾರಣಿಗರು ಸಹಜ ಮುಗ್ಧತೆ ಹಾಗೂ ಧಾರ್ಮಿಕ ಶ್ರದ್ಧೆಯಿಂದ ಆ ಎಲ್ಲಾ ಕತೆಗಳನ್ನೂ ನಂಬಿ ಕೈ ಮುಗಿಯುತ್ತಾರೆ, ಕತೆ ಹೇಳಿದವರಿಗೆ ಕಾಸನ್ನೂ ನೀಡುತ್ತಾರೆ. ಇತಿಹಾಸದ ಅಧ್ಯಯನಕಾರರು ಇದಕ್ಕಿಂತ ಭಿನ್ನವಾಗಿ ಮಾತನಾಡ ತೊಡಗಿದರೆ, ಸಿಟ್ಟಾಗುವ ಮಹಾತ್ಮರೂ ಅಲ್ಲಿದ್ದಾರೆ!

ನಮ್ಮ ಜನ ತಲೆಮಾರಿನಿಂದಲೂ - ಪಿತ್ರಾರ್ಜಿತ ಆಸ್ತಿಯಂತೆ - ಅ ವೈಜ್ಞಾನಿಕ ಸಂಗತಿಗಳನ್ನೂ ಹೇಗೆ ನಂಬುತ್ತಾ, ಜತನದಿಂದ ಉಳಿಸಿಕೊಂಡು ಬಂದಿದ್ದಾರೆ ಎಂಬುದಕ್ಕೆ ಇದೇ ಚಾರಣದಲ್ಲಿಯೇ ಇನ್ನೊಂದು ನಿದರ್ಶನ ದೊರೆಯಿತು. ರಾತ್ರಿ 'ಬಗನಿಗೂಟದ ಕತೆ'ಯ ಶ್ರೋತೃಗಳಾಗಿದ್ದ ನಮ್ಮ ತಂಡ ಬೆಳಿಗ್ಗೆ ಹಿಂದಿರುಗುವಾಗ, ದಾರಿಯಲ್ಲಿ ಕಾಣುತ್ತಿದ್ದ ಯಾವುದಾವುದೋ ಮರ, ಪೊದೆ, ಬೇಲಿ, ಗಿಡ ಇತ್ಯಾದಿಗಳಿಂದ ಪ್ರೇರಿತರಾಗಿ ಒಬ್ಬರು 'ನಮ್ಮ ಮದುವೆಯ ಧಾರೆ ಕಂಭಕ್ಕೆ ಅತ್ತಿಕೊಂಬೆ ಹಾಗೂ ಕೋಲುಗಳ್ಳಿ ಏಕೆ ಕಟ್ಟುತ್ತಾರೆ?' ಎಂಬ ಕುತೂಹಲದ ಪ್ರಶ್ನೆಯನ್ನು ನನ್ನ ಮುಂದಿಟ್ಟರು. ನಾನು, ಸಾಂಪ್ರದಾಯಿಕ ನಂಬಿಕೆಯಲ್ಲಿ ಅದಕ್ಕೆ ಕಲ್ಪಿಸಿರುವ ಫಲವಂತಿಕೆ ಗುಣ ಇತ್ಯಾದಿಗಳ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡುತ್ತಿದ್ದೆ. ಆಗ, ಅಲ್ಲಿದ್ದ ಕೆಲವರಿಗೆ ಕೋಲುಗಳ್ಳಿಯ ಪ್ರಭೇದ ಅರ್ಥವಾಗಲಿಲ್ಲ. ವಿವಿಧ ಬಗೆಯ ಕಳ್ಳಿ ಗಿಡಗಳ ಬಗೆಗೆ ವಿವರಿಸತೊಡಗಿದಾಗ, ಅದೇ ಶ್ಯಾನುಭೋಗರು - 'ಕಳ್ಳಿ ಬಹಳ ಶ್ರೇಷ್ಠವಾದ್ದು, ಅದರ ಬೇರಿನಲ್ಲಿ ಗಣೇಶ ಇರ್ತಾನೆ. ಅದಕ್ಕೇ, ಆ ಗಿಡದ ರೆಕ್ಕೆಗಳು ಯಾವ ಯಾವ ದಿಕ್ಕಿಗೆ ಚಾಚಿಕೊಂಡಿದ್ದರೂ, ಹೂವುಗಳು ಅದರ ಬುಡಕ್ಕೇ ಬಂದು ಬೀಳುತ್ತವೆ, ಹೂ ಸಹ ಹೇಗಿರುತ್ತವೆ- ಗೊತ್ತಾ?' ಎಂದರು.

ನಾನು ಚಿಕ್ಕಂದಿನಿಂದಲೂ ನೋಡಿ, ಆಕರ್ಷಿತನಾದ ಹೂ ಅದು. ನಮ್ಮ ಅಶೋಕ

ಸ್ಥಂಭದ ತುದಿಗೆ ನಾಲ್ಕು ಸಿಂಹಗಳು ಕುಳಿತಂತೆ ಈ ಹೂವಿನ ಅಗ್ರದಲ್ಲಿಯೂ ವಿಶಿಷ್ಟ ವಿನ್ಯಾಸಗಳಿರುತ್ತವೆ. ಆದರೆ, ಅದರಿಂದಾಗಿಯೇ ಅವು ಗಿಡದ ಬುಡಕ್ಕೇ ಓಡಿಬಂದು ಬೀಳುತ್ತವೆ - ಎಂಬುದು ಅವಾಸ್ತವಿಕ. ಹಾಗೆಯೇ, ಎಕ್ಕದ ಗಿಡದ ಬೇರು ಗಣೇಶನ ಸೊಂಡಲಿನಂತೆ ಬೆಳೆದಿರುತ್ತದೆ ಎಂಬುದೂ (ಆದ್ದರಿಂದ ಅದನ್ನು ಪೂಜಿಸಿದರೆ ಒಳ್ಳೆಯದಾಗುತ್ತದೆ ಎಂಬುದೂ) ಅವಿವೇಕದ್ದು. ಇದನ್ನು ನೂರಾರು ವರ್ಷಗಳಿಂದ ಕೆಲವರು ಹೇಳುತ್ತಾ, ಕೇಳಿದ ಜನ ಅದನ್ನು ನಂಬುತ್ತಾ ಬಂದಿದ್ದಾರೆ. ಇದರ ಅರಿವಿದ್ದ ನಾನು ತಕ್ಷಣ ಪ್ರಶ್ನಿಸಿದೆ: 'ಎಕ್ಕದ ಗಿಡದ ಹತ್ತಿರ ನೀವು ಯಾರಾದರೂ ಹೋಗಿ ನೋಡಿದ್ದೀರಾ?'

ಒಬ್ಬಾತ 'ಹಂಗಂತ ಪುರೋಹಿತರು ಹೇಳ್ತಾರೆ. ಅದು ನಿಜ' ಎಂದು ದೃಢ ವಿಶ್ವಾಸದಿಂದಲೇ ಪ್ರತಿಕ್ರಿಯಿಸಿದ. ಉಳಿದವರು ಸುಮ್ಮನಿದ್ದರು. 'ಬರೀ ನಂಬಿಕೆ ಇಟ್ಟುಕೊಳ್ಳುವ ಬದಲು ಪರೀಕ್ಷಿಸಿಯೇ ಬಿಡೋಣ ಬನ್ನಿ'-ಎಂದೆ. ಪಯಣ ನಿಂತಿತು. ವಿಶೇಷವೆಂದರೆ ಅಲ್ಲಿನ ಬೇಲಿ ಸಾಲು, ಬಯಲಿನಲ್ಲಿಯೇ ಎಲೆಗಳ್ಳಿ, ಮಂಡಗಳ್ಳಿ, ಪಾಪಾಸುಕಳ್ಳಿ, ಕೋಲುಗಳ್ಳಿ, ಹೀಗೆ ಕಳ್ಳಿಯ ನಾಲ್ಕಾರು ಪ್ರಭೇದಗಳು ಒಂದೆಡೆಯೇ ಸಿಕ್ಕಿಬಿಟ್ಟವು. ಒಂದಕ್ಕೊಂದಕ್ಕೆ ಇರುವ ವ್ಯತ್ಯಾಸ ತೋರಿಸಿದೆ. ಕೆಲವರಿಗೆ ಅಷ್ಟು ವಿಧಗಳಿರುವುದೇ ಅದ್ಭುತವಾಗಿದ್ದಿತು. ಅಲ್ಲಿಯೇ ಬಯಲಿನಲ್ಲಿ ಎಕ್ಕದ ಪೊದೆಗಳು ಕಂಡವು. 'ಹೂವುಗಳು ಎಲ್ಲಿ ಉದುರಿವೆ, ನೋಡಿ'- ಎಂದೆ. ಶ್ಯಾನುಭೋಗರು ತಮ್ಮ ಕಣ್ಣುಗಳನ್ನು ಅನುಮಾನಿಸುವಂತಿರಲಿಲ್ಲ. 'ಎಲ್ಲಾ ಕಡೆಯೂ ಬಿದ್ದಿವೆ. ಗಾಳಿಗೆ ತೂರಿಕೊಂಡು ಬಂದು ಕೆಲವು ಬುಡದ ಕಡೆ ಬಿದ್ದಂತಿವೆ, ಅಷ್ಟೆ. ನಾನು ಇಷ್ಟು ವರ್ಷ ಬೇರೆಯವರು ಹೇಳಿದ್ದನ್ನೇ ನಿಜ ಎಂದು ನಂಬಿದ್ದೆನಲ್ಲ! ಅದಕ್ಕೇ, ಪರೀಕ್ಷಿಸಿ ನೋಡಬೇಕು -ಎಂದು ಸತ್ಯವನ್ನು ಒಪ್ಪಿಕೊಂಡ ದನಿಯಲ್ಲಿ ಉದ್ಗರಿಸಿದರು.

ನನ್ನ ಚಾರಣ ಹೀಗೆ ಹೊಸ ಅರಿವು ಮೂಡಿಸುವಲ್ಲಿ ಸಾರ್ಥಕವಾಗಿತ್ತು.! ಚಾರಣದ ಫಲಪ್ರಾಪ್ತಿಯಲ್ಲಿ ಈ ಅಂಶವು ಸೇರುತ್ತದೆ.

ಒಟ್ಟಾರೆ, 'ಚಾರಣ ಜಾನಪದ'ವು ಚಾರಣದ ನೆವದಲ್ಲಿ ಪರಿಸರ, ಸಂಸ್ಕೃತಿಗೆ ಸಂಬಂಧಿಸಿದ ಜಾನಪದವನ್ನು ಅಧ್ಯಯನಿಸುವುದಾಗುತ್ತದೆ. ಚಾರಣದುದ್ದಕ್ಕೂ ಕಾಣಬರುವ ಬೆಟ್ಟ, ಗುಡ್ಡ, ಗಿಡ, ಮರ, ಪ್ರಾಣಿ, ಪಕ್ಷಿ, ಕೀಟ, ನೀರು ನೆಲೆ, ಜನಾಂಗ - ಇಂತಹ ಎಲ್ಲದರ ಬಗೆಗೆ ಕೇಳಿಬರುವ ಜನಪದ ಕತೆ, ಐತಿಹ್ಯ, ಪುರಾಣ, ನಂಬಿಕೆ, ನುಡಿಗಟ್ಟು (ಗೀತೆ, ಗಾದೆ, ಒಗಟುಗಳೂ ಇರಬಹುದು), ಆಹಾರ, ವೈದ್ಯ ಮೊದಲಾದವನ್ನು ಸಂಗ್ರಹಿಸಿ, ವಿಶ್ಲೇಷಿಸುವುದಾಗಿರುತ್ತದೆ. ಚಾರಣದ ಮೂಲಕ ನಮ್ಮ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ, ಬೌದ್ಧಿಕ ಅರಿವನ್ನು ವಿಸ್ತರಿಸಿಕೊಳ್ಳುವುದೂ ಆಗಿರುತ್ತದೆ. ಚಾರಣ ಜಾನಪದದಲ್ಲಿ ಕೆಲವೊಮ್ಮೆ ಸ್ಥಳ ಪುರಾಣ ಇತ್ಯಾದಿ ಸೇರಿದರೂ ಚಾರಣದ ಸಂದರ್ಭದಲ್ಲಿ ಅವಕ್ಕೆ ವಿಭಿನ್ನ ದೃಷ್ಟಿಕೋನ ಪ್ರಾಪ್ತವಾಗುವುದರಿಂದ, 'ಚಾರಣ ಜಾನಪದ'ವನ್ನು ಪ್ರತ್ಯೇಕ ಪ್ರಕಾರವಾಗಿಯೇ ಅಧ್ಯಯನ ಮಾಡುವ ಅಗತ್ಯವಿದೆ.

ಭಗವಾನ್ ಬುದ್ಧನ ಉಪದೇಶಾಮೃತ

—ಡಾ. ಆರ್. ರಾಮಕೃಷ್ಣ

ಯೋ ಧಮ್ಮಂ ಪಸ್ಸತಿ, ಸ ಮಂ ಪಸ್ಸತಿ
ಯೋ ಮಂ ಪಸ್ಸತಿ, ಸ ಧಮ್ಮಂ ಪಸ್ಸತಿ
'ಯಾರು ಧರ್ಮವನ್ನು ಕಾಣುವರೋ ಅವರು ನನ್ನನ್ನು ಕಾಣುವರು ;
ಯಾರು ನನ್ನನ್ನು ಕಾಣುವರೋ ಅವರು ಧರ್ಮವನ್ನು ಕಾಣುವರು'

- ಭಗವಾನ್ ಬುದ್ಧ

ಸಿದ್ಧಾರ್ಥ ಬುದ್ಧನಾದ ಕಥೆ ಜಗತ್ತಿಗೇ ಗೊತ್ತು. ಭಾರತೀಯ ಜೀವನ ದರ್ಶನದ ಮೇಲೆ ಅಪ್ರತಿಮ ಪ್ರಭಾವ ಬೀರಿದ ಬುದ್ಧನ ಬದುಕೇ ಇತರರಿಗೆ ಮಾರ್ಗದರ್ಶನ ನೀಡುವಂಥದು. ಬುದ್ಧ ಎಂಬುದರ ಅರ್ಥ ನಿದ್ದೆಯಿಂದ ಎಚ್ಚೆತ್ತವನು, ತಿಳಿದವನು, ಜ್ಞಾನಿ ಎಂದು. ಆಧ್ಯಾತ್ಮಿಕ ಜಾಗೃತಿ ಪಡೆದ ವ್ಯಕ್ತಿಸ್ಥಿತಿಯೂ ಬುದ್ಧ ಎನಿಸಿಕೊಳ್ಳುತ್ತದೆ.

ಮಾನವ ಯಾವುದನ್ನೂ ಅತ್ಯಂತ ಪವಿತ್ರ ಪೂಜ್ಯ ಭಾವನೆಯಿಂದ ನೋಡುವನೋ ಮತ್ತು ಅದರೊಡನೆ ಅವನು ಇರಿಸಿಕೊಳ್ಳುವ ಆತ್ಮೀಯ ಸಂಬಂಧವನ್ನು 'ಧರ್ಮ' ಎಂದು ಸ್ಥೂಲವಾಗಿ ಹೇಳಬಹುದು, ಧರ್ಮವು ಮಾನವನ ಅಂತರಂಗದ ಆವಶ್ಯಕತೆ. ನೀರಿನ ಧರ್ಮವು ಆರ್ದ್ರತೆ ; ಬೆಂಕಿಯ ಧರ್ಮವು ಉಷ್ಣತೆ ; ಮಾನವ ಧರ್ಮವು ಅಂತರ್ಮುಖತೆ. ಧರ್ಮವು ಶುದ್ಧ ಮಾನವೀಯ ಭಾವನೆಗಳನ್ನು ಒಳಗೊಂಡಾಗ ವ್ಯಕ್ತಿ ಸಮಾಜ, ಆ ಧರ್ಮಕ್ಕೆ ಶಿರಬಾಗುತ್ತದೆ ; ಧರ್ಮ ಮಾರಕ ಭಾವನೆಗಳು ಅತಿಯಾದಾಗ ಅದೇ ವ್ಯಕ್ತಿ ಸಮಾಜ ಪ್ರತಿಭಟಿಸುತ್ತದೆ. ಇದರ ಫಲವಾಗಿಯೇ ಪ್ರಪಂಚದಲ್ಲಿ ಅನೇಕ ಧರ್ಮಗಳು ಉದಯವಾಗಿವೆ. ಇವುಗಳ ಪೈಕಿ ಬೌದ್ಧ ಧರ್ಮವೂ ಒಂದು. ಬದುಕಿನ ಹಲವಾರು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಅಂತರಂಗ ಶುದ್ಧಿಯ ಮಾರ್ಗವನ್ನು ಹುಡುಕಿದ ಅನೇಕ ಧರ್ಮಗಳಲ್ಲಿ ಬೌದ್ಧಧರ್ಮ ಒಂದು ಉತ್ತಮ ನಿದರ್ಶನ. ಬದುಕಿನಲ್ಲಿ ಅನಿವಾರ್ಯವಾಗಿ ಕಾಣಿಸಿಕೊಳ್ಳುವ ದುಃಖಕ್ಕೆ ಕಾರಣವನ್ನು ಹುಡುಕಿ ಅದಕ್ಕೆ ತಕ್ಕ ಪರಿಹಾರವನ್ನೂ ಕಂಡುಕೊಳ್ಳುವುದೇ ಬೌದ್ಧ ಧರ್ಮದ ಪ್ರಮುಖ ಗುರಿ.

ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದ ಬಳಿಕ ಮೊತ್ತ ಮೊದಲು ಅವನು ಧರ್ಮಬೋಧೆ ಮಾಡಿದುದು, ವಾರಣಾಸಿಯ ಬಳಿಯಿರುವ ಸಾರನಾಥದ ಮೃಗ

ಪತ್ತನದಲ್ಲಿ. ಬುದ್ಧ ಹುಟ್ಟುವ ಮೊದಲಿನಿಂದಲೂ 'ವರ್ಣಾಶ್ರಮ ಧರ್ಮ ಪಾಲನೆಯೇ ಮೋಕ್ಷ ಸಾಧನೆ' ಎಂಬ ನಂಬಿಕೆ ಬಲವಾಗಿತ್ತು. 'ಯೋಗ ಮಾರ್ಗವನ್ನು ಅನುಸರಿಸಿ ರಾಜಯೋಗ ಹಠಯೋಗಕ್ಕೆ ಅಧಿಕ ಪ್ರಾಶಸ್ತ್ಯವನ್ನು ಕೊಡುತ್ತಿದ್ದ ಕಾಲವದು. ಯೋಗಮಾರ್ಗವನ್ನು ಬಿಟ್ಟು ಬೇರಾವ ಮಾರ್ಗದಿಂದಲೂ ದೈವಸಾಕ್ಷಾತ್ಕಾರವಾಗದು ಎಂಬುದಾಗಿ ಪಂಡಿತರು ಹಾಗೂ ಯೋಗಿಗಳು ನಂಬಿದ್ದರು. ಆದರೆ ಈ ವಿಚಾರದಲ್ಲಿ ಬುದ್ಧನ ಅನುಯಾಯಿಗಳು ಸಂಶಯ ವ್ಯಕ್ತಪಡಿಸಿದಾಗ, ಬುದ್ಧ ತನ್ನ ತಾತ್ವಿಕ ನಿಲುವನ್ನು ಅವರ ಮುಂದೆ ಪ್ರಕಟಪಡಿಸಿದ ಬಗೆಯನ್ನು ಇಲ್ಲಿ ಪರಿಭಾವಿಸಬಹುದು:

ಸಂಸಾರವನ್ನು ತ್ಯಜಿಸಿ ಅರಣ್ಯ ಸೇರುವುದರಿಂದ ಮೋಕ್ಷ ಲಭಿಸುವುದಿಲ್ಲ. ಪ್ರಾಪಂಚಿಕ ಭೋಗದಲ್ಲಿ ತೊಡಗಿರುವುದರಿಂದಲೂ ಮೋಕ್ಷ ಲಭಿಸಲಾರದು. ವ್ಯಕ್ತಿ ಭೋಗಿಯಾಗಿರಕೂಡದು. ಇಂದ್ರಿಯಗಳನ್ನು ದಂಡಿಸಿದರೂ ಫಲಪ್ರಾಪ್ತಿಯಾಗುವುದಿಲ್ಲ. ತಲೆ ಬೋಳಿಸಿಕೊಂಡು ತುಂಡುಟ್ಟು ಜೀವನ ಕಳೆಯಬೇಕಾಗಿಲ್ಲ. ನಿರಂತರ ಅಧ್ಯಯನ, ಯಜ್ಞಯಾಗಾದಿಗಳಿಂದ ಮಾನವೀಯತೆಯನ್ನು ಗಳಿಸಲು ಸಾಧ್ಯವಾಗದು. ಆದುದರಿಂದ ಇವನ್ನೆಲ್ಲ ಬಿಟ್ಟು 'ಮಧ್ಯಮ ಮಾರ್ಗಾವಲಂಬಿ' ಯಾದರೆ ಮಾತ್ರ ಸಾಕ್ಷಾತ್ಕಾರ ಸಾಧ್ಯ.

ದೇಹದ ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದು ಕರ್ತವ್ಯವಾಗಬೇಕು. ಅದರಿಂದ ಉತ್ತಮ ಧೀಶಕ್ತಿ ಬೆಳೆದು ಜ್ಞಾನ ಪ್ರಾಪ್ತಿಯಾಗಲು ಸಹಾಯಕವಾಗುತ್ತದೆ. ಪ್ರಾಪಂಚಿಕ ಅಥವಾ ಸ್ವರ್ಗಸುಖದ ಪ್ರಾಪ್ತಿಗಾಗಿ ಯಾವುದೇ ಅತಿಮಾರ್ಗವನ್ನು ಅನುಸರಿಸುವುದು ವ್ಯಕ್ತಿಗೆ ಯುಕ್ತವಲ್ಲ. ತಾವರೆ, ನೀರಿನಲ್ಲಿದ್ದರೂ ನೀರಿಗೆ ಅಂಟಿಕೊಂಡಿರುವುದಿಲ್ಲ. ಈ ರೀತಿ ವ್ಯಕ್ತಿಯಿರಬೇಕು. ಇದೇ ನಾನು ಬೋಧಿಸುವ ಮಧ್ಯಮ ಮಾರ್ಗ.

ಬುದ್ಧನು ತನ್ನ ಅರಸು ಬದುಕಿನಲ್ಲಿ ಉಂಟಾದ ಹಲವಾರು ಸಮಸ್ಯೆಗಳಿಗೆ ತನ್ನ ಪರಿಶ್ರಮದಿಂದಲೇ ಸಾಧನೆಯಿಂದಲೇ ಪರಿಹಾರವನ್ನು ಕಂಡುಕೊಂಡನು. ಹಿರಿಯ ಕಿರಿಯ ಸಾಧಕರನ್ನೂ ಬೋಧಕರನ್ನೂ ಭೇಟಿಯಾಗಿ ವಿಚಾರವಿನಿಮಯ ನಡೆಸಿ, ತನಗೆ ಸರಿತೋರಿದ್ದನ್ನು ಮಾತ್ರ ಒಪ್ಪಿಕೊಳ್ಳುವ ಒಂದು ಮನಸ್ಥಿತಿಯನ್ನು ರೂಢಿಸಿಕೊಂಡ. 'ಅನ್ಯ ಧರ್ಮವನ್ನು ತಿರಸ್ಕರಿಸದೆ ಅದನ್ನು ಶಾಂತಿ ಸಹನೆ ಸೌಹಾರ್ದತೆಯಿಂದ ಅರಿತುಕೊಳ್ಳಿ. ಇದರಿಂದಾಗಿ ನೀವು ಸ್ವತಃ ನಿಮಗೆ ಅಗತ್ಯವೆನಿಸಿದ ಅನಿವಾರ್ಯವೆನಿಸಿದ ಧರ್ಮವನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ ಎಂಬುದಾಗಿ ಶಿಷ್ಯರನ್ನು ಎಚ್ಚರಿಸುತ್ತಿದ್ದ.' ಎಲ್ಲರಲ್ಲೂ ಅನುಕಂಪೆ, ಪ್ರೀತಿ, ಎಲ್ಲರ ಸುಖದಲ್ಲೂ ಭಾಗಿಯಾಗಿ ಸಂತೋಷಪಡುವುದು, ಎಲ್ಲ ಕಾಲದಲ್ಲೂ ಸ್ಥಿತಪ್ರಜ್ಞನಾಗಿರುವುದು, ಈ ಸ್ಥಿತಿಗಳು ವ್ಯಕ್ತಿಯ ಔನ್ನತ್ಯಕ್ಕೆ ಕಾರಣವಾಗುತ್ತವೆ ಎಂದಿದ್ದಾನೆ.

ಬುದ್ಧನ ಶಿಷ್ಯರು, ತಮ್ಮ ಮನದಲ್ಲಿ ಮೂಡಿದ ಸಂಶಯಗಳನ್ನು ನಿಶ್ಚಿಂತೆಯಿಂದ ಪರಿಹಾರ ಮಾಡಿಕೊಳ್ಳಲು ಅವಕಾಶವಿತ್ತು. ಧಾರ್ಮಿಕ ವಿಚಾರಗಳಲ್ಲಿ ವೈಚಾರಿಕ ಸ್ವಾತಂತ್ರ್ಯವನ್ನು ಬುದ್ಧ ತನ್ನ ಶಿಷ್ಯರಿಗೆ ನೀಡಿದ್ದ. ಅದ್ದರಿಂದಲೇ ಬುದ್ಧ ತನ್ನ ಶಿಷ್ಯರನ್ನು

ಕುರಿತು ಹೇಳುತ್ತಿದ್ದ ಮಾತುಗಳಿವು : 'ನಾನು ನಿಮಗೆ ಹಿರಿಯನೆಂಬ ಗೌರವದಿಂದ ನಾನು ಹೇಳಿದ್ದೆಲ್ಲಾ ನೀವು ಒಪ್ಪಬೇಕೆಂದು ನಾನು ಹೇಳುವುದಿಲ್ಲ. ವಿಚಾರಮಂಥನ ಮಾಡಿ, ನಿಮ್ಮ ನಿಮ್ಮ ಮನಸ್ಸಿಗೆ ಸರಿಯೆನಿಸಿದ ಬಳಿಕ ನೀವದನ್ನು ಒಪ್ಪಬೇಕು.'

ಒಂದು ದಿನ ಬುದ್ಧ ಅಂಬಲತ್ತಿ ಕಾಲಂಬದಲ್ಲಿ ಪ್ರವಚನ ನೀಡಲು ಶಿಷ್ಯರೊಂದಿಗೆ ಹೋಗುತ್ತಿದ್ದ. ಆಗ ಒಬ್ಬ ತರುಣನು ಬುದ್ಧನನ್ನೂ ಅವನ ಶಿಷ್ಯರನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಿದ. ಇದರಿಂದ ಭಿಕ್ಷುಗಳ ಮನಸ್ಸಿಗೆ ಖೇದವುಂಟಾಯಿತು. ರೋಷವೂ ಮೂಡಿತು. ಇದನ್ನು ಕಂಡ ಬುದ್ಧ, ತನ್ನ ಶಿಷ್ಯರನ್ನು ಉದ್ದೇಶಿಸಿ, ವ್ಯಕ್ತಿಯೊಬ್ಬ ಉರಿಯುತ್ತಿರುವ ಸೂರ್ಯನ ಮೇಲೆ ಕೋಪಗೊಂಡು ಸೂರ್ಯನಿಗೆ ಉಗುಳುತ್ತಾನೆ ಎಂದಿಟ್ಟುಕೊಳ್ಳೋಣ. ಇದರಿಂದ ಸೂರ್ಯನಿಗೇನಾದರೂ ಅಪಮಾನವಾಗುತ್ತದೆಯೇ? ಉಗಿದ ಎಂಜಲು ವ್ಯಕ್ತಿಯ ಮುಖದ ಮೇಲೆಯೇ ಬೀಳುತ್ತದೆ. ಅಂತೆಯೇ ಅವಹೇಳನ ಮಾಡುತ್ತಿರುವ ಈ ತರುಣನ ಸ್ಥಿತಿ. ಇದಕ್ಕಾಗಿ ನಾವೇಕೆ ಧರ್ಮಮಾರ್ಗದಿಂದ ಆಚೆ ಸರಿಯಬೇಕು ಎಂಬುದಾಗಿ ಸಾಂತ್ವನ ಹೇಳಿದ.

ಭಿಕ್ಷೆ ಯಾಚಿಸಲು ತನ್ನ ಭಿಕ್ಷುಗಳೊಂದಿಗೆ ಒಂದು ದಿನ ಬುದ್ಧ ಸಂಚರಿಸುತ್ತಿರುವಾಗ, ಒಬ್ಬ ವ್ಯಕ್ತಿ ಬುದ್ಧನನ್ನೂ ಅವನ ಸಂಘವನ್ನೂ ತೀವ್ರವಾದ ಕಟುನುಡಿಗಳಿಂದ ಅವಹೇಳನ ಮಾಡಿದ. ಇದನ್ನು ಕೇಳಿದ ಭಿಕ್ಷುಗಳಿಗೆ ಕೋಪಬಂತು. ಪರಿಣಾಮವಾಗಿ ಆ ವ್ಯಕ್ತಿಯನ್ನು ಹೊಡೆಯಲು ತೊಡಗಿದರು. ತಕ್ಷಣವೇ ಆ ಭಿಕ್ಷುಗಳನ್ನು ತಡೆದು, ಬೈದ ವ್ಯಕ್ತಿಯ ಬಗ್ಗೆ ಕರುಣೆ ತೋರಬೇಕೆಂದು ಬುದ್ಧ ಮನವಿ ಮಾಡಿಕೊಂಡ. ಒಬ್ಬ ಭಿಕ್ಷುವಂತೂ ತೀವ್ರವಾಗಿ ಬುದ್ಧನ ಕ್ರಮಕ್ಕೆ ಪ್ರತಿಭಟಿಸಿದ. ಆ ಭಿಕ್ಷುವನ್ನು ಕುರಿತು ಬುದ್ಧ 'ಭಿಕ್ಷೆಗೆ ಹೋದಾಗ ಒಬ್ಬ ಭಿಕ್ಷೆ ನೀಡುತ್ತಾನೆ ಎಂದು ಭಾವಿಸೋಣ. ಆದರೆ ಆ ಭಿಕ್ಷೆಯನ್ನು ಭಿಕ್ಷು ಸ್ವೀಕರಿಸದಿದ್ದರೆ, ಆ ಭಿಕ್ಷಾವಸ್ತು ಯಾರಿಗೆ ಸೇರುತ್ತದೆ? ಎಂದು ಕೇಳಿದ. ಇದಕ್ಕೆ ಭಿಕ್ಷು, 'ಭಿಕ್ಷೆ ನೀಡಲು ಬಂದ ವ್ಯಕ್ತಿಗೇ ಆ ಭಿಕ್ಷಾವಸ್ತು ಸೇರುತ್ತದೆ' ಎಂದ. ಆಗ ಬುದ್ಧ, ಅಂತೆಯೇ ಅವಹೇಳನ ಮಾಡಿದವನ ಅವಹೇಳನವನ್ನು ನಾವು ಸ್ವೀಕರಿಸದಿದ್ದರೆ, ಅವಹೇಳನವು ಆ ವ್ಯಕ್ತಿಗೇ ಸೇರುತ್ತದೆ ಅಲ್ಲವೇ ? ಕೆಟ್ಟವರನ್ನು ಒಳ್ಳೆಯ ದಾರಿಗೆ ತರುವ ಕಾರ್ಯವನ್ನು ನಾವು ಮಾಡಬೇಕಲ್ಲವೇ?' ಎಂದು ಕೇಳಿದಾಗ, ಪ್ರತಿಭಟಿಸಿದ್ದ ಭಿಕ್ಷು ತನ್ನ ವರ್ತನೆಗೆ ನಾಚಿ ಬುದ್ಧನ ಕ್ಷಮೆ ಯಾಚಿಸಿದ.

ಒಂದು ದಿನ ಕಿಸಾಗೌತಮಿ ಎಂಬುವಳ ಮಗುವಿಗೆ ತೀವ್ರ ಖಾಯಿಲೆ ಬಂದು ಚಿಕಿತ್ಸೆ ಫಲಕಾರಿಯಾಗದೆ ಮಗು ಮರಣಹೊಂದಿತು. ಬುದ್ಧನು ಭಗವಾನನೆಂದು ತಿಳಿದು ಅವನಲ್ಲಿಗೆ ತನ್ನ ಸತ್ತ ಶಿಶುವನ್ನು ತಂದು ಬದುಕಿಸಲು ಬೇಡಿದಳು. ಕೇವಲ ತಾತ್ವಿಕ ಉಪದೇಶದಿಂದ ಕಿಸಾಗೌತಮಿಗೆ ತಿಳಿವು ಮೂಡುತ್ತಿರಲಿಲ್ಲ. ಅವಳ ಮನೋ ವೇದನೆಯನ್ನರಿತ ಬುದ್ಧ, ಮಗುವನ್ನು ಬದುಕಿಸುತ್ತೇನೆ ಎಂಬ ಅಭಯವನ್ನಿತ್ತು, ಚಿಕಿತ್ಸೆಗಾಗಿ 'ಸಾವಿಲ್ಲದ ಮನೆಯಲ್ಲಿ ಸಾಸಿವೆ ಕಾಳು ತೆಗೆದುಕೊಂಡು ಬಾ' ಎಂದು

ಹೇಳಿ ಕಳುಹಿಸಿದ. ಗೌತಮಿಯು ಶ್ರಾವಸ್ತಿನಗರದ ಎಲ್ಲ ಮನೆಗಳಿಗೂ ಹೋಗಿ ಸಾಸಿವೆಯನ್ನು ಬೇಡಿದಳು. ಆದರೆ ಸಾಸಿವೆಯನ್ನು ಪಡೆಯಲಾಗಲಿಲ್ಲ. ಕಾರಣ, ಎಲ್ಲರ ಮನೆಯಲ್ಲೂ ಯಾರಾದರೊಬ್ಬರು ಮೃತರಾಗಿಯೇ ಇದ್ದರು. ಸಾಸಿವೆ ಸಿಕ್ಕದೆ ಪೆಚ್ಚುಮೋರೆಯಿಂದ ಗೌತಮಿ ಬುದ್ಧನ ಬಳಿ ಬಂದಳು. ಬರುವ ವೇಳೆಗಾಗಲೇ ಅವಳ ಮನಸ್ಸು ಬದಲಾಗಿತ್ತು. 'ಸಾವಿರದ ವ್ಯಕ್ತಿ ಯಾರೂ ಇಲ್ಲವೆಂದೂ ಇದಕ್ಕಾಗಿ ನೀನು ಪರಿತಪಿಸುವುದು ಸರಿಯಲ್ಲ' ಎಂದೂ ಗೌತಮಿಗೆ ಬುದ್ಧ ಬೋಧಿಸಿದ. ಬುದ್ಧನ ಬೋಧೆಯಿಂದ ಗೌತಮಿ ಬದಲಾದಳು, ವಿವೇಕಿಯಾದಳು.

ವೇದಾಂತದ ಜೀವಾಳವೆಂದರೆ ಆತ್ಮದ ವಿಚಾರ. ಈ ಬಗ್ಗೆ ಬುದ್ಧ ಏನನ್ನೂ ಹೇಳಿಲ್ಲವೆಂದು ಅನೇಕರಿಗೆ ಆಶ್ಚರ್ಯವಾಗಿತ್ತು. ಶಿಷ್ಯರು ಅನೇಕ ಸಲ ಈ ಪ್ರಶ್ನೆಯನ್ನೆತ್ತಿ, ಉತ್ತರ ಪಡೆಯಲಾಗದೆ ಖಿನ್ನರಾಗಿದ್ದರು. ಬುದ್ಧನ ಮೆಚ್ಚಿನ ಶಿಷ್ಯರ ಪೈಕಿ ಒಬ್ಬನಾದ ಮಾಲೂಕ್ಯಪುತ್ತನು ಈ ಪ್ರಶ್ನೆಗೆ ಉತ್ತರ ಪಡೆಯಲೇಬೇಕೆಂದು ನಿರ್ಧರಿಸಿ, ಬುದ್ಧನನ್ನು ಉತ್ತರ ಹೇಳಲೇಬೇಕೆಂದು ಕಾಡಿದನು. ಉತ್ತರ ಹೇಳದಿದ್ದರೆ ಬುದ್ಧನಿಗೆ ಉತ್ತರ ಗೊತ್ತಿಲ್ಲವೆಂದೇ ಎಲ್ಲರೂ ಪರಿಭಾವಿಸಬೇಕಾಗುತ್ತದೆ ಎಂದು ಹೇಳಿದನು. ಶಿಷ್ಯನ, ಮುಖವನ್ನು ಮಂದಹಾಸದಿಂದ ನೋಡಿ ನಸುನಗುತ್ತಾ ಬುದ್ಧ ಮಾಲೂಕ್ಯ ಪುತ್ತಕೇಳು 'ಒಬ್ಬ ವ್ಯಕ್ತಿ ಅರಣ್ಯದಲ್ಲಿ ಪಯಣಿಸುತ್ತಿದ್ದ. ನಡುದಾರಿಯಲ್ಲಿ ಅವನಿಗೆ ವಿಷಪೂರಿತ ತುದಿಯುಳ್ಳ ಬಾಣವೊಂದು ತಾಕಿ ಅವನು ನೋವಿನಿಂದ ನರಳುತ್ತಾ ಕೆಳಕ್ಕೆ ಬಿದ್ದ. ಈ ವಿಚಾರವನ್ನು ತಿಳಿದು ಅವನ ಬಂಧು ಬಳಗದವರೆಲ್ಲ ಅವನ ಬಳಿಗೆ ಬಂದರು. ಬಾಣ ತಗುಲಿದ ವ್ಯಕ್ತಿ ನೋವಿನಿಂದ ನರಳುತ್ತಿದ್ದಾನೆ. ಸಾವು ಸಮೀಪಿಸುತ್ತಿದೆ. ಆಗ ಬಂಧು ಬಳಗ ಏನು ಕ್ರಮಕೈಗೊಳ್ಳಬೇಕು?' ಎಂದು ಕೇಳಿದ. ಇದಕ್ಕೆ ಮಾಲೂಕ್ಯ ಪುತ್ತನು 'ದೇಹದಿಂದ ಬಾಣವನ್ನು ತೆಗೆದು ಚಿಕಿತ್ಸೆ ನೀಡಬೇಕು' ಎಂದ. ಸರಿಸರಿ, ನೀನು ಹೇಳಿದುದು ಸರಿಯಾದ ಕ್ರಮ. ಚಿಕಿತ್ಸೆ ನೀಡುವ ಮುಂಚೆ, ಆ ಬಾಣ ಬಂದ ದಿಕ್ಕು ಯಾವುದು? ಬಾಣ ಹೊಡೆದ ವ್ಯಕ್ತಿ ಬ್ರಾಹ್ಮಣನೋ, ಕ್ಷತ್ರಿಯನೋ, ವೈಶ್ಯನೋ, ಶೂದ್ರನೋ? ಅವನ ಬಣ್ಣ ಕಪ್ಪೋ ಕೆಂಪೋ? ಅವನು ಯಾವ ನಾಡಿಗೆ ಸೇರಿದವನು? ಯಾರ ಮಗ? ಏಕೆ ಹೊಡೆದ ? ಹೇಗೆ ಹೊಡೆದ? ಯಾವ ಲೋಹದಿಂದ ಬಾಣ ನಿರ್ಮಾಣವಾಗಿದೆ? ತಯಾರಿಸಿದವರಾರು? ಮೊದಲಾದ ಪ್ರಶ್ನೆಗಳಿಗೆ ಉತ್ತರ ಕಂಡು ಕೊಂಡು ತರುವಾಯ ಚಿಕಿತ್ಸೆ ನಡೆಸಬೇಕಲ್ಲವೆ? ಎಂದು ಬುದ್ಧ ಪ್ರಶ್ನಿಸಿದ.

ಛೇ, ಛೇ, ಹಾಗಾದರೆ ಚಿಕಿತ್ಸೆ ನಡೆಸುವ ಮುಂಚೆಯೇ ಬಾಣ ತಾಗಿದ ವ್ಯಕ್ತಿ ನೋವಿನಿಂದ ನರಳಿ ಬೇಗ ಮರಣ ಹೊಂದುವನು ಎಂದು ಮಾಲೂಕ್ಯ ಪುತ್ತನು ನುಡಿದನು. ಅಂತೆಯೇ ಜನನ ಮರಣದ ವೇದನೆಯನ್ನು ಅನುಭವಿಸುವ ಮಾನವ ಆತ್ಮನು ಇರುವನೋ ಇಲ್ಲವೋ, ಅವನು ನಿತ್ಯನೋ ಅನಿತ್ಯನೋ ಎಂಬುದನ್ನು ತಿಳಿದು ಫಲವೇನು? ವೇದನೆಯಿರುವುದಂತೂ ಸತ್ಯ. ವೇದನೆಯನ್ನು ಮೊದಲು ಪರಿಹರಿಸಿ

ಕೊಳ್ಳಬೇಕು. ಬಳಿಕ ಅವಕಾಶ ಉಳಿದರೆ ಮತ್ತಿತರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಚರ್ಚಿಸೋಣ ಎಂದು ಬುದ್ಧ ಹೇಳಿದ. ಈ ವಿಚಾರಗಳಿಂದ, ಆತ್ಮನ ವಿಚಾರವನ್ನು ಬುದ್ಧ ಅರಿತಿರಲಿಲ್ಲವೆಂದು ತಿಳಿಯಲಾಗದು. ಇದು ವಿಚಾರವಾದದಿಂದ ಅರಿಯುವ ಸಂಗತಿಯಲ್ಲ. ಅನುಭವವೇದ್ಯವಾದುದು. ಅದಕ್ಕೆ ತಕ್ಕ ಸಾಧನೆ ಬೇಕು. ತತ್ವಗಳನ್ನು ಮಂಡಿಸುವ ಪಂಡಿತರು ಅನೇಕರಿದ್ದಾರೆ. ಆದರೆ ಅವನ್ನು ಅನುಷ್ಠಾನಕ್ಕೆ ತರುವವರು ಬಹಳ ವಿರಳ. ಕೇವಲ ತಾರ್ಕಿಕ ಮನೋಭಾವ ಬೆಳೆದು ಸಾಧನೆಯಲ್ಲಿ ಅನಾದರಣೆ ಉಂಟಾಗಬಾರದೆಂದು ಬುದ್ಧ ಭಾವಿಸಿದ್ದ. ಆದುದರಿಂದ ಭಾವನಾತ್ಮಕ ವಿಚಾರಗಳನ್ನು ಚರ್ಚೆಯಿಂದ ನಿರ್ಧರಿಸುವ ಕ್ರಮಕ್ಕೆ ತನ್ನ ಅನುಯಾಯಿಗಳು ಶರಣಾಗಬಾರದೆಂದು ಬುದ್ಧ ಆಶಿಸಿದ್ದ.

ಒಂದು ದಿನ ಆನಂದನೆಂಬ ಶಿಷ್ಯನನ್ನು ಒಂದು ಮರದ ಕೆಳಗೆ ಕುಳ್ಳಿರಿಸಿಕೊಂಡು, ಮರದಿಂದ ಉದುರಿದ್ದ ತರಗೆಲೆಗಳನ್ನು ಬೊಗಸೆಯಲ್ಲಿ ಹಿಡಿದು ಬುದ್ಧ 'ಆನಂದ, ಇವು ಈ ಮರದ ಎಲೆಗಳಲ್ಲವೆ? ಎಂದು ಕೇಳಿದ. ' ಹೌದು' ಎಂದ ಆನಂದ. 'ಇಷ್ಟೇ ತಾನೇ ಈ ಮರದ ಎಲೆಗಳು? ಕೇಳಿದ ಬುದ್ಧ. 'ಇಲ್ಲ ದೇವ, ಇನ್ನೂ ತುಂಬಾ ಇವೆ' ಆನಂದ ಉತ್ತರಿಸಿದ. 'ಇಂತೆಯೇ ನಾನು ನಿಮಗೆಲ್ಲಾ ಉಪದೇಶಿಸಿರುವುದು. ಚರ್ಚೆಯಿಂದ ಅರಿಯುವ, ಶಾಬ್ದಿಕವಾಗಿ ವಿವರಿಸಲು ಸಾಧ್ಯವಿರುವ ಸಂಗತಿಗಳನ್ನು ಮಾತ್ರ ನಿಮಗೆ ತಿಳಿಸಿದ್ದೇನೆ. ಅನುಭವಯುಕ್ತವಾದ ವಿಚಾರ ಬೇಕಾದಷ್ಟಿವೆಯೆಂದು ನೀವೆಲ್ಲರೂ ತಿಳಿಯಬೇಕು ಆನಂದ, ಎಂದು ಬುದ್ಧ ವಿವರಿಸಿದ. ಆತ್ಮನ ವಿಚಾರದಲ್ಲಿ ಬುದ್ಧ ಮೌನದಿಂದಿರುವುದು, ಬುದ್ಧ ಅನಾತ್ಮವಾದಿ ಎಂಬುದರ ಸಂಕೇತವಲ್ಲ. ಬುದ್ಧ ಅನಾತ್ಮವಾದಿಯಲ್ಲವೆಂದು ಬೌದ್ಧ ದಾರ್ಶನಿಕರು ಅಭಿಪ್ರಾಯಪಟ್ಟಿದ್ದಾರೆ.

ಈ ರೀತಿಯಾಗಿ, ಬುದ್ಧ ತನ್ನ ಉಪದೇಶಾಮೃತವನ್ನು ಸ್ಪಷ್ಟ ನಿದರ್ಶನಗಳೊಂದಿಗೆ ಅನುಯಾಯಿಗಳಿಗೆ ಉಣಬಡಿಸಿದ. ನುಡಿದಂತೆ ನಡೆದು ತೋರಿಸಿದ. ಬುದ್ಧನೆಂಬ ಹೆಸರನ್ನು ಸಾರ್ಥಕಗೊಳಿಸಿದ.

ಭಾಷಾಬೋಧನೆ ಮತ್ತು ಸಂಸ್ಕೃತಿ

— *ಡಾ. ಬಿ.ಕೆ. ರವೀಂದ್ರನಾಥ್*

ಭಾಷಾ ಬೋಧಕನು ತಾನು ಕಲಿಸುವ ಭಾಷೆಯ ಎಲ್ಲಾ ರೀತಿಯ ಕಲೆಗಳಲ್ಲಿ ಅಂದರೆ ಅರ್ಥ ಮಾಡಿಕೊಳ್ಳುವುದು, ಮಾತನಾಡುವುದು, ಓದುವುದು, ಬರೆಯುವುದು, ಶ್ರವ್ಯ-ಭಾಷಿಕ ತಂತ್ರಗಳ ಜೊತೆಗೆ ಓದಲು ಮತ್ತು ಬರೆಯಲು ಕಲಿಸುವ ವಿಧಾನಗಳ ಬಳಕೆಗಳ ಬಗೆಗೆ ಚೆನ್ನಾಗಿ ತಿಳಿದಿರಬೇಕಾಗುತ್ತದೆ. ಆ ತಂತ್ರಗಳನ್ನು ತರಗತಿಗಳಲ್ಲಿ ಹೇಗೆ ಉಪಯೋಗಿಸಬೇಕೆಂಬ ಕಲೆಯನ್ನು ಮತ್ತು ಅವುಗಳ ಶಕ್ತಿ, ದೌರ್ಬಲ್ಯಗಳ ಅರಿವೂ ಭಾಷಾಬೋಧಕನಿಗಿರಬೇಕು. ಭಾಷಾಬೋಧಕನಿಗೆ ಭಾಷೆಯನ್ನು ಕಲಿಸುವ ತಂತ್ರಗಳ ಬಳಕೆಯಲ್ಲದೆ ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ, ಸಾಧನೆ ಮತ್ತು ಪ್ರಾವೀಣ್ಯಗಳನ್ನು ಪರೀಕ್ಷಿಸುವ ವಿಧಾನಗಳನ್ನು, ಅವಕ್ಕೆ ಸಂಬಂಧಿಸಿದ ತತ್ತ್ವಗಳನ್ನು ಮತ್ತು ಪ್ರಯೋಗಗಳನ್ನು ಅವನು ಚೆನ್ನಾಗಿ ತಿಳಿದವನಾಗಿರಬೇಕು. ಭಾಷಾಬೋಧಕನು ವಿಶೇಷ ಪರೀಕ್ಷೆಗಳನ್ನು ತಯಾರಿಸಬಲ್ಲವನಾಗಿರಬೇಕು, ಭಾಷಾಪ್ರಯೋಗಶಾಲೆ ಮತ್ತು ಅದರ ಉಪಯೋಗ ಗಳನ್ನು ಹಾಗೆಯೇ ಶಾಲೆಯ ಮೇಲ್ವಿಚಾರಣೆ, ಪಠ್ಯಗಳ ತಯಾರಿಕೆ ಮತ್ತು ವಿದ್ಯಾರ್ಥಿಗಳ ಅಭ್ಯಾಸವನ್ನು ತಿದ್ದುವ ಸಾಮರ್ಥ್ಯ ಹೊಂದಿರಬೇಕು.

ಇವಲ್ಲದೆ ಬಹುಮುಖ್ಯವಾಗಿ ಭಾಷಾ ಬೋಧಕನಿಗೆ ದ್ವಿತೀಯ ಭಾಷೆ ಮತ್ತು ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯ ಸಂಬಂಧದ ಅರಿವಿರಬೇಕಾದುದು ಅತ್ಯಾವಶ್ಯಕ. ಯಾವುದೇ ಎರಡು ಭಾಷೆಗಳ ಸಾಂಸ್ಕೃತಿಕ ಅರ್ಥಗಳೊಳಗೆ ಇರುವ ವ್ಯತ್ಯಾಸವನ್ನು ತಿಳಿಯದೆ ದ್ವಿತೀಯ ಭಾಷೆಯನ್ನು ಕಲಿಯುವ ವಿದ್ಯಾರ್ಥಿ ತನ್ನ ಕಲಿಕೆಯಲ್ಲಿ ಪ್ರಗತಿ ಸಾಧಿಸುವುದು ಕಷ್ಟ. ಇದಕ್ಕೆ ಮುಖ್ಯ ಕಾರಣ ಭಾಷೆಯಲ್ಲಿ ಬಳಕೆಯಾಗುವ ಪದಗಳ ಅರ್ಥ ಸಾಂಸ್ಕೃತಿಕವಾಗಿ ನಿರ್ಧರಿಸಲಾಗಿರುತ್ತದೆ.[○] ಆದುದರಿಂದ ಭಾಷೆಯ ಮೂಲಕ ಅಭಿವ್ಯಕ್ತವಾಗುವ ವಿಭಿನ್ನ ಸಾಂಸ್ಕೃತಿಕ ಅರ್ಥಗಳನ್ನು ಗ್ರಹಿಸದೆ ಆ ಭಾಷೆಯನ್ನು ಪೂರ್ಣವಾಗಿ ಕಲಿಯುವುದು ಕಷ್ಟ ಸಾಧ್ಯ. ಪರಭಾಷೆಯನ್ನು ಕಲಿಯುವಾಗ ಆ

○. *William Mac-Cormack, Kannada - A Cultural Introduction to the Spoken styles of the language-1966*

ಭಾಷೆಯನ್ನಾಡುವ ಜನರ ಸಂಸ್ಕೃತಿಯನ್ನು ಕುರಿತ ನಿರ್ದಿಷ್ಟ ಸಂಗತಿಗಳ ಜ್ಞಾನ ಅತ್ಯಗತ್ಯ. ಆ ಭಾಷೆಯನ್ನಾಡುವ ಜನರ ಜೀವನ ವಿಧಾನ, ನಂಬಿಕೆಗಳು, ಸಂಪ್ರದಾಯಗಳು, ನಡವಳಿಕೆ ಮತ್ತು ಸಾಧನೆಗಳನ್ನು ಭಾಷಾಬೋಧಕ, ವಿದ್ಯಾರ್ಥಿಗಳಲ್ಲಿ ಭಾಷಾ ಬೋಧನೆಯ ಜೊತೆ ಜೊತೆಗೆ ತಿಳಿಸಿಕೊಡುವುದು ಒಳ್ಳೆಯದು.

ಭಾಷೆಯ ಮತ್ತು ಸಂಸ್ಕೃತಿಗಳ ನಿಕಟ ಸಂಬಂಧಗಳ ಬಗೆಗೆ ಪ್ರಸಿದ್ಧ ಸಾಮಾಜಿಕ ಭಾಷಾವಿಜ್ಞಾನಿ ಜೆ.ಎ. ಫಿಷ್‌ಮನ್ ಹೇಳಿರುವ ಮಾತುಗಳನ್ನು ಗಮನಿಸಬಹುದು. "There are three major ways in which language is related to culture: (1) language itself is a part of culture ; (2) Every language provides an index of the culture with which it is most intimately associated; (3) every language becomes symbolic of the culture with which it is most intimately associated"[೧]

ಹೀಗೆ ಭಾಷೆ, ಸಂಸ್ಕೃತಿಯ ಒಂದು ಅಂಗವಾಗಿರುವುದರ ಜೊತೆಗೆ ಉಳಿದ ಅಂಶಗಳೂ ಅಭಿವ್ಯಕ್ತವಾಗಲು ಪ್ರಮುಖ ಮಾಧ್ಯಮವಾಗಿದೆ. ಕಲಿಯಬೇಕಾದ ಭಾಷೆ ಯಾವ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆಯೋ ಆ ಸಂಸ್ಕೃತಿಯ ಮಾದರಿಗಳನ್ನು ಮತ್ತು ಮೌಲ್ಯಗಳನ್ನು ತಿಳಿದುಕೊಳ್ಳದೆ ಆ ಭಾಷೆಯನ್ನು ಚೆನ್ನಾಗಿ ಕಲಿಯಲು ಸಾಧ್ಯವಿಲ್ಲ. ಭಾಷೆಯ ಸಾಂಸ್ಕೃತಿಕ ಅರ್ಥ ಬಹು ಸೂಕ್ಷ್ಮವಾದುದು. ಈ ಸೂಕ್ಷ್ಮವನ್ನು ಗ್ರಹಿಸದಿದ್ದರೆ ಅವರ ಭಾಷಾಪ್ರಯೋಗ ಆಭಾಸವೂ, ಹಾಸ್ಯಾಸ್ಪದವೂ ಆಗುವುದರಲ್ಲಿ ಸಂಶಯವಿಲ್ಲ.

ಭಾಷಾಭೋಧನೆಯ ಎಲ್ಲಾ ಹಂತದಲ್ಲಿಯೂ ಆ ಭಾಷೆಯನ್ನಾಡುವ ಜನರ ಸಂಸ್ಕೃತಿ ಮತ್ತು ಜೀವನದ ಪರಿಚಯ ಅಗತ್ಯವಾದುದರಿಂದ ಅವರ ಜನಜೀವನ ಮತ್ತು ಸಂಸ್ಕೃತಿಗಳನ್ನು ಭಾಷಾಬೋಧನೆಯ ಪಾಠಕ್ರಮದ ಜೊತೆ ಸೇರಿಸಬೇಕಾದುದು ಅತ್ಯಾವಶ್ಯಕ. ಆ ಭಾಷೆಯನ್ನಾಡುವ ಜನರ ಇತಿಹಾಸ, ಮೂಲವನ್ನು ಕುರಿತ ಜ್ಞಾನ ಅವರ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತವೆ. ಆ ಜನರ ಭಾವನೆಗಳನ್ನು ತಿಳಿಯಲು ಅವರ ನಿತ್ಯ ಜೀವನ, ಹಾಸ್ಯ ಮತ್ತು ಹಬ್ಬಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಆ ಜನರ ಗತ ನೆನಪುಗಳು ಅವರ ವರ್ತಮಾನದ ಒಂದು ಭಾಗವೇ ಆಗಿರುತ್ತಾದ್ದರಿಂದ ಅವರ ಸಂಸ್ಕೃತಿಯ ಮುಖ್ಯ ಸಾಧನೆಗಳನ್ನು ಕುರಿತ ಸಮಗ್ರ ಪರಿಚಯ ಕೂಡ ಅವಶ್ಯಕವಾದುದು. ಆದುದರಿಂದ ಭಾಷಾಬೋಧಕ ವಿದ್ಯಾರ್ಥಿಗಳಿಗೆ ಅನ್ಯ ಸಂಸ್ಕೃತಿಯ ಬೃಹತ್ ಸಾಧನೆಗಳನ್ನೂ ಬೋಧಿಸಬೇಕು. ಆ ಸಂಸ್ಕೃತಿಯ ಹಿರಿಯ ಸಾಧನೆಗಳನ್ನು

---

೧. Fishman J.A 'Language and Culture' in. the social science Encylopedia ed. by Adam Kuper and Jessica Kuper. 1985. P. 444

ಅರ್ಥ ಮಾಡಿಕೊಳ್ಳದೆ ವಿದ್ಯಾರ್ಥಿಗಳು ದ್ವಿತೀಯ ಭಾಷೆಯನ್ನು ಪೂರ್ಣ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ದ್ವಿತೀಯ ಸಂಸ್ಕೃತಿಯ ನಾಯಕರು, ಪುರಾಣ ಪುರುಷರು, ಅವರ ಜೀವನಾದರ್ಶಗಳು, ಅವರು ಹೋರಾಡಿದ ಉದ್ದೇಶಗಳು ಮೊದಲಾದವನ್ನು ವಿದ್ಯಾರ್ಥಿಗೆ ತಿಳಿಸಬೇಕು.

ಒಂದು ಕಾಲದಲ್ಲಿ ಕೇವಲ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಲು ಹಾಗೂ ಉಚ್ಚ ಶಿಕ್ಷಣ ಪಡೆಯಲು ಮಾತ್ರ ಸೀಮಿತವಾಗಿದ್ದ ಅನ್ಯ ಭಾಷಾಧ್ಯಯನದ ಗುರಿ ಇಂದು ವಿಶಾಲವಾಗಿದೆ. ಅದರಲ್ಲಿ ಆ ಭಾಷೆಯನ್ನು ಬಳಸುವ ಶಕ್ತಿಯನ್ನು ಪಡೆಯುವುದು ಹಾಗೂ ಆ ಭಾಷೆಯ ಸಾಂಸ್ಕೃತಿಕ ಅರ್ಥಗಳನ್ನು ಗ್ರಹಿಸುವುದೂ ಕೂಡ ಪ್ರಮುಖವಾದುದು. ಒಂದು ಭಾಷೆಯನ್ನಾಡುವ ಜನರೊಡನೆ ಮಾತನಾಡುವ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಅಂದರೆ ಅವರ ಕಲೆ, ಸಾಹಿತ್ಯ, ವಿಜ್ಞಾನ ಮುಂತಾದವುಗಳನ್ನು ತಿಳಿಯುವುದು ಅನ್ಯ ಭಾಷಾಧ್ಯಯನದ ಕಾರಣಗಳಾಗಿವೆ.

ಭಾಷೆಯ ಅಭಿವ್ಯಕ್ತಿಗಳಾದ ಪದ, ಪದ ಸಮೂಹ, ನಾಣ್ಣುಡಿ, ಗಾದೆ ಮುಂತಾದವುಗಳಿಗೆ ಸರಿದೂಗುವ ಸಾಂಸ್ಕೃತಿಕ ಅರ್ಥ ಘಟಕಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾದುದು ನಮ್ಮ ಗುರಿಸಾಧನೆಗೆ ಅವಶ್ಯಕ. ಏಕೆಂದರೆ ಈ ಅರ್ಥ ಘಟಕಗಳು ಒಂದೊಂದು ಸಂಸ್ಕೃತಿಗೂ ಬೇರೆ ಬೇರೆಯಾಗಿರುತ್ತವೆ. ಉದಾಹರಣೆಗೆ, ಕನ್ನಡದಲ್ಲಿ ಒಂದು ಮಗು ಹಸು ಮೇಯುವುದನ್ನು ಕಂಡು 'ಹಸು ಊಟ ಮಾಡುತ್ತಿದೆ' ಎಂದು ಹೇಳಿದರೆ ಹಸು 'ಊಟ ಮಾಡುವುದಿಲ್ಲ ಮೇಯುತ್ತದೆ' ಎಂದು ತಿದ್ದುತ್ತೇವೆ.[೧] ಅದೇ ರೀತಿ ಜರ್ಮನ್ ಭಾಷೆಯಲ್ಲಿ ಮನುಷ್ಯನ ಬಾಯಿಗೆ 'mund' ಎಂದೂ ಪ್ರಾಣಿಯ ಬಾಯಿಗೆ 'moul' ಎಂದೂ ಕರೆಯುತ್ತಾರೆ. ಸ್ಪ್ಯಾನಿಷ್‌ನಲ್ಲಿ ಮನುಷ್ಯನ ಕಾಲನ್ನು 'Pierna' ಎಂದು ಪ್ರಾಣಿಯ ಕಾಲನ್ನು 'Pata' ಎಂದೂ ಕರೆಯುತ್ತಾರೆ.[೨] ಎಸ್ಕಿಮೋ ಭಾಷೆಯಲ್ಲಿರುವ ಮಂಜನ್ನು ಕುರಿತು ಅನೇಕ ಪದಗಳು ಆ ಸಂಸ್ಕೃತಿಯ ಮೂಲಭೂತ ಅರ್ಥ ಘಟಕಗಳನ್ನು ಪ್ರತಿನಿಧಿಸುತ್ತವೆ. ಅವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳದೆ ಆ ಭಾಷೆಯನ್ನು ಬಳಸುವ ಶಕ್ತಿ ಪಡೆಯುವುದು ಕಷ್ಟ ಎಂಬುದನ್ನು ಭಾಷಾಬೋಧಕ ಅರಿತಿರಬೇಕು.

ಪರಭಾಷೆಯನ್ನು ಕಲಿಯುವಾಗ ಭಾಷಾಂತರದಿಂದಲ್ಲದೆ ಅದೇ ಭಾಷೆಯ ಸಾಂಸ್ಕೃತಿಕ ಅರ್ಥ ಘಟಕಗಳಿಂದಲೇ ಬೋಧಿಸುವುದು ಸೂಕ್ತ. ಭಾಷಾಂತರ ದ್ವಿತೀಯ ಭಾಷೆಯನ್ನು ಮತ್ತು ಸಂಸ್ಕೃತಿಯನ್ನು ವಿಕೃತಗೊಳಿಸುತ್ತದೆ. ಉದಾಹರಣೆಗೆ ಕನ್ನಡದ ಪೂರ್ಣವಾಕ್ಯ ಅದು ಏನು? ಎಂಬುದನ್ನು ಇಂಗ್ಲಿಷ್‌ನಲ್ಲಿ ಪದಶಃ ಭಾಷಾಂತರ

---

೧. ಪಿ.ವಿ. ವೀರಭದ್ರಪ್ಪ . ದ್ವಿತೀಯ ಭಾಷಾ ಬೋಧನೆ, ೧೯೭೮. ಪುಟ ೪೦

೨. Robert Lado Language Teaching : A Scientific Approach. 1964. P. 28

ಮಾಡಿದರೆ that what ಎಂದಾಗುತ್ತದೆ. ಅದೇ ರೀತಿ what is that ? ಏನು ಆಗಿದೆ ಅದು? ಎಂದಾಗಿ ಅದು ಕನ್ನಡದ ಸ್ಪಷ್ಟ ವಾಕ್ಯವಾಗುವುದಿಲ್ಲ. ಕನ್ನಡದ ಚಿಕ್ಕಮ್ಮ ಮತ್ತು ಚಿಕ್ಕಪ್ಪ ಎಂಬ ಪದಗಳನ್ನು ಇಂಗ್ಲಿಷ್‌ನಲ್ಲಿ Small Mother ಮತ್ತು Small father ಎಂದು ಭಾಷಾಂತರ ಮಾಡಿದರೆ ಆ ಭಾಷೆಯ ಮೂಲಭೂತ ಅರ್ಥ ಘಟಕಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಭಾಷಾಂತರ ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಪ್ರಕ್ರಿಯೆಗಳಿಗಿಂತ ಬಹು ಸಂಕೀರ್ಣವಾದುದು. ಪರಭಾಷೆಯನ್ನು ಕಲಿಯಲು ಭಾಷಾಂತರ ಅನಾವಶ್ಯಕ. ಆದುದರಿಂದ ಭಾಷಾಬೋಧನೆಯಲ್ಲಿ ಮೊದಲು ಆ ಭಾಷೆಯ ಸಾಂಸ್ಕೃತಿಕ ಅರ್ಥಘಟಕಗಳನ್ನು ಬಳಸಿಕೊಂಡು ಭಾಷೆಯನ್ನು ಕಲಿಸಿ, ಅಪೇಕ್ಷಿಸಿದಲ್ಲಿ ಭಾಷಾಂತರವನ್ನು ಪ್ರತ್ಯೇಕ ಕಲೆಯೆಂದು ತಿಳಿದು ತರುವಾಯ ಕಲಿಸುವುದು ಒಳ್ಳೆಯದು.

ಭಾಷಾಬೋಧಕ, ದ್ವಿತೀಯ ಭಾಷೆಯನ್ನು ಕಲಿಸುವಾಗ ಸಾಂಸ್ಕೃತಿಕ ಮಾನವ ವಿಜ್ಞಾನ ಒದಗಿಸುವ ಮಾಹಿತಿಯನ್ನು ಪಡೆಯಬೇಕಾಗುತ್ತದೆ. ಇಲ್ಲಿ ಭಾಷಾಬೋಧಕ ಸಾಂಸ್ಕೃತಿಕ ಮಾನವವಿಜ್ಞಾನವನ್ನು ಬೋಧಿಸಬೇಕು ಎಂದಾಗಲಿ ಅಥವಾ ಸಾಂಸ್ಕೃತಿಕ ಮಾನವವಿಜ್ಞಾನಿಯಾಗಿರಬೇಕು ಎಂದಾಗಲಿ ಅರ್ಥವಲ್ಲ. ಭಾಷೆ ಹೇಗೆ ಭಾಷಾ ವಿಜ್ಞಾನವಲ್ಲವೋ ಹಾಗೆಯೇ ಸಂಸ್ಕೃತಿ ಮಾನವವಿಜ್ಞಾನವಲ್ಲ.[೧] ಭಾಷಾಬೋಧಕನಿಗೆ ಭಾಷೆಯ ಸಾಂಸ್ಕೃತಿಕ ಅರ್ಥವನ್ನು ತಿಳಿಯಲು ಸಾಂಸ್ಕೃತಿಕ ಮಾನವವಿಜ್ಞಾನ ಸಹಾಯ ಮಾಡುತ್ತದೆ. ಭಾಷಾ ವಿಜ್ಞಾನದಂತೆ ಸಾಂಸ್ಕೃತಿಕ ಮಾನವ ವಿಜ್ಞಾನ, ಭಾಷಾ ಕಲಿಕೆಯ ಕೆಲವು ಸೂತ್ರಗಳನ್ನು ಮತ್ತು ತಂತ್ರಗಳನ್ನು ಬಳಸಿಕೊಂಡು ಸಂಸ್ಕೃತಿಯ ಕೆಲವು ರಾಚನಿಕ ಘಟಕಗಳನ್ನು ಹಾಗೂ ಮಾದರಿಗಳನ್ನು ವಿವರಿಸಿ ಹೇಳಲು ಸಹಾಯಕವಾಗುತ್ತದೆ.

ಭಾಷಾಬೋಧಕ ವಿದ್ಯಾರ್ಥಿಗೆ ತಾನು ಕಲಿಯಬೇಕಾದ ಪರಭಾಷೆಯ ಸಂಸ್ಕೃತಿಯ ಬಗೆಗೆ ಸದಭಿಪ್ರಾಯ ಮೂಡುವಂತೆ ಮಾಡಬೇಕು. ಆಗ ವಿದ್ಯಾರ್ಥಿ ಆ ಭಾಷೆಯನ್ನು ಯಾವುದೇ ತೊಂದರೆ ಇಲ್ಲದೆ ಸುಲಭವಾಗಿ ಕಲಿಯಲು ಅನುಕೂಲವಾಗುತ್ತದೆ.

ಹೀಗೆ ಭಾಷಾಕಲಿಕೆಯಲ್ಲಿ ಆ ಭಾಷೆಯನ್ನಾಡುವ ಪರಿಸರ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ. ಆದ್ದರಿಂದ ದ್ವಿತೀಯ ಭಾಷೆಯನ್ನು ಕಲಿಯಲು ಸೂಕ್ತ ಪರಿಸರವೆಂದರೆ ಆ ಭಾಷೆಯನ್ನು ಆಡುಭಾಷೆಯನ್ನಾಗಿ ಆಡುವ ದೇಶವೆಂದು ಹೇಳಬಹುದು. ಏಕೆಂದರೆ ವಿದ್ಯಾರ್ಥಿ ಅಲ್ಲಿಯೇ ನೆಲಸಿ ಆ ಭಾಷೆಯನ್ನು ವ್ಯವಹಾರಕ್ಕಾಗಿ ಉಪಯೋಗಿಸಿ ಆ ಸಂಸ್ಕೃತಿಯ ಅರ್ಥವನ್ನು ಪೂರ್ಣವಾಗಿ ಗ್ರಹಿಸಲು ಸಹಾಯವಾಗುತ್ತದೆ. ಅಲ್ಲದೆ ತನ್ನ ದಿನನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು, ಜೊತೆಗೆ ಅವನ ಬೌದ್ಧಿಕ ಬೆಳವಣಿಗೆಗೆ ಅಗತ್ಯವಾದ ಪದಗಳನ್ನು ಕಲಿಯಲು ಅನುಕೂಲವಾಗುತ್ತದೆ. ಆ ಭಾಷೆಯನ್ನು ಆಡದ

---

೧. *Robert Lado Page 25*

ದೇಶದಲ್ಲಿ ಅದನ್ನು ಕಲಿಸಬೇಕಾದಾಗ ಬೋಧಕನೇ ತನ್ನ ತರಗತಿಯಲ್ಲಿ ಎಲ್ಲಾ ಅನುಭವಗಳನ್ನು ಮತ್ತು ಆ ಭಾಷೆಯನ್ನಾಡುವ ಜನರ ಪರಿಸರವನ್ನು ಕೃತಕವಾಗಿ ನಿರ್ಮಾಣ ಮಾಡಿಕೊಳ್ಳಬೇಕು. ಹಾಗೆಯೇ ತರಗತಿಯಲ್ಲಿ ವಿದ್ಯಾರ್ಥಿಗಳು ತಾವು ಕಲಿಯುವ ಭಾಷೆಯನ್ನೇ ಆಡಬೇಕೆಂದು ನಿರ್ಬಂಧಿಸಬೇಕಾಗುತ್ತದೆ.

ದ್ವಿತೀಯ ಭಾಷಾಕಲಿಕೆ ಮುಂದುವರಿದಂತೆಲ್ಲಾ ಕಲಿಯುವ ವೇಗ ಕಡಿಮೆಯಾಗುತ್ತಾ ಹೋಗುತ್ತದೆ. ಪ್ರಾರಂಭದಲ್ಲಿ ಅಭ್ಯಾಸ ಮುಖ್ಯವಾಗಿರುತ್ತದೆ. ಅಲ್ಲಿ ಧ್ವನಿಗಳ ಅನುಕರಣೆಗೆ ಆದ್ಯತೆ ಇರುತ್ತದೆ. ಹಾಗೆಯೇ ಜ್ಞಾಪಕ ವ್ಯಾಪ್ತಿ ಹೆಚ್ಚಾಗುತ್ತದೆ. ಆದ್ದರಿಂದ ಸಂಭಾಷಣೆಯನ್ನು ಕಂಠಪಾಠ ಮಾಡುವ ಅಗತ್ಯ ಅಷ್ಟಾಗಿ ಇರುವುದಿಲ್ಲ ಆದರೆ ಪದಗಳ ಅರ್ಥ ಮತ್ತು ಸಾಂಸ್ಕೃತಿಕ ಅಂಶಗಳು ಮುಖ್ಯವಾಗಿರುತ್ತವೆ. ಭಾಷಾಬೋಧಕ ಭಾಷಾಬೋಧನೆಯ ಪ್ರಾರಂಭದ ಘಟ್ಟದಲ್ಲಿ ವಿಷಯವನ್ನು ಭಾಷಾರಚನೆಯನ್ನನುಸರಿಸಿ ಅನುಕ್ರಮಗೊಳಿಸಬೇಕು. ಈ ಘಟ್ಟದಲ್ಲಿ ಭಾಷೆಯ ರಚನೆಯನ್ನು ಕಲಿಯಬೇಕಾಗಿರುತ್ತದೆ. ಅದರಲ್ಲೇ ಸಾಂಸ್ಕೃತಿಕ ಅರ್ಥಗಳನ್ನೂ ಸೇರಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಾಂಸ್ಕೃತಿಕ ಅರ್ಥವನ್ನು ಅವಶ್ಯಕವಾದಾಗ ಸೇರಿಸಿ, ಭಾಷೆಯ ವಿಷಯ ಅರ್ಥಪೂರ್ಣವಾಗುವಂತೆ ಮಾಡಬೇಕು.

ಭಾಷೆಯನ್ನು ಕಲಿಯುವ ಉದ್ದೇಶ ಯಾವುದೇ ಆಗಿರಲಿ, ಭಾಷಾಬೋಧಕ ಸಾಂಸ್ಕೃತಿಕ ವ್ಯತ್ಯಾಸವನ್ನು ಬೋಧಿಸುವ ಅಗತ್ಯವಿದ್ದೇ ಇರುತ್ತದೆ. ಪಠ್ಯ ಪುಸ್ತಕದಲ್ಲಿ ಒಂದು ಕನ್ನಡ ಪದ ಬಂದಾಗಲೆಲ್ಲ ಕನ್ನಡ ಕಲಿಯುವ ವಿದೇಶಿ ವಿದ್ಯಾರ್ಥಿ ಸಾಂಸ್ಕೃತಿಕವಾಗಿ ಅದನ್ನು ಅರ್ಥಮಾಡಿಕೊಳ್ಳಲಾರದೇ ಹೋಗುತ್ತಾನೆ ಅಥವಾ ತಪ್ಪು ಅರ್ಥ ಮಾಡಿಕೊಂಡಿರುತ್ತಾನೆ. ಕಾರಣ ಅವನ ಪ್ರಥಮ ಸಂಸ್ಕೃತಿಯ ಅರ್ಥದಿಂದ ಅದು ಬೇರೆಯಾಗಿರುತ್ತದೆ. ಉದಾಹರಣೆಗೆ 'ಹರಿಕಥೆ' ವಿದೇಶಿಯನ್ನರಿಗೆ ಕೇವಲ 'Story of Hari' ಎಂದಾಗುತ್ತದೆ. ಅನೇಕ ಕಥೆ ಮತ್ತು ಉಪಕಥೆಗಳು, ಹಾಡು, ಕುಣಿತಗಳಿಂದ ಕೂಡಿದ ಭಕ್ತಿ ಪ್ರಧಾನವಾದ ಕಥಾಕಾಲಕ್ಷೇಪ ಪ್ರಸಂಗ ಎಂಬ ಅರ್ಥ ಅವರಿಗೆ ಆಗುವುದಿಲ್ಲ. ಗಂಗಾನದಿ ವಿದೇಶೀಯರಿಗೆ ಒಂದು ನದಿ ಮಾತ್ರವಾದರೆ ಭಾರತೀಯರಿಗೆ ಅದು ಪರಮ ಪವಿತ್ರವಾದದ್ದು. ಅದರಲ್ಲಿ ಹರಿಯುವುದು ಸಾಮಾನ್ಯ ನೀರಲ್ಲ, ಪುಣ್ಯ ಜಲ. ಹೀಗೆ ಭಾರತೀಯ ಸಂಸ್ಕೃತಿಯ ಗ್ರಹಿಕೆ ಇಲ್ಲದ ವಿದೇಶಿ ವಿದ್ಯಾರ್ಥಿ ಕನ್ನಡ ಮಾತನಾಡಿದರೂ ಅದು ಕೇವಲ ತನ್ನ ದೇಶದ ಸಾಂಸ್ಕೃತಿಕ ಅರ್ಥಗಳಿಂದ ಕೂಡಿದ ಕನ್ನಡವಾಗಿರುತ್ತದೆ.

ಆದುದರಿಂದ ಭಾಷಾಬೋಧಕ ಭಾಷೆಯೊಡನೆ ಸಾಂಸ್ಕೃತಿಕ ಅರ್ಥವನ್ನು ಬೋಧಿಸಿದರೆ ವಿದ್ಯಾರ್ಥಿ ಆ ಭಾಷೆಯ ಜ್ಞಾನವನ್ನು ಪಡೆಯುವುದರ ಜೊತೆಗೆ ಆ ಸಂಸ್ಕೃತಿಯನ್ನು ಇನ್ನೂ ಆಳವಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಹಾಗೆ ಈ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ವಿದ್ಯಾರ್ಥಿ ಓದಿಕೊಳ್ಳುವಂತೆ ಭಾಷಾಬೋಧಕ ಒತ್ತಾಯಪಡಿಸಬೇಕು.

ಸಾಹಿತ್ಯ ಭಾಷೆಯ ಮೂಲಕ ಅಭಿವ್ಯಕ್ತವಾಗುತ್ತದೆಯಾದ್ದರಿಂದ ಸಾಹಿತ್ಯದ ಅಭ್ಯಾಸ, ಆ ಭಾಷೆ ಮತ್ತು ಅದು ಪ್ರತಿನಿಧಿಸುವ ಸಂಸ್ಕೃತಿಯನ್ನು ಪೂರ್ಣ ತಿಳಿಯದೆ ಸಾಧ್ಯವಾಗುವುದಿಲ್ಲ. ಸಾಹಿತ್ಯ ರಚನೆ ಯಾವ ಸಾಂಸ್ಕೃತಿಕ ಮೌಲ್ಯಗಳ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ನಡೆಯಿತು ಎಂಬುದನ್ನು ತಿಳಿಯದೆ ಅದರ ತಿರುಳನ್ನು ಸವಿಯಲು ಕಷ್ಟಸಾಧ್ಯ.

ಸಾಂಸ್ಕೃತಿಕ ಅರ್ಥ ಬಹು ಸೂಕ್ಷ್ಮವಾದುದು. ಭಾಷಾಬೋಧಕ ವಿದ್ಯಾರ್ಥಿಗಳಲ್ಲಿ ಆ ಸೂಕ್ಷ್ಮವನ್ನು ಗ್ರಹಿಸುವಂತೆ ಮಾಡಿ, ಸಾಹಿತ್ಯಾಭ್ಯಾಸದಲ್ಲಿ ಬರುವ ಪದಗಳು, ವಿವಿಧ ನುಡಿಗಟ್ಟುಗಳು, ಗಾದೆಗಳು, ಜೋಡು ನುಡಿಗಳು, ದ್ವಿರುಕ್ತಿ ಮುಂತಾದವುಗಳ ಸಾಂಸ್ಕೃತಿಕ ಅರ್ಥವನ್ನು ಗ್ರಹಿಸಿ ಅವನ್ನು ಸಂದರ್ಭೋಚಿತವಾಗಿ ತಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸುವ ಶಕ್ತಿಯನ್ನು ಗಳಿಸುವಂತೆ ಮಾಡಬೇಕು.

ಹೀಗೆ ಯಾವುದೇ ಒಂದು ದೇಶದ ಭಾಷೆಯನ್ನು ಕಲಿಯುತ್ತಿದ್ದರೆ ಆ ದೇಶದ ಸಾಮಾಜಿಕ ಕಟ್ಟಳೆ, ಅಭ್ಯಾಸ, ಜೀವನವಿಧಾನ ಹಾಗೂ ಇನ್ನಿತರ ಸಾಂಸ್ಕೃತಿಕ ಲಕ್ಷಣಗಳನ್ನು ತಿಳಿದಿರುವುದು ಅವಶ್ಯಕವಾದುದು. ಅಂದರೆ ಒಂದು ಭಾಷೆ ಕಲಿಯುವಾಗ ಆ ದೇಶದ ಅಥವಾ ಆ ಭಾಷೆಯನ್ನಾಡುವ ಜನರ ಸಂಸ್ಕೃತಿ ಬಗೆಗೆ ತಿಳಿಯದೆ ಭಾಷೆಯನ್ನು ಕಲಿಯಲಾರ ಎಂಬುದು ಇಲ್ಲಿಯ ವಾದವಲ್ಲ. ಉದಾಹರಣೆಗೆ ಅನೇಕ ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಸಂವಹನ ನಡೆಸುತ್ತಾರೆ, ಆದರೆ ಅವರಲ್ಲಿ ಬಹಳಷ್ಟು ಜನರಿಗೆ ಇಂಗ್ಲಿಷ್ ಸಂಸ್ಕೃತಿ ಮತ್ತು ನಾಗರಿಕತೆ ಬಗೆಗೆ ತಿಳಿದಿರುವುದಿಲ್ಲ. ಆದರೂ ಯಾವುದೇ ಒಂದು ಭಾಷೆಯನ್ನು, ಆ ಭಾಷೆಯನ್ನಾಡುವವರ ಸಂಸ್ಕೃತಿಯನ್ನು ತಿಳಿಯದೆ ಪರಿಪೂರ್ಣವಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಆದುದರಿಂದ ಭಾಷಾಬೋಧಕ, ವಿದ್ಯಾರ್ಥಿಗಳಿಗೆ ತಾನು ಕಲಿಸುವ ಭಾಷೆಯ ಸಂಸ್ಕೃತಿ ಮತ್ತು ನಾಗರಿಕತೆ ಬಗೆಗೆ ಸಂಬಂಧಿಸಿದ ವಿಷಯಗಳನ್ನು ಭಾಷಾಕಲಿಕೆಯ ಪ್ರಾರಂಭದಿಂದಲೇ ತಿಳಿಸಿ ಹೇಳುವುದು ಅವಶ್ಯಕ. ಆಗ ಮಾತ್ರ ಅದು ಯಶಸ್ವಿ ಬೋಧನೆಯಾಗುತ್ತದೆ.

ಗೊಲ್ಲರ ಮದುವೆ ಸಂಪ್ರದಾಯ

— ಎ. ವಿಜಯಮ್ಮ

ಮನುಷ್ಯರ ಜೀವನದಲ್ಲಿ ಮದುವೆಯೂ ಸಹ ಒಂದು ಮುಖ್ಯ ಘಟ್ಟ. ಬಾಲ್ಯವನ್ನು ಕಳೆದು ಯೌವನಕ್ಕೆ ಬಂದ ಮೇಲೆ ಗೃಹಸ್ಥ ಜೀವನಕ್ಕೆ ಕಾಲಿಡುತ್ತಾನೆ. ಈ ಘಟ್ಟದಲ್ಲಿ ಅವನು ಅನೇಕ ಋಣಗಳನ್ನು ತೀರಿಸಬೇಕಾಗುತ್ತದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಸಾಂಸಾರಿಕ ಜೀವನಕ್ಕೆ ಕಾಲಿಟ್ಟರೆ ಅವನಿಗೆ ಹಲವು ಕಷ್ಟ ಸುಖಗಳು ಎದುರಾಗುತ್ತವೆ. ಸಂಸಾರಿಯಾಗದವನಿಗೆ ಸಂಸಾರದಲ್ಲಿರುವ ಎಷ್ಟೋ ವಿಷಯಗಳು ತಿಳಿಯದೇ ಹೋಗುತ್ತದೆ.

ಗೊಲ್ಲರಲ್ಲಿ ನಡೆಯುವ ಮದುವೆ ಆಚರಣೆ ವಿಶಿಷ್ಟವಾದದ್ದು. ಇವರಲ್ಲಿ ಸಾಂಪ್ರದಾಯಿಕ ಮದುವೆ ಮೂರು ದಿನಗಳ ಕಾಲ ಹೆಣ್ಣನ್ನು ನೋಡಿ ಗಟ್ಟಿ ಮಾತು ಮಾಡುವುದು (ನಿಶ್ಚಿತಾರ್ಥ), ಅರುಣೆ ತರುವ ಶಾಸ್ತ್ರ ಮತ್ತು ಚಪ್ಪರ ಹಾಕುವ ಶಾಸ್ತ್ರ, ಮದಲಿಂಗನ ಶಾಸ್ತ್ರ, ಧಾರಾಮುಹೂರ್ತ, ಓದೊಲಕ್ಕಿಶಾಸ್ತ್ರ, ಬೂವಮಾಡುವ ಶಾಸ್ತ್ರ, ಜಾಡಿ ತೀರಿಸುವ ಶಾಸ್ತ್ರ, ಪ್ರಸ್ಥ ಈ ಕ್ರಮದಲ್ಲಿ ನಡೆಯುತ್ತದೆ.[೧] ಹಿಂದೆ ಐದು ದಿನಗಳವರೆಗೆ ನಡೆಯುತ್ತಿದ್ದ ಮದುವೆ ಇಂದು ಮೂರು ದಿನಕ್ಕೆ ಇಳಿದಿದೆ.

ಹಟ್ಟಿಯ ಗೊಲ್ಲರು ಹೆಣ್ಣು ನೋಡಲು ಮತ್ತು ಗಟ್ಟಿಮಾತನಾಡಲು ಹೆಣ್ಣಿನ ಮನೆಗೆ ಹೋಗುವ ಪದ್ಧತಿ ಇದೆ. ಗಂಡಿನಕಡೆಯವರು ೫ ಇಲ್ಲವೆ ೭ ಜನ ಹೆಣ್ಣಿನ ಮನೆಗೆ ಹೋಗುವಾಗ ಒಂದು ಸೋರೆ ಅಥವಾ ಪುಟ್ಟಿಯಲ್ಲಿ ಅಕ್ಕಿ, ವಿಳ್ಯೆದೆಲೆ, ಅಡಿಕೆ, ಬಾಳೆಹಣ್ಣು ಮೊದಲಾದವುಗಳನ್ನು ಹಾಕಿ ಅದರ ಬಾಯಿಯನ್ನು ಕಟ್ಟಿ ಶುಭಶಕುನಗಳನ್ನು ನೋಡಿಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಗಂಡಿನ ಮನೆಯವರು ಹೆಣ್ಣು ನೋಡುವುದಕ್ಕೆ ಬರುತ್ತಾರೆಂದು ತಿಳಿದ ಹೆಣ್ಣಿನ ಮನೆಯವರು ಮನೆಯಲ್ಲಿ ಹಣತೆ ದೀಪ ಹಚ್ಚಿಸಿಟ್ಟಿರುತ್ತಾರೆ. ಗಂಡಿನವರು ಹೆಣ್ಣಿನ ಮನೆದೇವರ ಮನೆಯ ದೀಪವನ್ನು ನೋಡಿ ಅನಂತರ ದನದ ಕೊಟ್ಟಿಗೆಗೆ ಹೋಗಿ ದನಗಳಿಗೆ ನಮಸ್ಕರಿಸಿ ಅನಂತರ ಹೆಣ್ಣನ್ನು

---

೧. ತೀ.ನಂ. ಶಂಕರನಾರಾಯಣ : ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು. ಪುಟ. ೧೫೭

ನೋಡುವರು. ಇದಕ್ಕೆ ಗೊಲ್ಲರು ಗೋವುಗಳನ್ನು ಪವಿತ್ರ ಎಂದು ನಂಬಿರುವುದರಿಂದ ಹೀಗೆ ಮಾಡುವರು. ಶುಭಶಕುನ ಸರಿ ಕಂಡು ಬಂದು ಹೆಣ್ಣು ಒಪ್ಪಿಗೆಯಾದರೆ ಮದುವೆ ದಿನವನ್ನು ಗೊತ್ತುಮಾಡಿ ಬರುವರು. ಈ ಸಂದರ್ಭದಲ್ಲಿ ಅಶುಭಗಳೆಂದರೆ ಕರಬಾನ ಸೋಲು ಬೀಳಬಾರದು. ಮಡಿಕೆ (ನೇಗಿಲು), ಹಾವು, ಬೆಕ್ಕು ಅಡ್ಡ ಬರಬಾರದು.

ಮದುವೆಗೆ ಮೂರು ದಿನ ಇರುವಾಗಲೇ ಅರುಣೆ ತರುವ ಸಂಪ್ರದಾಯ ಗೊಲ್ಲರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಒಂದು ಬಿದುರಿನ ಪುಟ್ಟಿಯಲ್ಲಿ ಒಂದು ಕಟ್ಟು ಎಲೆ, ಅಡಿಕೆ, ತೆಂಗಿನಕಾಯಿ, ಒಂದು ಕುಡಿಕೆ ಎಣ್ಣೆ ಇವನ್ನೆಲ್ಲಾ ತೆಗೆದುಕೊಂಡು ೫ ಜನ ಮುತ್ತೈದೆಯರು ವಾದ್ಯಗಳ ಸಮೇತ ಕುಂಬಾರನ ಮನೆಗೆ ಹೋಗಿ ಅವರಿಗೆ ತಾವು ತೆಗೆದುಕೊಂಡು ಬಂದ ಪದಾರ್ಥಗಳನ್ನು ಕಾಣಿಕೆಯಾಗಿ ಕೊಟ್ಟು ಅವನಿಂದ ಅಲ್ಲಿನ ಅರುಣೆ ಹಾಗೂ ಮತ್ತಿತರ ಕುಡುಕೆ, ಮಡಕೆ, ಮಿಳ್ಳೆ ಮುಂತಾದವುಗಳನ್ನು ಪಡೆದು ತರುತ್ತಾರೆ. ಮದುವೆ ಕಾರ್ಯಕ್ಕೆಂದರೆ ಆ ಗಡಿಗೆಗಳಿಗೆ ಸುಣ್ಣ ಕೆಮ್ಮಣ್ಣಿನಿಂದ ಅವನ್ನು ಚಿತ್ರಬಿಡಿಸುವುದರ ಮೂಲಕ ಶೃಂಗರಿಸಿರುತ್ತಾರೆ. ಈ ಅರುಣೆಗಳಲ್ಲಿ ಉತ್ತುತ್ತಿ, ಅರಿಶಿಣ, ಬೆಲ್ಲದ ಅಚ್ಚು, ಬೆಳ್ಳುಳ್ಳಿ, ಕೊಬ್ಬರಿಬಟ್ಟಲು, ಅಕ್ಕಿ ಹಾಕಿ ಅದರ ಬಾಯಿ ಮುಚ್ಚಿರುತ್ತಾರೆ. ಅನಂತರ ಅರುಣೆಯನ್ನು ಪೂಜಿಸಿ ಅವನ್ನು ಮುತ್ತೈದೆಯರು ಹೊತ್ತು ತರುವ ಹೊತ್ತಿಗೆ ಹೆಣ್ಣಿನ ಮನೆಯಲ್ಲಿ ಅರುಣೆ ಇಡಲು ಕಳ್ಳಿಗೂಟಗಳನ್ನು ನೆಟ್ಟು ಒಂದು ಗುಡ್ಲು ತಯಾರಿಸಿರುತ್ತಾರೆ. ತಾವು ತಂದಂತಹ ಅರುಣೆಗಳನ್ನು ಅದರಲ್ಲಿಟ್ಟು ಪೂಜಿಸುವರು. ಈ ಗುಡ್ಲನ್ನು 'ಅರುಣೆಗುಡ್ಲು' ಎನ್ನುತ್ತಾರೆ. ಈ ಅರುಣೆಗಳು ಗೊಲ್ಲರಲ್ಲಿ ತುಂಬಾ ಪವಿತ್ರ ಹಾಗೂ ಪ್ರಮುಖ ಪಾತ್ರವಹಿಸುತ್ತವೆ. ಇದೇ ರೀತಿ ಗಂಡಿನ ಮನೆಯಲ್ಲಿ ಸಹ ಅರುಣೆಗಳನ್ನು ತರುವರು.

ಮದುವೆ ಚಪ್ಪರ ಹಾಕಲು ಬರುವವರಿಗೆ ಗೊಲ್ಲರು ಐದು ಸೇರು ಅಕ್ಕಿ, ತೆಂಗಿನಕಾಯಿ, ಬೆಲ್ಲ, ಉತ್ತುತ್ತಿ, ಬೆಳ್ಳುಳ್ಳಿ ಕೊಡುತ್ತಾರೆ. ಚಪ್ಪರಕ್ಕೆ ಬೇಕಾದ ಸಾಮಗ್ರಿಗಳನ್ನು ತರಲು ಹೋಗುವಾಗ ಕುಡುಗೋಲು, ಮಚ್ಚು ಮೊದಲಾದ ಆಯುಧಗಳನ್ನು ಪೂಜಿಸುವರು. ಹೆಣ್ಣು ಮತ್ತು ಗಂಡಿನ ಮನೆಗಳ ಮುಂದೆ ಚಪ್ಪರ ಹಾಕುವ ಪದ್ಧತಿ ಕಂಡುಬರುತ್ತದೆ. ಈ ಚಪ್ಪರಗಳಲ್ಲಿ ಐದು ಕಳ್ಳಿಗೂಟಗಳನ್ನು ನೆಡುತ್ತಾರೆ. ಹಾಗೆಯೇ ಹಸಿ ತೆಂಗಿನಗರಿಯಿಂದ ಚಪ್ಪರವನ್ನು ಹಾಕಿ ಕಂಬಗಳಿಗೆ ಹೊಂಗೆಸೊಪ್ಪನ್ನು ಕಟ್ಟುವರು. ತೋರಣಕ್ಕೆ ಮಾವಿನ ಸೊಪ್ಪನ್ನು ಕಟ್ಟುತ್ತಾರೆ. ಮದುವೆಯ ಹಿಂದಿನ ದಿನವೇ ಹೆಣ್ಣಿಗೆ ಬಳೆಯನ್ನು ತೊಡಿಸಿ ಅವರ ಮನೆಯ ದೇವರ ಗುಡಿಗೆ ಕರೆದುಕೊಂಡು ಹೋಗಿ ಗುಡಿಯ ಪೂಜಾರಿಯಿಂದ ತಲೆಗೆ ಹಾಲು ಒತ್ತಿಸುತ್ತಾರೆ. ಈ ಹಾಲೊತ್ತುವ ಶಾಸ್ತ್ರವನ್ನು ಮಾಡಿದ ತಕ್ಷಣ ಆಕೆಯು ಮದುವೆ ಹೆಣ್ಣಾಗುವಳು. ಹಾಲು ಒತ್ತುವ ಸಂದರ್ಭದಲ್ಲಿ ಕರಿಕಂಬಳಿ ಗದ್ದಿಗೆಯನ್ನು ಹಾಸಿ ಅದರ ಮೇಲೆ ಅಕ್ಕಿಯಿಂದ ಹಸೆ ಬರೆದು ಅದರ ಮೇಲೆ ಒಂದು ಮಣೆ ಹಾಕಿ, ಮಣೆಯ ಮೇಲೆ ಹೆಣ್ಣನ್ನು ಕರೆದು

ತಂದು ಕೂರಿಸುತ್ತಾರೆ. ಮನೆಯ ಹಿರಿಯರೆಲ್ಲಾ ಹೆಣ್ಣಿಗೆ ಅರಿಶಿಣದ ಎಣ್ಣೆಯನ್ನು ಕೈಕಾಲುಗಳಿಗೆ, ಮುಖಕ್ಕೆ ಹಚ್ಚಿ ಅಕ್ಕಿಯಿಂದ ಅಲ್ಲಿ ಇರುವ ಕಳಸಕ್ಕೆ ಮೊದಲು ಸೇಸೆಯಿಟ್ಟು ಅನಂತರ ಹೆಣ್ಣಿಗೆ ಸೇಸೆಯಿಡುವರು. ಹೀಗೆ ಹಸೆ ಹಾಕುವ ಸೇಸೆ ಇಡುವ ಪದ್ಧತಿ ಈ ಗೊಲ್ಲರಲ್ಲಿ ಪ್ರಮುಖವಾಗಿದೆ. ರಾತ್ರಿಯಲ್ಲಿ ಶಾಸ್ತ್ರ ಮಾಡುವಂತಹ ಸಂದರ್ಭದಲ್ಲಿ ಹಟ್ಟಿಯ ಹಿರಿಯ ಹೆಣ್ಣುಮಕ್ಕಳು ಆ ಸಂದರ್ಭಕ್ಕೆ ಸರಿಯಾದಂತಹ ಸೋಬಾನೆ ಪದವನ್ನು ಹೇಳುವರು. ಈ ಶಾಸ್ತ್ರ ಮುಗಿದ ನಂತರ ದೇವರ ಊಟವನ್ನು ಮಾಡುವರು. ಮದುವೆಯ ಹಿಂದಿನ ರಾತ್ರಿಯೇ ಗಂಡು ಹೆಣ್ಣಿನ ಮನೆಗೆ ಬರುವುದು. ಗಂಡನ್ನು ಎದುರು ದುಂಬಲು ಹೆಣ್ಣಿನ ಮನೆಯವರು ಕಳಸವನ್ನು ತೆಗೆದುಕೊಂಡು ವಾದ್ಯಗಳ ಜೊತೆ ಹೋಗುವರು. ಅಲ್ಲಿ ಬೀಗರನ್ನು ಎದುರುಗೊಂಡ ಅನಂತರ ಅದಕ್ಕೆ ಸಂಬಂಧಪಟ್ಟ ಕೆಲವು ಶಾಸ್ತ್ರಗಳನ್ನು ಮಾಡಿ ಅದು ಮುಗಿದ ನಂತರ ಬೀಗರಿಗೆ ಊಟಬಡಿಸುವರು.

ಮದುವೆಯ ಬೆಳಿಗ್ಗೆ ಧಾರೆಗಿಂತ ಮೊದಲು 'ಸುರುಗೆ' ನೀರನ್ನು ಹಾಕುವ ಸಂಪ್ರದಾಯವಿದೆ. ಮದುವೆಯ ಗಂಡು-ಹೆಣ್ಣಿಗೆ ಚಪ್ಪರದಲ್ಲಿ ನಿಲ್ಲಿಸಿ ಅವರಿಗೆ ಮೊದಲು ಮುತ್ತೈದೆಯರು ಅರಿಶಿಣ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಅಂಗಳದಲ್ಲಿ ಕರಿಕಂಬಳಿ ಗದ್ದಿಗೆಯನ್ನು ಹಾಸಿ ಅದರ ಮೇಲೆ ಅಕ್ಕಿಯಿಂದ ಹಸೆ ಬರೆದು ಅದರ ಮೇಲೆ ಮಣೆಯನ್ನು ಹಾಕಿ ಹೆಣ್ಣನ್ನು ಕೂರಿಸಿ ಮನೆಯವರು ಅವಳ ತಲೆಗೆ ಹಾಲನ್ನು ಒತ್ತುವರು. ಇದೇ ರೀತಿ ಗಂಡಿನ ಮನೆಯವರೂ ಸಹ ಗಂಡಿಗೆ ಅವರ ಮನೆಯಲ್ಲಿ ಮಾಡಿಕೊಂಡು ಬಂದಿರುತ್ತಾರೆ. ಮದುವೆಯಾಗುವವರೆಗೂ ಗಂಡು-ಹೆಣ್ಣಿಗೆ ಬೇರೆ ಬೇರೆಯಾಗಿಯೇ ಹಸೆಯಲ್ಲಿ ಕೂರಿಸಿ ಶಾಸ್ತ್ರಮಾಡುವರು. ಧಾರೆ ಆಗುವವರೆಗೂ ಸುಮಾರು ಐದು ಹಸೆಗಳನ್ನು ಹಾಕಿರುತ್ತಾರೆ. ಈ ಸಂಪ್ರದಾಯ ಅವರಲ್ಲಿ ತುಂಬಾ ಪ್ರಮುಖವಾದುದು. ಇದೇ ಸಂದರ್ಭದಲ್ಲಿ ಮದುವೆಯ ದಿನ ಭತ್ತಕುಟ್ಟುವ ಶಾಸ್ತ್ರ ಮಾಡುವರು. ಹಸೆಗಳೆಲ್ಲ ಮುಗಿದ ಮೇಲೆ ಹೆಣ್ಣನ್ನು ಗಂಡನ್ನು 'ಸುರುಗೆ' ನೀರು ಹಾಕಲು ಅರುಣೆ ಇರುವ ಸ್ಥಳಕ್ಕೆ ಕರೆದುಕೊಂಡು ಹೋಗುವರು. ಇಬ್ಬರಿಗೂ ಬೇರೆ ಬೇರೆಯಾಗಿ ಸುರಗೆ ನೀರು ಹಾಕುವರು.

ಕುಂಬಾರರ ಮನೆಯಿಂದ ತಂದಂತಹ ಅರುಣೆಗಳನ್ನು ಅರುಣೆ ಗುಡ್ಡಿನಿಂದ ತಂದು ನಾಲ್ಕು ಮೂಲೆಗಳಿಗೂ ನಾಲ್ಕು ಅರುಣೆಗಳನ್ನಿಟ್ಟು, ನಾಲ್ಕು ಅರುಣೆಗಳಿಗೆ ಚೌಕಾಕಾರದಲ್ಲಿ ಗಡುಗೆಗಳ ಕಂಠಕ್ಕೆ ಅಂಗುದಾರ ಸುತ್ತುತ್ತಾರೆ (ಅರಿಶಿಣದ ದಾರ). ಆ ಅರುಣೆಗಳಲ್ಲಿ ಮೂರು ಗಡಿಗೆಗಳಿದ್ದರೆ ಒಂದು ಸೋರೆ ಇರುತ್ತದೆ. ಅವಕ್ಕೆಲ್ಲಾ ನೀರು ತುಂಬಿರುತ್ತಾರೆ. ಆ ಅರುಣೆಗಳು ಇಟ್ಟಿರುವ ಮಧ್ಯೆದಲ್ಲಿ ಇರುವ ಜಾಗವಲ್ಲಿ ಕುರಿಗೊಬ್ಬರನ್ನು ಹಾಕುವರು. ಅವರ ಮೇಲೆ ಒಂದು ಮಣೆಯನ್ನು ಹಾಕಿ ಅದರ ಮೇಲೆ ಹೆಣ್ಣನ್ನು ಕೂರಿಸುವರು. ಆಗ ಹೆಣ್ಣಿನ ಬಂಧು-ಬಳಗಕ್ಕೆ ಸೇರಿದ ಐದು ಜನ

(ಹೆಂಗಸರು-ಗಂಡಸರು) ಅವಳ ತಲೆಗೆ ಹಾಲು ಒತ್ತುತ್ತಾರೆ. ಅನಂತರ ಒಬ್ಬರ ಹಿಂದೆ ಒಬ್ಬರು ನಿಂತುಕೊಂಡು ಸುರುಗೆ ಮಧ್ಯೆದಲ್ಲಿ ಕುಳಿತ ಮದುಮಗಳಿಗೆ ಒಬ್ಬೊಬ್ಬರೇ ನೀರನ್ನು ಹಾಕುತ್ತಾ ಸುರಗೆಯ ಸುತ್ತಾ ಸುತ್ತುವರು. ಇದೇ ರೀತಿ ಗಂಡಿನ ಮನೆಯವರು ಸಹ ಗಂಡಿಗೆ (ಮದುಮಗನಿಗೆ) ಅವರ ಮನೆಯಲ್ಲಿ ಸುರಿಗೆ ನೀರನ್ನು ಹಾಕಿ ಶಾಸ್ತ್ರ ಮುಗಿಸಿರುತ್ತಾರೆ. ಸುರುಗೆ ಶಾಸ್ತ್ರ ಮುಗಿದ ಅನಂತರ ಹೆಣ್ಣಿನ ತಲೆಗೆ ಹೂವಿನ ಸೂಸಕ ಹಾಕಿ ಹಣೆಗೆ ಬಾಸಿಂಗವನ್ನು ಕಟ್ಟಿ ಬಿಳಿ ಸೀರೆ ಮತ್ತು ಬಿಳಿ ಕುಪ್ಪಸವನ್ನು ತೊಡಿಸಿ ಹೆಣ್ಣಿನ ಸೋದರಮಾವ ಹೆಣ್ಣನ್ನು ಈ ಮೊದಲೇ ಕಳ್ಳಿಗೂಟದಿಂದ ನಿರ್ಮಿಸಿರುವ ಹಂದರದ ಬಳಿ ಕರೆದುಕೊಂಡು ಬರುತ್ತಾನೆ. ಈ ಜಾತಿಯವರು ಧಾರಾಮುಹೂರ್ತವನ್ನು ಕುರಿಯಹಟ್ಟಿಯ ಮುಂದೆ ಹಾಕಿದಂತಹ ಕಳ್ಳಿಗೂಟದ ಹಂದರದ ಮುಂದೆಯೇ ನಡೆಸುತ್ತಾರೆ. ಗಂಡು ಹೆಣ್ಣಿಗೆ ತಾಳಿ ಕಟ್ಟುವಾಗ ಮದುಮಕ್ಕಳ ನಡುವೆ ಒಂದು ತೆರೆಯನ್ನು ಬಿಟ್ಟಿರುತ್ತಾರೆ. ಕೆಲವು ಶಾಸ್ತ್ರಗಳು ಮುಗಿದ ಅನಂತರ ತೆರೆ ತೆಗೆಯುತ್ತಾರೆ.

ಈ ಸಂದರ್ಭದಲ್ಲಿ ಹಿರಿಯ ಹೆಂಗಸರು ಸೋಬಾನೆ ಪದಗಳನ್ನು ಹೇಳುತ್ತಿರುತ್ತಾರೆ. ಗಂಡು ತಾಳಿ ಕಟ್ಟುವಾಗ ಗೊಲ್ಲರಹಟ್ಟಿಯ ಗೌಡನೆನಿಸಿಕೊಂಡವನು ಮತ್ತು ಹಟ್ಟಿಯ ಪೂಜಾರಿ ಪುರೋಹಿತರ ಸ್ಥಾನದಲ್ಲಿ ನಿಂತು ಹೆಣ್ಣಿಗೆ ತಾಳಿ ಕಟ್ಟಿಸುವರು. ಗಮನಿಸಬೇಕಾದ ಒಂದು ವಿಶಿಷ್ಟ ಸಂಗತಿ ಎಂದರೆ ಬೇರೆ ಜಾತಿಯಲ್ಲಿ ಶಾಸ್ತ್ರಿಗಳು ಮುಹೂರ್ತದಲ್ಲಿ ಮಂತ್ರ ಹೇಳಿ ತಾಳಿಕಟ್ಟಿಸುವಂತೆ ಇವರಲ್ಲಿ ಕಂಡುಬರುವುದಿಲ್ಲ. ಹಟ್ಟಿಯ ಗೌಡ ಮತ್ತು ಪೂಜಾರಿಯೇ ಅವರ ಸ್ಥಾನವನ್ನು ವಹಿಸುತ್ತಾರೆ. ಗಂಡು ಹೆಣ್ಣಿಗೆ ತಾಳಿ ಕಟ್ಟಿದ ಅನಂತರ ಹೆಣ್ಣು-ಗಂಡಿನ ಕೈಗಳನ್ನು ಒಬ್ಬರಲ್ಲಿ ಒಬ್ಬರವನ್ನಿಟ್ಟು ಬಂದಂತವರೆಲ್ಲ ಹಾಲು ಎರೆಯುವಂತಹ ಶಾಸ್ತ್ರ ಮಾಡುವರು. ಅನಂತರ ಮದುಮಕ್ಕಳ ನಡುವೆ ಒಬ್ಬ ಮುತ್ತೈದೆ ಹರಿವಾಣದಲ್ಲಿ ಅಕ್ಕಿ ಹಿಡಿದು ಬಾರೋ ಮದಲಿಂಗ ಬಲಗಾಲ ಮುಂದಕ್ಕಿಟ್ಟು ಎಂದು ಹೇಳುತ್ತಾ ಪ್ರಶ್ನೆಯ ರೂಪದ ಮಾತುಗಳನ್ನು ಹೇಳಿದಾಗ, ಗಂಡು ಅದಕ್ಕೆ ಉತ್ತರ ಕೊಡುವನು. ಇದಕ್ಕೆ ಅಕ್ಕಿ ಶಾಸ್ತ್ರ ಎನ್ನುವರು. ಇದಾದ ಅನಂತರ ನವದಂಪತಿಗಳನ್ನು ಮನೆಯ ಒಳಗಡೆ ಬಿಡಿಸಿಕೊಳ್ಳುವುದಿಲ್ಲ. ಅವರನ್ನು ಹಂದರದ ಬಳಿ ಕುಳ್ಳಿರಿಸಿರುತ್ತಾರೆ.

ಗೊಲ್ಲರ ಮದುವೆಯ ಊಟದ ವ್ಯವಸ್ಥೆಯಲ್ಲಿ ವಿಶೇಷತೆ ಏನೂ ಕಂಡು ಬರುವುದಿಲ್ಲ. ಅಕ್ಕಿಪಾಯಸ (ಉಗ್ಗಿ) ಅನ್ನ, ಸಾರು, ತಾಳು ಮುಂತಾದವನ್ನು ಮಾಡಿರುತ್ತಾರೆ. ಆದರೆ ಇತ್ತೀಚೆಗೆ ಬೇರೆಯವರು ಮಾಡುವ ರೀತಿಯೇ ಅಡುಗೆಯನ್ನು ಮಾಡುವುದನ್ನು ಗಮನಿಸಬಹುದು. ಆದರೆ ಅದನ್ನು ಹಣ ಉಳ್ಳಂತಹವರು ಮಾತ್ರ ಹಾಗೆ ಮಾಡಿದರೆ ಹಟ್ಟಿಯಲ್ಲಿರುವ ಬಡವರು ಹಿಂದಿನಂತೆಯೇ ಈಗಲೂ ಮದುವೆ ಅಡಿಗೆಯನ್ನು ಮಾಡುವರು. ಇವರಲ್ಲಿ ಮತ್ತೊಂದು ಸಂಗತಿ ಎಂದರೆ ಧಾರೆ ಮುಗಿದ ನಂತರ ಅವರ ಬಂಧು ಬಳಗದವರು ಬೂವದ (ಅನ್ನದ) ಮುದ್ದೆಯನ್ನು ತಿನ್ನುವರು. ಇದರಲ್ಲಿ ಐದು ಮುದ್ದೆಗಳನ್ನು ಮಾಡಿರುತ್ತಾರೆ. ಎರಡು ಹೆಣ್ಣಿನ ಕಡೆಯವರಿಗೆ ಎರಡು

ಗಂಡಿನಕಡೆಯವರಿಗೆ ಒಂದು ಪೂಜಾರಿಗೆ ಗೌಡರಿಗೆ ಕೊಡಬೇಕು. ಈ ಬೂವದ ಮುದ್ದೆಯನ್ನು ಮಡಿಯಿಂದ ತಯಾರಿಸುವರು.

ಮದುವೆ ಊಟವಾದ ಬಳಿಕ ಜಾಡಿ ತೀರಿಸುವ ಶಾಸ್ತ್ರವನ್ನು ಮಾಡುತ್ತಾರೆ. ಈ ಶಾಸ್ತ್ರದಲ್ಲಿ ಎಲೆ ಅಡಿಕೆ ಪ್ರಧಾನ ಪಾತ್ರವಹಿಸುತ್ತದೆ. ಈ ಶಾಸ್ತ್ರದಲ್ಲಿ ಒಂದು ಗಡಿಗೆ ತುಂಬ ಅಡಿಕೆ ತುಂಬಿ ಆ ಗಡಿಗೆ ಕಂಠಕ್ಕೆ ಬಟ್ಟೆಯನ್ನು ಕಟ್ಟಿ ಮೂರು ಕಟ್ಟೆ ಮನೆಯ ಗೌಡರ ಮುದ್ರೆ ಉಂಗುರದ ಮುದ್ರೆಯನ್ನೊತ್ತಿರುತ್ತಾರೆ. ಅದನ್ನು ಯಾರೂ ಮುಟ್ಟುವಂತಿರುವುದಿಲ್ಲ. ಅಡಿಕೆಯ ಜೊತೆಗೆ ಹದಿನೈದು - ಇಪ್ಪತ್ತು ಕಟ್ಟು ಎಲೆ ಇಟ್ಟಿರುತ್ತಾರೆ. ಇದರಲ್ಲಿ ಗಂಡಿನ ಮನೆ ವೀಳ್ಯ, ಮನೆದೇವರ ವೀಳ್ಯ, ಗ್ರಾಮದ ಪಟೇಲ ಹಾಗೂ ಶಾನುಭೋಗರ ವೀಳ್ಯ, ಕುಲದೇವರ ವೀಳ್ಯ, ಪೂಜಾರಿವೀಳ್ಯ ಎಂದು ಹೆಣ್ಣಿನ ಕಡೆಯವರು ವಿಂಗಡಿಸಬೇಕು. ಈ ಸಂದರ್ಭದಲ್ಲಿ ಎಲೆ ಅಡಿಕೆಯನ್ನು ಜಾಡಿ (ಕರಿಕಂಬಳಿ ಗದ್ದಿಗೆ) ಯ ಮೇಲಿಟ್ಟ ಮೇಲೆ ಹೇಳಿದವರಲ್ಲಿ ಒಬ್ಬೊಬ್ಬರನ್ನು ಕರೆದು ಅವರಿಗೆ ಎಲೆ ಅಡಿಕೆ ಕೊಡುತ್ತಾರೆ. ಈ ಕೆಲಸವನ್ನು ಕರಡಿ ಕುಲಕ್ಕೆ (ವಂಶ) ಸೇರಿದ ಗೊಲ್ಲರು ಮಾತ್ರ ಮಾಡುತ್ತಾರೆ. ಈ ಜಾಡಿ ಹಾಸುವ ತೆಗೆಯುವ ಸಂಪೂರ್ಣ ಅಧಿಕಾರ ಅವರಿಗೆ ಮಾತ್ರ ಸೇರಿದ್ದು. ಈ ಶಾಸ್ತ್ರ ಮುಗಿದ ಬಳಿಕ ಗಂಗೆ ಪೂಜೆಯನ್ನು ಮಾಡುವರು. ಹೆಣ್ಣನ್ನು ಬಾವಿಯ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಹೆಣ್ಣಿನಿಂದ ಗಂಗೆಯನ್ನು ಪೂಜಿಸಿ ತರುವಾಯ ತುಂಬಿದ ಗಡಿಗೆಯನ್ನು ಮೊದಲು ಹೆಣ್ಣಿಗೆ ಹೊರಿಸಿ ಅನಂತರ ಇನ್ನು ಇಬ್ಬರು ಮುತ್ತೈದೆಯರಿಗೆ ಹೊರಿಸಿ ವಾದ್ಯಗಳ ಸಮೇತ ಕಳಸವನ್ನು ಹಿಡಿದು ಮೆರವಣಿಗೆಯ ಮೂಲಕ ಮನೆಗೆ ಕರೆದುಕೊಂಡು ಬರುವರು. ಈ ಸಂದರ್ಭದಲ್ಲಿ ಮನೆಯ ಬಾಗಿಲಲ್ಲಿ ಗಂಡು, ಹೆಣ್ಣು ಹೊತ್ತ ಗಡಿಗೆಗೆ ಪೂಜಿಸಿ ಅದನ್ನು ಇಳಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ಒಡಪುಗಳನ್ನು ಕಟ್ಟಿ ಹೆಸರನ್ನು ಹೇಳಿ ನೀರನ್ನು ಇಳಿಸಿಕೊ ಎಂದು ಹಿರಿಯ ಹೆಂಗಸರು ಹೇಳಿದಾಗ ಗಂಡು, ಹಾಗೆ ಮಾಡುವನು.

ಉದಾ : ಅರಗಿನ ಕೊಡ ಸೆರಗಿನ ಸಿಂಬೆ
ಶೀಲವಂತರ ಮಗ್ಳು
ಸೀತಾದೇವಿ ಬರ್‍ತಾಳೆ
ಮಾರಿನೋಡಿ ದಾರಿ ಬಿಡ್ರಿ

ಮದುವೆಯಾದ ದಿವಸವೇ ಹೆಣ್ಣನ್ನು ಗಂಡಿನ ಮನೆಗೆ ಕರೆದುಕೊಂಡು ಹೋಗುತ್ತಾರೆ. ಅವರ ಮನೆಯಲ್ಲಿ ಹೊಸ್ತಿಲು ತಡೆಯುವ ಶಾಸ್ತ್ರವನ್ನು ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಗಂಡಿನ ತಂಗಿ ತನ್ನ ಅಣ್ಣ - ಅತ್ತಿಗೆಯವರ ಕಾಲು ತೊಳೆಯುತ್ತಾಳೆ. ಈ ಸಂದರ್ಭದಲ್ಲಿ ತಂಗಿ ಅಣ್ಣನಿಗೆ ನಿನ್ನ ಹೆಂಡತಿ ಹೆಣ್ಣು ಮಗುವನ್ನು ಹೆತ್ತರೆ ಅವಳನ್ನು ನನ್ನ ಮಗನಿಗೆ ಕೊಡಬೇಕು ಎಂದು ಆತನ ಕಾಲು ಹಿಡಿಯುತ್ತಾಳೆ. ಆಗ ಗಂಡು ತನ್ನ ತಂಗಿಗೆ ಚಿನ್ನ, ಬಟ್ಟೆ, ವಸ್ತ್ರ ಇತರೆ ವಸ್ತುಗಳನ್ನು ಕೊಡುತ್ತೇನೆ ಕಾಲು ಬಿಡು ಎಂದಾಗ

ಅವಳು ಅವ್ಯಾವುವೂ ನನಗೆ ಬೇಡ ಹೆಣ್ಣನ್ನೇ ಕೊಡಬೇಕು ಎಂದು ಅವನಿಂದ ಒಪ್ಪಿಗೆ ಪಡೆದು ಅನಂತರ ಕಾಲನ್ನು ಬಿಡುವಳು. ಈ ಸಂದರ್ಭದಲ್ಲಿ ಬಾಗಿಲಿಗೆ ವೊಳೆ ಹೊಡೆಯುವರು. ಇದರ ಅರ್ಥ ಗುರುಹಿರಿಯರ ಬಂಧು-ಬಳಗದವರ ಎದುರಿನಲ್ಲಿ ನಾವು ಗೃಹಸ್ಥ ಜೀವನಕ್ಕೆ ಕಾಲಿಟ್ಟಿದ್ದೇವೆ ಎಂಬ ಅರ್ಥದ ಸಂಕೇತ.

ನವದಂಪತಿಗಳು ಮನೆಯೊಳಗೆ ಹೋಗುವ ಸಂದರ್ಭದಲ್ಲಿ ಮನೆಯ ಒಳಗೆ ಬಾಗಿಲಿಗೆ ಎದುರು ಇರುವ ಗೋಡೆಗೆ ಎರಡು ಕಂಚಿನ ತಟ್ಟೆ (ಗಂಗ್ಳ) ಯನ್ನು ಇಟ್ಟು ಸಗಣಿಕಲಸಿದ ಉಂಡೆಯ ಮೇಲೆ ಮಣ್ಣಿನ ದೀಪವನ್ನಿಟ್ಟು ಮದುಮಕ್ಕಳ ಕೈಗೆ ಎಳ್ಳು-ಅಕ್ಕಿಯನ್ನು ಹಾಕಿ ಅವರಿಂದ ಈ ಮಾತನ್ನು ಹೇಳಿಸುತ್ತಾರೆ. ಹೆಣ್ಣು ಈ ಮಾತನ್ನು ಹೇಳುವಾಗ 'ನಮ್ಮ ಅತ್ತೆ ಮಾವನ ಮನೆ, ಹಾಲು ಉಕ್ಕಿದಂಗೆ ಉಕ್ಕಲಿ' ಎಂದು ಮೂರು ಬಾರಿ ತನ್ನ ಕೈಯಲ್ಲಿರುವ ಅಕ್ಕಿ ಎಳ್ಳನ್ನು ಎದುರಿಗೆ ಇಟ್ಟಿರುವ ಗಂಗ್ಳಕ್ಕೆ ಎರಚಬೇಕು. ಹಾಗೆಯೇ ಗಂಡು 'ನಮ್ಮ ತಂದೆ ತಾಯಿ ಮನೆ ಹಾಲು ಉಕ್ಕಿದಂಗೆ ಉಕ್ಕಲಿ' ಎಂದು ಮೂರು ಬಾರಿ ತನ್ನ ಕೈಯಲ್ಲಿರುವ ಅಕ್ಕಿ-ಎಳ್ಳನ್ನು ಕಂಚಿನ ಗಂಗ್ಳಕ್ಕೆ ಎರಚುವನು. ಅನಂತರ ಹೆಣ್ಣು-ಗಂಡು ಬಲಗಾಲನ್ನು ಮುಂದಿಟ್ಟು ಒಳಬಂದು ದೇವರಿಗೆ ನಮಸ್ಕರಿಸುವರು. ಇದನ್ನು ಮನೆ ತುಂಬುವ ಶಾಸ್ತ್ರ ಎನ್ನುತ್ತಾರೆ. ಆಮೇಲೆ ಹೆಣ್ಣಿನ ಕೈಯಿಂದ ಗಂಡಿನ ತಾಯಿ ಮೊಸರು ಕಡೆಸುವ ಶಾಸ್ತ್ರ ಮಾಡುವಳು. ತನ್ನ ಎಲ್ಲಾ ಅಧಿಕಾರವನ್ನು ಸೊಸೆಗೆ ಹಸ್ತಾಂತರಿಸುವಂತೆ ಶಾಸ್ತ್ರ ಮಾಡುವರು. ಅಂದು ರಾತ್ರಿ ನವದಂಪತಿಗಳಿಗೆ ಆರತಿ ಮಾಡಿ ಪ್ರಸ್ತದ ಕಾರ್ಯವನ್ನು ಮುಗಿಸುವರು. ಆದರೆ ಹಿಂದೆ ಪ್ರಸ್ತದ ಕಾರ್ಯವನ್ನು ಮೂರು ತಿಂಗಳ ತರುವಾಯ ಇಟ್ಟುಕೊಳ್ಳುತ್ತಿದ್ದರು. ವಧು ಅಪ್ರಾಪ್ತ ವಯಸ್ಸಿನವಳಾಗಿದ್ದರೆ ಆಕೆ ಋತುಮತಿಯಾದ ಬಳಿಕ ಈ ಕಾರ್ಯ ಮಾಡುತ್ತಿದ್ದರು. ಆದರೆ ಕಾಲ ಬದಲಾದಂತೆ, ಬಾಲ್ಯ ವಿವಾಹ ಕೈಬಿಟ್ಟು ಪ್ರಾಪ್ತವಯಸ್ಸಿನ ಹೆಣ್ಣು ಗಂಡುಗಳಿಗೆ ಮದುವೆ ನಿಶ್ಚಯಿಸುತ್ತಿರುವುದರಿಂದ ಬದಲಾವಣೆಗಳುಂಟಾಗಿವೆ.

ಸ್ವಾಮಿ ರಾಮತೀರ್ಥರು

— ಡಾ. ಮ.ಸು. ಕೃಷ್ಣಮೂರ್ತಿ

ಪರ್ವತ ಮಾರ್ಗದ ಇಕ್ಕೆಲಗಳಲ್ಲೂ ಮುಗಿಲು ಮುಟ್ಟುವ ಮರಗಳ ಸಾಲು ನಿಂತಿದೆ. ಅವುಗಳ ಹಸಿರು ಹಾಗೂ ದಟ್ಟಣೆ ಒಂದಕ್ಕೊಂದು ಬಿಡಿಸಲಾರದಂತೆ ಬೆಸೆದುಕೊಂಡಿವೆ. ರಜನಿಯ ಜಡೆ ಬಿಚ್ಚಿಕೊಂಡು ಕೆದರಿ ಹೋಗಿರುವಂತಿದೆ. ಎಲ್ಲೆಡೆ ಗಹನ ನೀರವತೆ ವನಸುಷಮೆ ಪಾರ್ವತಿಯಂತೆ ಧ್ಯಾನ ಮಗ್ನನಾದ ಶಂಕರನಿಗಾಗಿ ತಪೋ ಮಗ್ನಳಾಗಿರುವಳೋ ಎಂಬಂತೆ ಕಾಶ್ಮೀರದ ಅನಂತನಾಗ ಪ್ರದೇಶದ ಇಂಥದೇ ಒಂದು ಚೆಲುವಿನ ಸೆರಗಿನಲ್ಲಿ ಒಬ್ಬ ಅಶ್ವಾರೋಹಿ ತನ್ನದೇ ಗುಂಗಿನಲ್ಲಿ ಮುಂದೆ ಮುಂದೆ ಸಾಗುತ್ತಿದ್ದಾನೆ. ಅವನ ಕುದುರೆಯಬ್ಬರ ಪುಟಧ್ವನಿ ಅಲ್ಲಿಯ ಅಭಂಗ ಶಾಂತಿಯನ್ನು ಭಂಗಗೊಳಿಸುತ್ತಿದೆ. ಇದೇ ವೇಳೆಗೆ ಹಿಂದಿನಿಂದ ಯಾರೋ ಕೊಳಲು ನುಡಿಸಿದರು. ಮೌನ ಸಾಮ್ರಾಜ್ಯ ಸಂಗೀತದ ಮಧು ಸೃಷ್ಟಿಯಲ್ಲಿ ಮೀಯಿತು. ಅಶ್ವಾರೋಹಿ ಇದರಿಂದ ಉನ್ನತವಾಗಿ ಹಾಡತೊಡಗಿದ.

ಬಂತು ಬಂತು ಆಮೋದ ನೋಡ,
ಹೂ ಜಗದ ಮೇಲೆ ಕವಿಯಿತು ಆ ಮೋಡ |
ಕಂದು ಮೋಡ ಬಿಳಿ ಬಿಳಿ ಬಿಲ್ಲು |
ಕೃಷ್ಣನ ಮೇಲೆ ಎರಚಿಹುದೋಗುಲಾಲು|

ಅವನ ಹಾಡಿನ ಪ್ರತಿಯೊಂದು ಶಬ್ದದಲ್ಲೂ ಅವನ ಉನ್ಮಾದ ನುಡಿಯುತ್ತಿತ್ತು. ಕುದುರೆ ಕೂಡ ಅವನ ಈ ಸಂಗೀತಕ್ಕೆ ತಾಳ ಹಾಕುತ್ತಾ ಮುಂದೆ ಮುಂದೆ ಸಾಗುತ್ತಿತ್ತು.

ಯಾರು ಈ ಅಶ್ವಾರೋಹಿ ? ಅವನೊಬ್ಬ, ಕಲ್ಪನಾ, ವಿಲಾಸಿ ಕವಿ ಇರಬಹುದು. ಇಲ್ಲದೆ ಗಾಯಕನಿರಬಹುದು ಎನ್ನಿಸಿರಬಹುದು. ನಿಜ, ಅವನು ಕವಿವಿಭೂತಿ, ಮನೀಷಿ, ಪರಿಭೂ! ಅವನೇ ಸ್ವಾಮಿ ರಾಮತೀರ್ಥ.

ಶಂಕರಾಚಾರ್ಯರು ಜ್ಞಾನದೀಕ್ಷೆ ಪಡೆಯಲು ಒಬ್ಬ ಗುರುವಿನ ಬಳಿಗೆ ಹೋದರು. ಆ ಗುರು ಕೇಳಿದ್ದು, 'ನೀನಾರು'?

ಕೂಡಲೇ ಶಂಕರ ಉತ್ತರ ನೀಡಿದ್ದ 'ಚಿದಾನಂದ ರೂಪ'. ಶಿವೋಽಹಂ ಶಿವೋಽಹಂ'

ನಾನು ಚಿದಾನಂದರೂಪಿಯಾದ ಶಿವ. ಶತಮಾನಗಳ ತರುವಾಯ ಅದ್ವೈತೀವಾದೀ ಶಂಕರರ ಈ ಅಮರ ಸೂತ್ರವನ್ನು ರಾಮಬಾದಷಹ ಇಲ್ಲವೆ ಸ್ವಾಮಿ ರಾಮತೀರ್ಥ ಆತ್ಮಸಾತ್‌ಗೊಳಿಸಿದ. ಅಷ್ಟೇ ಅಲ್ಲ, ದುರ್ಲಭ ಅದ್ವೈತ ಭಾಜನೆಗೆ ಸರ್ವಜನ ಸುಲಭ ಭಾಷ್ಯವಾಗಿ ಬಾಳಿದ. ಅದ್ವೈತ ದಿಗಂತ ವಿಶ್ರಾಂತವಿರುವಂತೆ ಮಾಡಿದ ಮಹಂತ ರಾಮತೀರ್ಥರು.

ಜನ್ಮಭೂಮಿ ಮತ್ತು ವಂಶ

ಭಾರತದ ಗಂಡು ಭೂಮಿ ಪಂಜಾಬ್. ವೇದಗಳು ಇದೇ ಗಂಡುಭೂಮಿಯಲ್ಲಿ ಎಂದರೆ ಪಂಚನದದಲ್ಲಿ ಹುಟ್ಟಿದವು ಎನ್ನಲಾಗುತ್ತದೆ. ಇಂಥ ಪುಣ್ಯಭೂಮಿಯಲ್ಲಿ ವೈದಿಕ ಯುಗದಲ್ಲಿ ದೇವಾಪಿಯಂಥ ಬ್ರಾಹ್ಮಣರು. ಶಂತನುವಂಥ ಕ್ಷತ್ರಿಯರು ಜನಿಸಿದರು. ಯವನ ಕಾಲದಲ್ಲಿ ಗುರುನಾನಕ್ ಗುರುಗೋವಿಂದ ಸಿಂಹನಂಥ ಮಹಾಪುರುಷರಿಗೆ ಜನ್ಮಕೊಟ್ಟ ನಾಡು ಪಂಜಾಬ್.

ಇದೇ ಪಂಜಾಬಿನ ಗುಜರಾಂವಾಲಾ ಜಿಲ್ಲೆಯ ಮುರಾಲಿ ಎಂಬ ಹಳ್ಳಿಯಲ್ಲಿ ರಾಮತೀರ್ಥರು ೧೮೭೩ರ ಅಕ್ಟೋಬರ್ ೨ ರಂದು ಜನಿಸಿದರು. ಇವರ ತಂದೆ ಹೀರಾನಂದ ಗೋಸ್ವಾಮಿ ಸಾರಸ್ವತವಂಶಕ್ಕೆ ಸೇರಿದವರು. ಈ ವಂಶದ ಪ್ರತಿಷ್ಠೆಯನ್ನು ಹೆಚ್ಚಿಸಿದವರಲ್ಲಿ ಸಾರಸ್ವತಾಚಾರ್ಯರು ಪ್ರಮುಖರು. ತುಲಸೀದಾಸರೂ ಈ ಪರಂಪರೆಗೆ ಸೇರಿದವರಂತೆ.

ರಾಮತೀರ್ಥರ ತಾತಾ ಪ್ರಸಿದ್ಧ ಜ್ಯೋತಿಷಿಗಳು. ಅವರು ಈ ಜನ್ಮಕುಂಡಲಿಯನ್ನು ತಯಾರಿಸಿ ಈ ರೀತಿ ಭವಿಷ್ಯ ನುಡಿದಿದ್ದರಂತೆ. ಈ ಮಗು ಸ್ವತಃ ಸಾಯುತ್ತದೆ, ಇಲ್ಲದಿದ್ದರೆ ತಾಯಿಯನ್ನು ನುಂಗಿಕೊಳ್ಳುತ್ತದೆ. ಒಂದು ಪಕ್ಷ ಇದು ಬದುಕಿದರೆ ತನ್ನ ಕುಲವನ್ನೇ ಉದ್ಧಾರ ಮಾಡುತ್ತಾನೆ. ಇವನ ಕೀರ್ತಿ ದೂರ ದೂರದವರೆಗೂ ಹಬ್ಬುತ್ತದೆ. ಮಗುವಿಗೆ ವೈಷ್ಣವ ಧರ್ಮಾವಲಂಬಿಯಾದ ತಂದೆ ತೀರ್ಥರಾಮ ಎಂದು ಹೆಸರಿಟ್ಟರು. ಅದರಂತೆ ಆತನ ತಾಯಿ ಮಗು ಹುಟ್ಟಿದ ಒಂಬತ್ತು ತಿಂಗಳಿಗೇ ತೀರಿಕೊಂಡಳು. ಈ ಮಗುವಿನ ಪಾಲನೆ. ಪೋಷಣೆಯ ಹೊಣೆ ಇವರ ಅಜ್ಜಿ ಹಾಗೂ ಸೋದರತ್ತೆಯ ಕೊರಳಿಗೆ ಬಿತ್ತು. ಅವರು ಆತನನ್ನು ಪ್ರೀತಿಯಿಂದ ಸಾಕಿದರು. ಈ ಇಬ್ಬರು ಮಹಿಳೆಯರೂ ತುಂಬ ಧರ್ಮನಿಷ್ಠರು. ಕೃಷ್ಣಭಕ್ತರು. ಆದ್ದರಿಂದ ಚಿಕ್ಕಂದಿನಲ್ಲೇ ಈ ಮಗುವಿನಲ್ಲಿ ಕೃಷ್ಣಭಕ್ತಿಯ ಗೀಳು ಹತ್ತಿಕೊಂಡಿತು.

ತೀರ್ಥರಾಮನಿಗೆ ಇನ್ನೂ ಎರಡು ವರ್ಷ ಕೂಡ ತುಂಬಿರಲಿಲ್ಲ. ಆಗಲೇ ಅವನ ತಂದೆ ಅವನ ಮದುವೆಯ ನಿಶ್ಚಿತಾರ್ಥ ನೆರವೇರಿಸಿಬಿಟ್ಟರು. ಹತ್ತು ವರ್ಷ ಇನ್ನು ಕಳೆಯಿತೋ ಇಲ್ಲವೋ ಅಷ್ಟು ಹೊತ್ತಿಗೆ ಆತನ ಮದುವೆಯನ್ನು ಮಾಡಿದರು. ತೀರ್ಥರಾಮನ ಪ್ರಾರಂಭಿಕ ಶಿಕ್ಷಣ ಆ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಅಲ್ಲಿಯ ಪದ್ಧತಿಯಂತೆ ಉರ್ದು ಪಾರಸಿಯಲ್ಲಿ ನಡೆಯಿತು. ಆತನ ಕುಶಾಗ್ರಮತಿ ಹಾಗೂ

ಜ್ಞಾಪಕ ಶಕ್ತಿಯನ್ನು ಕಂಡು ಅಧ್ಯಾಪಕರು ಚಕಿತರಾದರು. ೯ ವರ್ಷದ ಹೊತ್ತಿಗೆ ಆತ ಪ್ರೈಮರಿ ಶಿಕ್ಷಣ ಮುಗಿಸುವುದರೊಂದಿಗೆ ಪಾರಸೀ ಭಾಷೆಯ 'ಬೋಸ್ತಾನ್' ಮತ್ತು 'ಗುಲಿಸ್ತಾನ್' ಎಂಬ ಕಾವ್ಯಗಳನ್ನು ಕಂಠಸ್ಥಗೊಳಿಸಿದ್ದ.

ಪ್ರಾಥಮಿಕ ಶಿಕ್ಷಣ ಮುಗಿಸಿ ಅವರು ಗುಜರಾನ್ ವಾಲಾ ಹೈಸ್ಕೂಲಿಗೆ ಸೇರಿದರು. ಅಲ್ಲಿ ಅವರ ತಂದೆಯ ಓರ್ವಮಿತ್ರ ಧನ್ನಾರಾಮ್ ಭಗತರು ಇವರ ಸಂರಕ್ಷಣೆಯ ಭಾರ ಹೊತ್ತರು. ಈ ಭಗತ್ ಅವರು ನಿಜಕ್ಕೂ ಭಗವತ್‌ಭಕ್ತರು. ಅವರ ಸಂಸರ್ಗದಿಂದ ತೀರ್ಥರಾಮನಲ್ಲೂ ಭಗವತ್ ನಿಷ್ಠೆ ಬೆಳೆಯಿತು. ಆ ಭಕ್ತಿ ಎಲ್ಲಿಯವರೆಗೆ ಬೆಳೆಯಿತೆಂದರೆ ತೀರ್ಥರಾಮ ಭಗತ್‌ನಲ್ಲಿ ಭಗವಂತನನ್ನೇ ಕಂಡ.

ಗುಜರಾನ್‌ವಾಲಾದಲ್ಲಿ ಅವರು ಎಂಟ್ರೆನ್ಸ್ (ಇಂದಿನ ಮೆಟ್ರಿಕ್) ಪರೀಕ್ಷೆಯ ಉನ್ನತ ಅಂಕಗಳೊಂದಿಗೆ ಉತ್ತೀರ್ಣರಾದರು. ಇತ್ತ ತಂದೆ ಯಾವುದಾದರೂ ನೌಕರಿ ಹಿಡಿದು ಹೆಂಡತಿಯನ್ನು ಮನೆತುಂಬಿಸಿಕೋ ಎಂದು ಮಾತನಾಡುತ್ತಲೇ ಇದ್ದರು. ಆದರೆ ಅದನ್ನು ಲೆಕ್ಕಿಸದೇ ತೀರ್ಥರಾಮ ಲಾಹೋರಿಗೆ ಹೋಗಿ ಅಲ್ಲಿ ಎಫ್.ಎ.ಗೆ ಹೆಸರು ಬರೆಸಿದ. ಅಲ್ಲಿ ಈತ ತುಂಬ ಕಷ್ಟಪಡಬೇಕಾಯಿತು. ಆದರೆ ಆ ಹೊತ್ತಿಗಾಗಲೇ ಆತನಲ್ಲಿ ಪರಿಶ್ರಮ ಹಾಗೂ ಭಗವಂತನಲ್ಲಿ ದೃಢ ವಿಶ್ವಾಸ ಎರಡೂ ಆಳವಾಗಿ ಬೇರೂರಿದ್ದವು. ಅತ್ಯಧಿಕ ಪರಿಶ್ರಮ ಹಾಗೂ ಹೊತ್ತಿಗೆ ಸರಿಯಾಗಿ ಊಟ ತಿಂಡಿಗಳ ಕೊರತೆಯಿಂದಾಗಿ ಆತನ ಆರೋಗ್ಯ ಕೆಟ್ಟಿತು. ಆಗ ಆತ ತನ್ನ ದೊಡ್ಡಪ್ಪನಿಗೆ ಬರೆದ ಪತ್ರದಲ್ಲಿ ಆತನ ಅಂದಿನ ಮನಃಸ್ಥಿತಿಯ ಪರಿಸ್ಥಿತಿಯ ಪರಿಚಯವಾಗುತ್ತದೆ. ಆತ ಹೀಗೆ ಬರೆದಿದ್ದ : ನನ್ನ ಬಹುದೊಡ್ಡ ಅಗತ್ಯವೆಂದರೆ ಏಕಾಂತ ಮತ್ತು ಸಮಯ. ಭಗವಂತ ಪರಿಶ್ರಮೀ ಮನಸ್ಸು ಏಕಾಂತ ಸ್ಥಾನ ಹಾಗೂ ಸಮಯ ಈ ಮೂರಕ್ಕೆ ಎಂದಿಗೂ ನನಗೆ ಬರ ಬರದಿರಲಿ. ಇದೇ ನನ್ನ ಸಂಕಲ್ಪ! ಮುಂದಕ್ಕೆ ದೇವರಿದ್ದಾನೆ !

ತನ್ನ ಕಠೋರ ಪರಿಶ್ರಮ ಹಾಗೂ ನಿಷ್ಠೆಯಿಂದಾಗಿ ತೀರ್ಥರಾಮ ತನ್ನ ಹದಿನೈದನೆಯ ವಯಸ್ಸಿನಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನಗಳಿಸಿ ಉತ್ತೀರ್ಣನಾದ. ಇದರಿಂದಾಗಿ ಆತನಿಗೆ ವಿದ್ಯಾರ್ಥಿವೇತನ ದೊರೆಯಿತು. ಅದೇ ಕಾಲೇಜಿನಲ್ಲಿ ಬಿ.ಎ. ಕ್ಲಾಸಿಗೆ ಸೇರಿದ.

ತಂದೆ ಎರಡು ವರ್ಷಗಳ ಮಗನ ಆಜ್ಞೋಲ್ಲಂಘನೆಯನ್ನು ಸಹಿಸಿದರು. ಆದರೆ ಮೂರನೆಯ ವರ್ಷವೂ ಆತ ನೌಕರಿ ಹಿಡಿಯದಿರಲು ಅವರು ಕಿಡಿಕಿಡಿಯಾದರು. ನಿನ್ನ ಸಂಸಾರ ನೀನು ನೋಡಿಕೋ ಎಂದು ಹೇಳಿ ಆತನ ಹೆಂಡತಿಯನ್ನು ಆತನ ಮನೆಗೆ ತಂದು ಬಿಟ್ಟರು. ತಮ್ಮಿಂದ ಯಾವ ಸಹಾಯವನ್ನು ನಿರೀಕ್ಷಿಸಕೂಡದೆಂದು ಕಟ್ಟುನಿಟ್ಟಾಗಿ ಹೇಳಿ ಹೊರಟು ಹೋದರು. ಮನೆಬಾಡಿಗೆ, ಪುಸ್ತಕ, ಬಟ್ಟೆ ಬರೆ, ಜೊತೆಗೆ ಇಟ್ಟಿದ್ದ ಊಟ ತಿಂಡಿ ಬೇರೆ ಯಾರಾದರೂ ಆಗಿದ್ದರೆ ಓದಿಗೆ ಮಣ್ಣು ಹಾಕಿದ್ದು ಸಾಕು ಎಂದು ನೌಕರಿ ಹಿಡಿಯುತ್ತಿದ್ದರು. ಆದರೆ ತೀರ್ಥರಾಮನಿಗೆ ಪರಿಶ್ರಮ ಮತ್ತು ಪರಮೇಶ್ವರನಲ್ಲಿ

ಅಚಲವಾದ ನಂಬಿಕೆ. ಆದ್ದರಿಂದ ಆತ ಈ ಕಷ್ಟಗಳಿಗೆಲ್ಲ ಎದೆಗುಂದಲಿಲ್ಲ. ಉಪವಾಸ ಮಾಡಬೇಕಾದ ಪರಿಸ್ಥಿತಿ ಬಂದರೂ ಧೃತಿಗೆಡದೆ ಭಗವಂತನನ್ನು ಸತ್ವಪರೀಕ್ಷೆ ಮಾಡುತ್ತಿದ್ದಾನೆ ಎಂದುಕೊಳ್ಳುತ್ತಿದ್ದ.

ಅವರು ತಮ್ಮ ಅಭಿಭಾವಕಧನ್ನಾರಾಮ ಭಗತರಿಗೆ ಬರೆದ ಕಾಗದದಿಂದ ಅವರ ಅಂದಿನ ಮನೋವೃತ್ತಿಯ ಪರಿಚಯವಾಗುತ್ತದೆ. ಅವರು ಹೀಗೆ ಬರೆದರು: ಭಗವಂತ ತುಂಬಾ ದಯಾಳು, ಅವನು ಒಮ್ಮೆ ಮುನಿದರೆ ಮತ್ತೊಮ್ಮೆ ನಮ್ಮನ್ನು ಒರೆದು ನೋಡುತ್ತಾನೆ, ಅರೆದು ನೋಡುತ್ತಾನೆ. ಇದಕ್ಕೆ ಅಳುಕದಿದ್ದರೆ ಅವನು ನಮ್ಮನ್ನು ಕರವಿಡಿದೆತ್ತಿಕೊಳ್ಳುತ್ತಾನೆ. ನಾನು ಇಂದು ಯಾವ ನೆಲದ ಮೇಲೆ ಕುಳಿತುಕೊಂಡು ಬರೆಯುತ್ತಿದ್ದೇನೋ ಅಲ್ಲಿ ಒಂದು ಕಲ್ಲು ಸಕ್ಕರೆಯ ಚೂರು ಬಿದ್ದಿತ್ತು. ಅದರ ಸುತ್ತ ಇರುವೆಗಳು ಗುಂಪುಕಟ್ಟಿದ್ದವು. ನನ್ನ ಲೇಖನಿ ಮತ್ತು ಅಕ್ಷರಗಳನ್ನು ಕಂಡು ಅವು ತಮ್ಮಲ್ಲೇ ಏನನ್ನೋ ಕುರಿತು ಮಾತನಾಡಿಕೊಳ್ಳುತ್ತಿದ್ದವು. ಅದರ ಅರ್ಥವನ್ನು ನಾನು ಊಹಿಸಿ ತಮಗೆ ಬರೆಯುತ್ತಿದ್ದೇನೆ.

ಮೊದಲನೆಯ ಇರುವೆ ಅದು ಅತ್ಯಂತ ಕಿರಿಯ ಇರುವೆ. ಅನುಭವ ಶೂನ್ಯ! ಅದು ಹೇಳಿತು ; ಇಲ್ಲಿ ನೋಡು ಈ ಲೇಖನಿಯ ಚಮತ್ಕಾರವನ್ನು ಕಾಗದದ ಮೇಲೆ ಗುಂಡು ಗುಂಡಾಗಿ ಏನನ್ನೋ ಬರೆಯುತ್ತಿದೆ. ಇದನ್ನು ಜನ ಆಸಕ್ತಿಯಿಂದ ಓದಿ ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ. ನಿರ್ಜೀವವಾದರೂ ಇವು ಅದೆಂಥ ಚಿತ್ತಾರಗಳನ್ನು ಬರೆಯುತ್ತಿವೆ.

ಇದನ್ನು ಕೇಳಿ ಎರಡನೆಯ ಇರುವೆ ಹೇಳಿತು. ಅದು ಮೊದಲನೆಯದಕ್ಕಿಂತ ಕೊಂಚ ವಯಸ್ಸಿನಲ್ಲಿ ದೊಡ್ಡದು. ಆದ್ದರಿಂದ ಅನುಭವವೂ ಇತ್ತು. "ತಂಗಿ, ಲೇಖನಿ ಏನು ಮಾಡೀತಾ? ಅದು ಜಡ. ಅಂಗುಷ್ಠ ಮತ್ತು ಇತರ ಎರಡು ಬೆರಳುಗಳ ನೆರವಿಲ್ಲದಿದ್ದರೆ ಅದು ಏನು ಬರೆಯುತ್ತಿತ್ತು? ಆದ್ದರಿಂದ ಈ ಸುಂದರ ಚಿತ್ರಗಳನ್ನು ಬರೆದುದಕ್ಕಾಗಿ ಆ ಬೆರಳುಗಳನ್ನು ಹೊಗಳಬೇಕು."

ಈ ಎರಡು ಇರುವೆಗಳಿಗಿಂತ ಜಾಣೆಯಾದ ಇನ್ನೊಂದು ಇರುವೆ ಹೇಳಿತು ; "ಬೆರಳೇನುಮಾಡಾವು? ಅವು ಕೈಗಳ ಅಧೀನ ! ಆದ್ದರಿಂದ ಈ ಅಕ್ಷರಗಳನ್ನು ಬರೆದ ಆ ಕೈಗಳಿಗೆ ಪ್ರಶಂಸೆ ಸಲ್ಲಬೇಕು."

ಇವೆಲ್ಲಕ್ಕಿಂತ ಜಾಣೆಯಾದ ಮತ್ತೊಂದು ಇರುವೆ ಹೇಳಿತು? ಲೇಖನಿ, ಬೆರಳು ಮತ್ತು ಕೈ ಸೇರಿ ಇವೆಲ್ಲ ಶರೀರದ ಅಧೀನ. ಶರೀರವಿಲ್ಲದಿದ್ದರೆ ಇವೆಲ್ಲಿರುತ್ತಿದ್ದವು. ಆದ್ದರಿಂದ ಆ ಶರೀರವನ್ನು ನಾವು ಕೊಂಡಾಡಬೇಕು.

ಇರುವೆಗಳು ತಮ್ಮ ಮಾತು ಮುಗಿಸಿದಾಗ ನಾನು ಹೇಳಿದೆ : ಓ ನನ್ನ ಆತ್ಮದ ರೂಪಾಂತರಗಳೇ, ಈ ಶರೀರವೂ ಜಡವೇ, ಇದಕ್ಕೂ ಬೇರೊಂದರ ಆಶ್ರಯಬೇಕು. ಅದೇ ಪ್ರಾಣ ಇಲ್ಲವೇ ಜೀವ. ಆದ್ದರಿಂದ ಈ ಎಲ್ಲಾ ಗುಣಕೀರ್ತನ ಅದಕ್ಕೇ

ಸಲ್ಲಬೇಕು. ನನ್ನ ಈ ಸಂದೇಶವನ್ನು ಇರುವೆಗಳಿಗೆ ಮುಟ್ಟಿಸುತ್ತಿರುವಾಗ ನನಗೆ ನನ್ನ ಗುರುವಿನ ನೆನಪಾಯಿತು. ಜೀವಾತ್ಮವೂ ಕೂಡ ಅಖಿಲ ಬ್ರಹ್ಮಾಂಡವನ್ನು ಪರಿಪಾಲಿಸುವ ಆ ವಿಶ್ವಾತ್ಮನ ಅಂಶವೇ ಎನ್ನುವುದನ್ನು ನಾನು ಮರೆಯುತ್ತೇನೆ. ಅವನ ಇಚ್ಛೆ ಇಲ್ಲವೇ ಪ್ರೇರಣೆಯಿಲ್ಲದೆ ಇದು ಏನೂ ಮಾಡಲಾರದು. ಆದ್ದರಿಂದ ಲೇಖನಿ, ಬೆರಳು, ಕೈ ಶರೀರ ಮತ್ತು ಜೀವಾತ್ಮ ಇವೆಲ್ಲಕ್ಕೂ ಚಾಲನೆ ನೀಡುತ್ತಿರುವ ಪರಮಾತ್ಮ ಜಗತ್ತಿನಲ್ಲಿ ಈ ವಿಚಿತ್ರ ಚಿತ್ರಗಳನ್ನೂ ತನ್ನ ಬಹುರೂಪೀ ಹಾಗೂ ಸರ್ವಶಕ್ತಿಮತೀ ಪ್ರಕೃತಿಯ ಮೂಲಕ ಬರೆಸುತ್ತಿದ್ದಾನೆ. ಅವನ ಅಪ್ಪಣೆಯಿಲ್ಲದೆ ಒಂದು ಎಲೆಯೂ ಅಲುಗದು. ಆದ್ದರಿಂದ ಇವೆಲ್ಲ ಮಹಿಮೆ ಆತನದು. – ನಿಮ್ಮ ರಾಮ

ಎಲ್ಲ ಕಷ್ಟಗಳನ್ನು ಎದುರಿಸಿ ತೀರ್ಥರಾಮ ಮುಂದೆ ಸಾಗುತ್ತಿದ್ದ. ಆದರೆ ಧೈರ್ಯ ಪರೀಕ್ಷೆ ಸುಲಭವೇನಲ್ಲ. ಅವನ ಎಲ್ಲ ವಿಷಯಗಳಲ್ಲೂ ಅದರಲ್ಲೂ ಗಣಿತದಲ್ಲಿ ತೀಕ್ಷ್ಣಮತಿ. ಆದರೆ ಇಂಥ ಮೇಧಾವಿ ಬಿ.ಎ. ಯಲ್ಲಿ ಫೇಲಾದ. ಇಂಗ್ಲಿಷ್‌ನಲ್ಲಿ ಮೂರು ಅಂಕಗಳಿಂದ ಅವನು ನಪಾಸ್ ಆದ. ತೀರ್ಥರಾಮನ ಈ ಅನುತ್ತೀರ್ಣತೆ ವಿದ್ಯಾರ್ಥಿಗಳಿರಲಿ ಅವನ ಅಧ್ಯಾಪಕರು ಹಾಗೂ ಪ್ರಿನ್ಸಿಪಾಲರನ್ನು ಅಚ್ಚರಿಯ ಕಡಲಿನಲ್ಲಿ ಮುಳುಗಿಸಿತು. ಪ್ರಿನ್ಸಿಪಾಲರು ಆತನ ಪೇಪರನ್ನು ಪುನಃ ನಿರೀಕ್ಷಿಸಲು ಎರಡೆರಡು ಸಲ ಪ್ರಯತ್ನಿಸಿದರು. ಆ ಬಗೆಗೆ ಪತ್ರಿಕೆಗಳಲ್ಲೂ ಸಾಕಷ್ಟು ಟೀಕೆ ಬಂತು. ಇದರ ಪರಿಣಾಮವಾಗಿಯೂ ಯೂನಿವರ್ಸಿಟಿಯ ನಿಯಮಗಳಲ್ಲೇನೋ ಪರಿವರ್ತನೆ ಯಾಯಿತು. ಆದರೆ ಅದರಿಂದ ತೀರ್ಥರಾಮನಿಗೇನೂ ಪ್ರಯೋಜನವಾಗಲಿಲ್ಲ. ಅವನು ಒಂದು ವರ್ಷ ಕಳೆದುಕೊಳ್ಳಬೇಕಾಯಿತು. ಮುಂದಕ್ಕೇನು ಎಂದು ಆತ ಕಂಗಾಲಾದ. ಆದರೆ ಆತನ ಅಸೀಮ ಧೈರ್ಯ ಹಾಗೂ ದೈವನಿಷ್ಠೆ ಆತನಿಗೆ ಹೊಸ ಸ್ಫೂರ್ತಿ ನೀಡಿತು. ಆತ ಏಕಾಂತದಲ್ಲಿ ದೇವರನ್ನು ಪ್ರಾರ್ಥಿಸಿದ. "ನಾನು ಕಂದನದ ಗುಂಡು, ಬೇಕಾದರೆ ನೀನು ಅದನ್ನು ಕರಗಿಸು, ಇಲ್ಲಿ ಇಂದೇ ಒರೆದು ನೋಡು, ನಿನಗೆ ಮನಸ್ಸು ಬಂದಂತೆ ಕುಣಿಸು, ನಾನು ಎಲ್ಲ ವಿಧವಾದ ಪರೀಕ್ಷೆಗೂ ಸಿದ್ಧ."

ನಿರ್ಮಲ ಹೃದಯದಿಂದ ಮಾಡಿದ ಆತನ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ಸ್ವತಃ ಪ್ರಿನ್ಸಿಪಾಲರು ಅವನನ್ನು ಕರೆದು ಧೈರ್ಯ ಹೇಳಿ ಯಥಾಶಕ್ತಿ ಸಹಾಯ ನೀಡುವುದಾಗಿ ಹೇಳಿದರು. ಗೆಳೆಯರೂ ಒತ್ತಾಸೆಯಾಗಿ ನಿಂತರು. ತೀರ್ಥರಾಮ ಮತ್ತೆ ದ್ವಿಗುಣಿತ ಉತ್ಸಾಹದಿಂದ ಓದತೊಡಗಿದ. ಘೋರ ಪರಿಶ್ರಮ ಮಾಡಿದ. ಅದರ ಫಲವಾಗಿ ಮುಂದಿನ ವರ್ಷ ಆತ ಇಡೀ ವಿಶ್ವವಿದ್ಯಾಲಯಕ್ಕೆ ಪ್ರಥಮನಾಗಿ ಉತ್ತೀರ್ಣನಾದ

ಭೀಷ್ಮ ಪ್ರತಿಜ್ಞೆ

ತೀರ್ಥರಾಮನ ದ್ವಿತೀಯ ಭಾಷೆ ಎಫ್. ಎ. ವರೆಗೆ ಪಾರಸಿಯಾಗಿತ್ತು. ಆತ ಬಿ.ಎ.ಗೆ ಸೇರಿಕೊಂಡಾಗ ಅವನ ಸಹಪಾಠಿಗಳು ಅವನನ್ನು ಛೇಡಿಸಿದರು. "ಗೋಸ್ವಾಮಿಗಳೇ ನೀವು ಬ್ರಾಹ್ಮಣರಾಗಿ ಪಾರಸೀ ಓದಿ ನಿಮ್ಮ ಮಾತೃಭಾಷೆ ಮತ್ತು

ದೇವಭಾಷೆಗೆ ಅಪಮಾನ ಮಾಡುತ್ತಿದ್ದೀರಿ. ನೀವೇ ಹೀಗಾದರೆ ಇನ್ನೂ ಬೇರೆ ಜಾತಿಯವರನ್ನು ಏನು ಕೇಳುವುದು ? ಈ ಮಾತು ರಾಮತೀರ್ಥನ ಮರ್ಮಕ್ಕೆ ನಾಟಿತು. ಅವನಿಗೆ ತುಂಬಾ ದುಃಖವಾಯಿತು. ನಾಚಿಕೆಯೂ ಆಯಿತು. ಆಗ ಆತ ಪ್ರತಿಜ್ಞೆ ಮಾಡಿದ: 'ನಾನು ಬ್ರಾಹ್ಮಣನ ಪುತ್ರನೇ ಆಗಿದ್ದರೆ ನನ್ನ ಮಾತೃಭಾಷೆ ಸಂಸ್ಕೃತವನ್ನು ಓದಿ ಅದರಲ್ಲೇ ಉನ್ನತ ಅಂಕಗಳನ್ನು ತೆಗೆದುಕೊಂಡು ಬಿ.ಎ. ಉತ್ತೀರ್ಣನಾಗುತ್ತೇನೆ.

ಈ ಪ್ರತಿಜ್ಞೆ ಮಾಡಿದಾಗ ಆತನಿಗೆ ಸಂಸ್ಕೃತದ ವರ್ಣಮಾಲೆಯ ಪರಿಚಯವೂ ಇರಲಿಲ್ಲ. ಮರುದಿನವೇ ಆತ ತನ್ನನ್ನು ಸಂಸ್ಕೃತದ ತರಗತಿಗೆ ಸೇರಿಸಿಕೊಳ್ಳಬೇಕೆಂದು ಪ್ರಿನ್ಸಿಪಾಲರಿಗೆ ಅರ್ಜಿ ಕೊಟ್ಟ. ಅವರು ಅದನ್ನು ಸಂಸ್ಕೃತ ಅಧ್ಯಾಪಕರಿಗೆ ರವಾನಿಸಿದರು. ಆ ಪಂಡಿತರು ತೀರ್ಥರಾಮನನ್ನು ಪರೀಕ್ಷಿಸಿ ಆತನಿಗೆ ಸಂಸ್ಕೃತದ ಗಂಧಮಪಿನಾಸ್ತಿ. ಆದ್ದರಿಂದ ಆತನನ್ನು ಸಂಸ್ಕೃತ ತರಗತಿಗೆ ಸೇರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಬರೆದರು.

ತೀರ್ಥರಾಮ ಮತ್ತೆ ಮತ್ತೆ ಮನವಿ ಮಾಡಿಕೊಂಡ. ಆದರೆ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಪಂಡಿತರು ಆತ ತಮ್ಮ ತರಗತಿಯಲ್ಲಿ ಕುಳಿತುಕೊಳ್ಳಲು ತಮ್ಮದೇನೂ ಅಭ್ಯಂತರವಿಲ್ಲ ಎಂದರು. ಇದರಿಂದ ಉತ್ತೇಜಿತನಾಗಿ ಆತ ಸ್ವತಃ ತನ್ನ ಸಹಪಾಠಿಗಳ ಪ್ರೇರಣೆಯಂತೆ ಸಂಸ್ಕೃತ ವ್ಯಾಸಂಗಕ್ಕೆ ಕೈ ಹಚ್ಚಿದ. ಆ ಅಭ್ಯಾಸದಲ್ಲಿ ಆತ ಎಷ್ಟೊಂದು ತಲ್ಲೀನನಾದನೆಂದರೆ ಆತನಿಗೆ ಊಟ ತಿಂಡಿಯ ಪರಿವೆಯೇ ಇರಲಿಲ್ಲ. ಹಗಲಿರುಳುಗಳ ಪರಿವೆಯೂ ಇರಲಿಲ್ಲ. ಈ ಕಠೋರ ಪರಿಶ್ರಮದಿಂದ ಪವಾಡ ನಡೆದು ಹೋಯಿತು. ಎರಡು ತಿಂಗಳಿನ ಅವಧಿಯಲ್ಲೇ ಆತ ಸಂಸ್ಕೃತದ ಸಾಮಾನ್ಯ ಜ್ಞಾನವೇ ಅಲ್ಲ, ತನ್ನ ತರಗತಿಯ ಪಠ್ಯಗಳನ್ನು ಅರೆದು ಕುಡಿದು ಅಲ್ಲಿಂದ ಮುಂದಕ್ಕೆ ಕಾಲಿಟ್ಟ.

ಈಗ ನನಗೆ ಪರೀಕ್ಷೆ ಮಾಡಿ! ಎಂದು ಸಂಸ್ಕೃತ ಪ್ರಾಧ್ಯಾಪಕರನ್ನು ಕೇಳಿಕೊಂಡ. ಪಂಡಿತರು ಪರೀಕ್ಷೆ ನಡೆಸಿದರು. ಎರಡು ತಿಂಗಳಲ್ಲಿ ಆತ ಸಾಧಿಸಿದ ಈ ಪ್ರಗತಿಯನ್ನು ಕಂಡು ಅವರು ಇವನೇನು ಮನುಷ್ಯನೋ ದೈವವೋ ಎಂದು ದಂಗಾದರು. ಆತ ತರಗತಿಯಲ್ಲಿ ಮೊದಲಿನಿಂದಲೂ ಸಂಸ್ಕೃತ ಓದುತ್ತಿದ್ದ ವಿದ್ಯಾರ್ಥಿಗಳನ್ನೂ ಹಿಂದೆ ಹಾಕಿದ್ದ. ಇದರಿಂದ ಸುಪ್ರೀತರಾದ ಅವರು ತಾವೇ ಸ್ವತಃ ಪ್ರಿನ್ಸಿಪಾಲ್‌ಗೆ ಕಾಗದ ಬರೆದು ಆತನಿಗೆ ಸಂಸ್ಕೃತ ಕೊಡಿರೆಂದು ಶಿಫಾರಸ್ಸು ಮಾಡಿದರು. ಅದರಂತೆ ತೀರ್ಥರಾಮ ಈಗ ಸಂಸ್ಕೃತ ತರಗತಿಗೆ ಸೇರಿಕೊಂಡ.

ಬಿ.ಎ. ಪರೀಕ್ಷೆಯಲ್ಲಿ ಫೇಲ್ ಆದ್ದರಿಂದ ಆತನ ವಿದ್ಯಾರ್ಥಿವೇತನ ನಿಂತು ಹೋಯಿತು. ಆದರೆ ಆತ ಭಗವಂತನ ಮೇಲೆ ಭರವಸೆಯಿಟ್ಟು ನಿಶ್ಚಿಂತನಾಗಿದ್ದ.

ಹೀಗಿರುವಾಗ ಒಮ್ಮೆ ಅನಿರೀಕ್ಷಿತವಾಗಿ ಅವರ ದೊಡ್ಡಪ್ಪ (ತಾಯಿಯ ಅಕ್ಕನ ಗಂಡ) ರಘುನಾಥದಾಸರಿಂದ ಅವನಿಗೆ ಒಂದು ಪತ್ರ ಬಂತು. ಅವರು ಅದರಲ್ಲಿ ಅವನಿಗೆ ಧೈರ್ಯ ಹೇಳಿ ತಾವು ತಿಂಗಳಿಗೆ ೨೫ ರೂಪಾಯಿ ಕಳಿಸಿಕೊಡುವುದಾಗಿಯೂ ನಿಶ್ಚಿಂತೆಯಿಂದ ಓದು ಮುಂದುವರಿಸು ಎಂದು ಬರೆದಿದ್ದರು. ಇವರ ಜೊತೆಗೆ ಆತ ಮನೆ ಪಾಠ ಕೂಡ ಹೇಳುತ್ತಿದ್ದ.

ಬಿ.ಎ. ಪರೀಕ್ಷೆಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನಗಳಿಸಿದ ಮೇಲೆ ಆತನಿಗೆ ತಿಂಗಳಿಗೆ ೬೦ ರೂ. ವಿದ್ಯಾರ್ಥಿ ವೇತನ ಬರಲಿತ್ತು. ಆದ್ದರಿಂದ ಆತ ಕ್ರಿಶ್ಚಿಯನ್ ಕಾಲೇಜು ಬಿಟ್ಟು ಸರ್ಕಾರಿ ಕಾಲೇಜು ಸೇರಿ ಎಂ.ಎ. ಓದ ತೊಡಗಿದ. ಗಣಿತ ಆತನ ಪ್ರಿಯ ವಿಷಯ. ೨೧ ವರ್ಷ ವಯಸ್ಸಿನಲ್ಲಿ ಆತ ಇಡೀ ಪಂಜಾಬಿಗೇ ಪ್ರಥಮನಾಗಿ ಎಂ.ಎ. ಪಾಸು ಮಾಡಿದ.

ಇವನ ಪ್ರತಿಭೆಯನ್ನು ಗುರುತಿಸಿ ಲಾಹೋರಿನ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರು ಈತ ಪಿ. ಸಿ. ಎಸ್. (ಪ್ರೊವಿನ್ಸಿಯಲ್ ಸಿವಿಲ್ ಸರ್ವೀಸ್) ಪರೀಕ್ಷೆ ಪಾಸು ಮಾಡಿ ವಿದೇಶಕ್ಕೆ ಹೋಗುವಂತೆ ಸಲಹೆ ಮಾಡಿದರು. ಆದರೆ ಆತನಿಗೆ ಗಣಿತವೆಂದರೆ ಎಲ್ಲಿಲ್ಲದ ಮೋಹ. ಆದ್ದರಿಂದ ಅದನ್ನು ತೊರೆದು ಆತ ಹೊನ್ನಿಗೆ ಬಾಯಿಬಿಟ್ಟುಕೊಂಡು ಎಲ್ಲೂ ಹೋಗಲು ಸಿದ್ಧನಿರಲಿಲ್ಲ. ಕೆಲದಿನಗಳ ಕಾಲ ಮನೆ ಪಾಠ ಮಾಡಿದ. ಅನಂತರ ಸಿಯಾಲ್ ಕೋರ್ಟಿನ ಮಿಷನ್ ಹೈಸ್ಕೂಲಿನಲ್ಲಿ ಉಪ ಪ್ರಾಧ್ಯಾಪಕ ಹಾಗೂ ಅಲ್ಲಿಯ ವಿದ್ಯಾರ್ಥಿ ನಿಲಯದ ಅಧೀಕ್ಷಕನಾಗಿ ನೇಮಕಗೊಂಡ. ಕೊಂಚ ಕಾಲ ಕಳೆದ ಮೇಲೆ ಅದನ್ನು ಬಿಟ್ಟು ತಾನು ಓದಿದ ಲಾಹೋರಿನ ಮಿಷನ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾದ.

ಈ ಹೊತ್ತಿಗೆ ಈತನ ವೇದಾಂತ ಜ್ಞಾನ ಹಾಗೂ ದೈವೀನಿಷ್ಠೆ ಪಂಜಾಬಿನಲ್ಲೆಲ್ಲ ಮನೆಮಾತಾಗಿತ್ತು. ಈಗ ಈತ ಲಾಹೋರಿನ ಸನಾತನ ಧರ್ಮ ಸಭೆಯ ಕಾರ್ಯದರ್ಶಿಯಾಗಿ ದುಡಿಯತೊಡಗಿದ. ವಿದ್ಯಾರ್ಥಿ ದೆಸೆಯಿಂದಲೇ ಆತನಲ್ಲಿ ವೈರಾಗ್ಯ ಹಾಗೂ ಆಧ್ಯಾತ್ಮದ ಗೀಳಿತ್ತು. ಆದರೆ ಹೆಂಡತಿ ಮತ್ತು ಎರಡು ಮಕ್ಕಳು ಅವನ ಕೊರಳಿಗೆ ಉರುಳಾಗಿದ್ದರು. 'ತಂದೆ ನನ್ನನ್ನು ಎಲ್ಲಿಲ್ಲದ ಬಂಧನಕ್ಕೆ ನೂಕಿದ' ಎಂದು ಅವರು ತಮ್ಮ ಗೆಳೆಯರೊಂದಿಗೆ ಹೇಳಿಕೊಳ್ಳುತ್ತಿದ್ದರು. ಮದುವೆಯ ಹೊತ್ತಿಗೆ ನನಗೆ ಇಷ್ಟು ತಿಳಿವಳಿಕೆ ಇದ್ದಿದ್ದರೆ ನಾನು ಈ ಬಂಧನಕ್ಕೆ ಸಿಲುಕಿಕೊಳ್ಳುತ್ತಿರಲಿಲ್ಲ. ಈಗ ಈ ಬಂಧನವನ್ನು ಕಡಿದುಕೊಳ್ಳಬೇಕಾದರೆ ನನ್ನ ಸಂಸಾರ ನಿರ್ವಹಣೆಗೆ ಸಾಕಷ್ಟು ಧನ ಸಂಗ್ರಹ ಮಾಡಿ ಅನಂತರ ಕೈ ತೊಳೆದುಕೊಳ್ಳಬೇಕು.

ಕೃಷ್ಣ ಈತನ ಮನೆ ದೈವ, ಮನ ದೈವ. ಆತನ ಭಕ್ತಿ ಸಾಗರದಲ್ಲಿ ಈತ ಮುಳುಗೇಳುತ್ತಿದ್ದ. ಪ್ರಕೃತಿಯ ಉದಾತ್ತ ಮನೋಹರ ದೃಶ್ಯಗಳನ್ನು ಕಂಡಾಗ ಆತನ ಮನ ಮಯೂರ ಮೇಘವನ್ನು ಕಂಡು ಕುಣಿಯುವಂತೆ ಕುಣಿಯುತ್ತಿತ್ತು. ಅಲ್ಲೆಲ್ಲ ಮೇಘಶ್ಯಾಮನನ್ನು ಕಾಣುತ್ತಿತ್ತು. ಬೃಂದಾವನದ ನೆನಪಾದ ಕೂಡಲೇ ಆತ ವ್ಯಾಕುಲನಾಗುತ್ತಿದ್ದ. ರಜಾದಿನಗಳಲ್ಲಿ ಪ್ರಕೃತಿಯಲ್ಲಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲು ಆತ ಪರ್ವತ ಪ್ರದೇಶದಲ್ಲಿ ಅಡ್ಡಾಡುತ್ತಿದ್ದ. ಇಂಥದೇ ಒಂದು ರಜಾದಿನ ಅವನು ಅನಂತನಾಗದಲ್ಲಿ ಅಶ್ವಾರೋಹಿಯಾಗಿ ವಿಹರಿಸುತ್ತಿದ್ದ.

ಕಾಶ್ಮೀರ ಯಾತ್ರೆ

೧೮೯೭ ರಲ್ಲಿ ಸನಾತನ ಧರ್ಮ ಸಭೆಯ ಕಾರ್ಯದರ್ಶಿಯಾಗಿದ್ದಾಗ ದ್ವಾರಕಪೀಠದ ಶಂಕರಾಚಾರ್ಯರು ಲಾಹೋರಿಗೆ ಬಂದಿದ್ದರು. ಅವರು ಪ್ರಸ್ಥಾನ ತ್ರಯಿ (ಎಂದರೆ ಭಗವದ್ಗೀತೆ, ಉಪನಿಷತ್ತು ಮತ್ತು ಬ್ರಹ್ಮಸೂತ್ರ) ಯ ಅಧಿಕಾರಿ ವಿದ್ವಾಂಸರು. ಇಡೀ ಭಾರತದಲ್ಲಿ ಅವರನ್ನು ಸರಿಗಟ್ಟುವ ವಿದ್ವಾಂಸರು ಬೇರೊಬ್ಬರಿರಲಿಲ್ಲ. ಸನಾತನ ಧರ್ಮಸಭೆಯ ಕಾರ್ಯದರ್ಶಿಯಾದ್ದರಿಂದ ತೀರ್ಥರಾಮನಿಗೆ ಅವರ ಸೇವೆ ಮಾಡುವ, ಸತ್ಸಂಗ ಮಾಡುವ ಅವಕಾಶ ದೊರೆಯಿತು.

ಅವರು ಕಾಶ್ಮೀರಯಾತ್ರೆ ಹೊರಡಲಿದ್ದರು. ತೀರ್ಥರಾಮನನ್ನು ಜೊತೆಗೆ ಕರೆದುಕೊಂಡರು. ಸ್ವಾಮಿಗಳು ಈತನ ನಿಷ್ಕಾಮ ಸೇವೆಯಿಂದ ತುಂಬ ಸುಪ್ರೀತರಾದರು. ಈತನಿಗೆ ಬ್ರಹ್ಮಸೂತ್ರ, ಶಾರೀರಿಕ ಭಾಷ್ಯ ಹಾಗೂ ಉಪಭಾಷ್ಯವನ್ನು ಪಾಠ ಹೇಳಿದರು. ಅಷ್ಟೇ ಅಲ್ಲ, ವೇದಾಂತದ ಗೂಢಾತಿ ಗೂಢ ವಿಷಯಗಳನ್ನು ಅವನಿಗೆ ಅರೆದು ಕುಡಿಸಿದರು. ನಾಲ್ಕು ತಿಂಗಳ ಕಾಲ ಅಲ್ಲಿದ್ದು ತೀರ್ಥರಾಮ ವೇದಾಂತ ರಹಸ್ಯವನ್ನೆಲ್ಲ ಕರಗತ ಮಾಡಿಕೊಂಡ. ಇದರಿಂದ ಆತನಲ್ಲಿ ವೈರಾಗ್ಯ ಭಾವನೆ ತೀವ್ರವಾಗಿ ಮೂಡಿತು.

ಅಲ್ಲಿಂದ ಹಿಂದಿರುಗಿದ ಮೇಲೆ ಹಿಂದಿನಂತೆ ಕಾಲೇಜಿಗೆ ಹೋಗತೊಡಗಿದರು. ಆದರೆ ಮನಸ್ಸು ಮಾತ್ರ ವೈರಾಗ್ಯದಲ್ಲಿ ತೊಡಗಿತ್ತು. ೧೮೯೮ರ ಬೇಸಿಗೆಯ ರಜೆಯಲ್ಲಿ ಅವರು ಹರಿದ್ವಾರ, ಹೃಷಿಕೇಶದ ಮಾರ್ಗವಾಗಿ ತಪೋವನಕ್ಕೆ ಹೋದರು. ಅಲ್ಲಿ ಗಂಗೆಯ ಆದಿಪ್ರವಾಹವನ್ನು ಕಂಡು ಅವರು ಭಾವಸಮಾಧಿಯನ್ನೇರಿದರು. ಆತ್ಮ ಸಾಕ್ಷಾತ್ಕಾರಕ್ಕಾಗಿ ಅಲ್ಲಿನ ಒಂದು ದೇವಾಲಯದಲ್ಲಿ ಕುಳಿತು ಪ್ರಯತ್ನಿಸತೊಡಗಿದರು. ಆದರೆ ಅದು ಫಲಿಸಲಿಲ್ಲ. ಆಗ ಅವರು 'ಜಲವವ-ಕೋಹಸಾರ್' (ಪರ್ವತದೃಶ್ಯ) ಎಂಬ ತಮ್ಮ ಉರ್ದು ಪುಸ್ತಕದಲ್ಲಿ ಆಗಿನ ತಮ್ಮ ಅನುಭವವನ್ನು ಹೀಗೆ ಹೇಳಿ ಕೊಂಡಿದ್ದಾರೆ: 'ಗಂಗೆ, ಯಾರ ಎದೆ ಹಾಲಿನಿಂದ ಬ್ರಹ್ಮ ವಿದ್ಯೆ ಪೋಷಣೆಯನ್ನು ಪಡೆಯುತ್ತದೋ ಆ ಎದೆ ನಿನ್ನದೇಯೆ? ಓ ಹಿಮಾಲಯ ಇದು ಬ್ರಹ್ಮವಿದ್ಯೆಯ ಆಡುಂಬೊಲವಾದ ನಿನ್ನದೇ ತೊಡೆಯೆ? ಬರಿತಲೆಯಲ್ಲಿ, ಬರಿಗಾಲಿನಲ್ಲಿ, ಬರಿ ಮೈಯಲ್ಲಿ ಉಪನಿಷತ್ತುಗಳನ್ನು ಕೈಯಲ್ಲಿ ಹಿಡಿದು ಆತ್ಮ ಸಾಕ್ಷಾತ್ಕಾರದ ಲಹರಿಯಲ್ಲಿ ಹುಚ್ಚೆದ್ದಿರುವ ರಾಮ ಪರ್ವತಾರಣ್ಯಗಳಲ್ಲಿ, ಗಂಗಾ ತಟದಲ್ಲಿ ಅಲೆಯುತ್ತಿದ್ದಾನೆ.

ಆದರೆ ಅನೇಕ ದಿನಗಳ ಉಗ್ರತಪಶ್ಚರ್ಯೆಯ ತರುವಾಯವೂ ಆತ್ಮ ಸಾಕ್ಷಾತ್ಕಾರವಾಗದಿದ್ದಾಗ ಆತ ಪ್ರತಿಜ್ಞೆ ಮಾಡಿದ. ಇಲ್ಲಿ ರಾಮನ ಆನಂದ ಘನ ತರಂಗಗಳಲ್ಲಿ ಎಲ್ಲ ಧನ-ಧಾಮ ಛಿನ್ನದಾಗುವುದು ಇಲ್ಲವೇ ರಾಮನ ಶರೀರ ಗಂಗಾ ತರಂಗದಲ್ಲಿ ವಿಲೀನವಾಗಿ ಬಿಡುವುದು.

ಛಿನ್ನವನದ ಶಲಭ ನಾನು ಬಂದಿಹೆ ಓ ಪರಂಜ್ಯೋತಿ! ಅದು ಮತ್ತೆಲ್ಲಿ ಕೆರಳುವುದೋ ಎಂಬ ಭಯ ಬೇರೆ.

ಈ ವೀರ ಪ್ರತಿಜ್ಞೆಯೊಂದಿಗೆ ರಾಮ ಪ್ರವಾಹ ಮಾರ್ಗದ ಒಂದು ಬಂಡೆಯ ಮೇಲೆ ಕುಳಿತ. ಅಲೆಗಳು ಮೇಲೆದ್ದವು. ಬಂಡೆಗೆ ಅಭಿಷೇಕ ಮಾಡಿದವು. ಆದರೂ ರಾಮ ಸ್ಥಿರವಾಗಿದ್ದ. ಕೊಂಚ ಹೊತ್ತಿನಲ್ಲಿ ನೀರು ಇಳಿಯಿತು. ಆಗ ರಾಮ ವಿಜಯ ಘೋಷ ಮಾಡಿದ "ಮ್ಯೆಂ ಕುಶ್‌ತಗಾನೇ ಇಶ್ಕ್‌ಮೇ 'ಸರದಾರ್' ಹೀ ರಹಾ ಸರ್‌ಭೀ ಜುದಾಕಿಯಾ, ತೋ 'ಸರೇದಾರ್' ಹೀ ರಹಾ.

ಪ್ರೇಮಯುದ್ಧದಲ್ಲಿ ನಾನು ಸರದಾರನಾಗೇ ಉಳಿದೆ. ಮುಂಡದಿಂದ ರುಂಡವನ್ನು ಬೇರ್ಪಡಿಸಿದೆ. ಆದರೂ ತಲೆಯನ್ನು ಕಳೆದುಕೊಳ್ಳಲಿಲ್ಲ.

ರಾಮನಿಗೆ ಇಲ್ಲೇ ಆತ್ಮ ಸಾಕ್ಷಾತ್ಕಾರವಾಯಿತೆಂದು ಹೇಳಲಾಗುತ್ತದೆ. ಆತ ಭಾವ ಸಮಾಧಿಗೇರಿ ಹಾಡಿದ.

ಆಜ಼ಾ ದಾ ಅಮ್, ಆಜಾದಾ ಅಮ್;
ಅಜಾರಖ್ ನೂರ್, ಉಫ್ತಾದಾ ಅಮ್ ;
ಅಜ ಇಶವವ ಜಾಲೇ - ಜಹಾಂ
ಅಜ಼ಾದಾ ಅಮ್, ಬಾಲಾ ಸ್ತಮ್ ;
ತನಹಾಸ್ತಮ್, ತನಹಾಸ್ತಮ್ ;
ಚೀಹ ಬುಲ ಅಜದ್ ತನಹಾಸ್ತಮ್;
ಜುಜ ಮನ ನಬಾಶರ್ ಜೀಚಶ್ಕೆ ;
ಯಕ್ತಾ ಸ್ತಮ್, ತನಹಾಸ್ತಮ್

ನಾನು ಮುಕ್ತ, ನಾನು ಮುಕ್ತ, ದುಃಖ ಸುಖಗಳ ಸೋಂಕಿನಿಂದ ದೂರ. ನಿಜ ಜಗತ್ತೆಂಬ ಮುದುಕಿಯ ಬೆಡಗು ಬಿನ್ನಾಣಗಳಿಂದ ದೂರ. ನಾನು ಒಂಟಿ, ನಾನು ಒಂಟಿ, ಎಂಥ ಆಶ್ಚರ್ಯ, ನಾನು ಒಂಟಿ ಬಡಕ ಶುಂಠಿ, ನಾನಲ್ಲದೆ ಬೇರೆ ಯಾವ ವಸ್ತುವಿನ ಅಸ್ತಿತ್ವವೂ ಇಲ್ಲಿ ಇಲ್ಲ. ನಾನು 'ಏಕಮೇವಾದ್ವೈತಮ್,' ತೀರ ಒಬ್ಬನೇ,

ಈಗ ರಾಮನಿಗೆ ತನ್ನೊಳಗೆ 'ರಾಮನ ಅನುಭೂತಿಯಾಯಿತು. ಆತ ಸ್ವತಃ ರಾಮನಿಂದ ಈಗ ಮನೆ ಮಠ, ಹೆಂಡತಿ ಮಕ್ಕಳು ಯಾರೊಡನೆಯೂ ಆತನ ಆಂತರಿಕ ನಂಟಿನ ಅಂಟು ಉಳಿಯಲಿಲ್ಲ, ಇಷ್ಟಾದರೂ ಆತ ನೌಕರಿ ಮಾಡುತ್ತಿದ್ದ. 'ಅಭಾವಗಳ ಜಗತ್ತಿನೊಡನೆ ಹೋರಾಟವೂ ನಡೆದಿತ್ತು. ಆಗ ೧೮೯೮ರಲ್ಲಿ ಆತ ತಮ್ಮ ಗುರುಗಳಾದ ಭಗತ್‌ಧನ್ನಾರಾಮ್ ಹೀಗೆ ಬರೆದರು: 'ರಾಮ ಈ ಬಾಹ್ಯ ದಾರಿದ್ರ್ಯದಿಂದಾಗಿ ಅಸೀಮ ಶ್ರೇಣಿಯ ಸಿರಿವಂತಿಕೆ ಹಾಗೂ ಸಾಮ್ರಾಟತ್ವವನ್ನು ಅನುಭವಿಸುತ್ತಿದ್ದಾನೆ.

ಈಗ ರಾಮನ ಆಂತರಿಕ ಅನುಭೂತಿ ಎಷ್ಟೊಂದು ತೀವ್ರವಾಗಿತ್ತೆಂದರೆ ಆತ ಕ್ಲಾಸಿನಲ್ಲಿ ಗಣಿತ ಪಾಠ ಮಾಡುತ್ತ ಮಾಡುತ್ತ ವೇದಾಂತ ಮತ್ತು ಸೂಫೀ ಸಿದ್ಧಾಂತಗಳನ್ನು ಹೇಳ ತೊಡಗುತ್ತಿದ್ದ. ಸೂಫೀ ಕವಿತೆಗಳನ್ನು ಹಾಡಿ ಅರ್ಥ ಹೇಳುತ್ತಿದ್ದ. ಕೆಲವೊಮ್ಮೆ

ಧ್ಯಾನಸ್ಥನಾಗಿ ಬಿಡುತ್ತಿದ್ದ. ಈಗ ಆತ ಸದಾ ಶಂಕರಾಚಾರ್ಯರ ಈ ಶ್ಲೋಕವನ್ನು ಭಾವೋನ್ಮಾದದಲ್ಲಿ ಹಾಡುತ್ತಿದ್ದ 'ಮನೋಬುದ್ಧ್ಯಹಂಕಾರಚಿತ್ತಾನಿ ನಾಹಂ, ನಚಶ್ರೋತ್ರಜಿಹ್ವೇನಚ ಘ್ರಾಣನೇತ್ರೇ, ನಚವ್ಯೋಮ, ಭೂಮಿರ್ನತೇಜೋ ವಾಯು ; ಚಿದಾನಂದರೂಪಃ ಶಿವೋsಹಂಶಿವೋsಹಂ!

ನಾನು ಮನ, ಬುದ್ಧಿ, ಅಹಂಕಾರ ಅಥವಾ ಚಿತ್ತದಲ್ಲಿ ಅಥವಾ ಕಿವಿ, ನಾಲಿಗೆ, ಇಲ್ಲವೆ ಕಣ್ಣು ಅಲ್ಲ, ವ್ಯೋಮ, ಭೂಮಿ, ಜಲ, ವಾಯು ಮತ್ತು ತೇಜಸ್ಸೂ ಅಲ್ಲ, ನಾನು ಬರಿಯ ಚಿದಾನಂದರೂಪನಾದ ಶಿವ, ಶಿವ.

ಈ ನಡುವೆ ಕೆಲವು ಮಿತ್ರರ ನೆರವಿನಿಂದ ಆತ 'ಅಲೀಸ' ಎಂಬ ಆಧ್ಯಾತ್ಮಿಕ ಪತ್ರಿಕೆಯನ್ನು ಉರ್ದುವಿನಲ್ಲಿ ಹೊರಡಿಸತೊಡಗಿದ. ಆದರೆ ಬರು ಬರುತ್ತ ಆತನ ಮನಸ್ಸು ಎಷ್ಟೊಂದು ವಿರಕ್ತವಾಯಿತೆಂದರೆ 'ರಾಮನಲ್ಲದೆ ಬೇರೇನೂ ತೋರುತ್ತಿರಲಿಲ್ಲ. ಕೊನೆಗೆ ಆತ ೧೯೦೦ರಲ್ಲಿ ಪೂರ್ಣ ವಾನಪ್ರಸ್ಥಾಶ್ರಮವನ್ನು ಹಿಡಿದ. ಸನ್ಯಾಸಿಯ ವೇಷದಲ್ಲಿ ತನ್ನ ಜನ್ಮಭೂಮಿಯವರು ಬೀಳ್ಕೊಂಡಾಗ ಅವನ ಆತ್ಮೀಯರು ಒತ್ತರಿಸಿ ಬಂದ ಕಂಬನಿಯನ್ನು ತಡೆಯದಾದರು. ರಾಮ ಪ್ರೇಮದಿಂದ ಎಲ್ಲರನ್ನು ಹೀಗೆ ಹೇಳಿ ಬೀಳ್ಕೊಟ್ಟ: ವಿದಾಯ ನನ್ನ ಬಂಧುಗಳೇ ನಿಮಗೆ ವಿದಾಯ. ಓ ಪ್ರಿಯರಾವೀ ನದೀ, ನಿನಗೆ ವಿದಾಯ. ನಿರ್ಮಲ ಹೃದಯಿಗಳೇ ನಿಮಗೆ ವಿದಾಯ!

ಲಾಹೋರನ್ನು ಬಿಟ್ಟು ಆತ ಹರಿದ್ವಾರಕ್ಕೆ ಬಂದ. ಜೊತೆಯಲ್ಲಿ ಆತನ ಹೆಂಡತಿ, ಮಕ್ಕಳೂ ಇದ್ದರು. ಹೇಗೋ ಹಾಗೂ ಹೀಗೂ ಮಾಡಿ ಆರು ತಿಂಗಳು ಕಾಲ ಇದ್ದ. ಕೊನೆಗೆ ಎಲ್ಲರನ್ನೂ ತೊರೆದು ಏಕಾಂತವಾಸಕ್ಕೆ ಹೊರಟು ಹೋದ.

ಸನ್ಯಾಸ

ಸನ್ಯಾಸಕ್ಕೆ ಮುಂಚೆಯೇ ಸನ್ಯಾಸ ಜೀವನದ ನಿಯಮಗಳನ್ನು ಆತ ಪಾಲಿಸತೊಡಗಿದ. ೧೯೦೧ರಲ್ಲಿ ತನ್ನ ಹಂಡತಿ ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳನ್ನು ತಮ್ಮ ತಂದೆಯ ಬಳಿಗೆ ಕಳಿಸಿಕೊಟ್ಟ. ಕೂಡಿಟ್ಟಿದ್ದ ಹಣವನ್ನು ಒಂದು ಪತ್ರದೊಂದಿಗೆ ಅವರಿಗೆ ಕಳಿಸಿಕೊಟ್ಟ. ಈ ಪತ್ರವನ್ನು ಆತ ದೀಪಾವಳಿಯ ದಿನ ಬರೆದಿದ್ದ. ಹೆಂಡತಿ ಮಕ್ಕಳನ್ನು ಊರಿಗೆ ಕಳಿಸಿ ರಾಮ ಲಾಹೋರಿನಿಂದ ನೇರವಾಗಿ ಹರಿದ್ವಾರಕ್ಕೆ ಬಂದ. ಜೊತೆಯಲ್ಲಿ ತಂದುದನ್ನೆಲ್ಲ ದೀನ ದಲಿತರಲ್ಲಿ ಹಂಚಿ ಬರಿಯ ಕೌಪೀನಧಾರಿಯಾಗಿ, ಏಕಾಂತ ವಾಸ ಮಾಡತೊಡಗಿದ. ಕೊನೆಗೆ ೧೯೦೧ರ ಆರಂಭದಲ್ಲಿ ವಿವೇಕಾನಂದರು ಶರೀರ ತ್ಯಾಗ ಮಾಡುವುದಕ್ಕೆ ಕೊಂಚ ಮುನ್ನ ಗಂಗಾತೀರದಲ್ಲಿ ಸನ್ಯಾಸ ಸ್ವೀಕಾರ ಮಾಡಿದ. ಈತನ ಗುರು ತೀರ್ಥ ಎಂಬ ಹೆಸರಿನ ಸನ್ಯಾಸಿ. ಆದ್ದರಿಂದ ಆತನ ಹೆಸರಿನ ಜೊತೆಗೂ 'ತೀರ್ಥ' ಎಂಬ ಹೆಸರು ಸೇರಿಕೊಂಡಿತು. ಈ ರೀತಿ ತೀರ್ಥರಾಮ ರಾಮತೀರ್ಥನಾದ.

ಸನ್ಯಾಸಿಯಾದ ಮೇಲೆ ೧೯೦೧ರಲ್ಲಿ ರಾಮತೀರ್ಥರು ಅಮರನಾಥ ಯಾತ್ರೆಯನ್ನು

ಕೈಗೊಂಡರು. ಶ್ರೀನಗರದಿಂದ ಅಮರನಾಥದವರೆಗೆ ಆತ ಒಂದೇ ಬಟ್ಟೆಯಲ್ಲಿ ಕ್ರಮಿಸಿದ. ಕೊಂಚಕಾಲ ಅವರು ಅಮರನಾಥ ಮಂದಿರದಲ್ಲಿದ್ದರು. ಚಳಿ ಹೆಚ್ಚಾದಾಗ ಲಾಹೋರಿಗೆ ಹಿಂದಿರುಗಿದರು. ಮಾರ್ಗದಲ್ಲಿ ಅವರಿಗೆ ನ್ಯೂಮೋನಿಯಾ ಆಗಿಬಿಟ್ಟಿತು. ಆಗ ಅವರ ಶಿಷ್ಯ ಸ್ವಾಮಿನಾರಾಯಣರು ಅವರ ಯೋಗ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು.

'ಅಲೀಫ್' ಪತ್ರಿಕೆಯ ಸಂಪಾದಕರಾಗಿದ್ದಾಗ ಆತ 'ಗಂಗಾ ತರಂಗ', ಸುಲಹ್ ಕೀ ಜಂಗ್, (ಸಂಧಿ ಮೇ ಸಮ್‌ರವೋ) ಜಲ್ವವ ಕೋಹಸಾರ್ (ಪರ್ವತಪ್ರಭೆ) ಮೊದಲಾದ ಉದ್ಬೋಧಕ ಲೇಖನಗಳನ್ನು ಪದ್ಯದಲ್ಲೂ ಆಧ್ಯಾತ್ಮಿಕ ವಿಷಯದಲ್ಲಿ ಹಲವಾರು ಕವಿತೆಗಳನ್ನು ಬರೆದ. ಇವುಗಳಲ್ಲಿ ಆಧ್ಯಾತ್ಮದ ಗೂಢವೂ ಗಾಢವೂ ಆದ ವಿಷಯಗಳ ರಹಸ್ಯೋದ್ಘಾಟನೆಯಿದೆ. ಅನುಭಾವದ ಸೆಳಕಿದೆ.

ರಾಮತೀರ್ಥರ ಉದ್ಗಾರ

ಮುಸ್ಸಂಜೆ! ಒಂದು ಚಿಕ್ಕ ಬೆಟ್ಟದ ಮೇಲೆ ರಾಮ ಕುಳಿತಿದ್ದಾನೆ. ವಿಚಿತ್ರ ಸ್ಥಿತಿ. ಅದನ್ನು ಬೇಸರ ಖಿನ್ನತೆ ಎಂದು ಹೇಳುವಂತಿಲ್ಲ, ಲೌಕಿಕರ ಹರ್ಷ ಎಂದೂ ಹೇಳುವಂತಿಲ್ಲ. ಅದು ಜಾಗೃತಿಯೂ ಅಲ್ಲ, ನಿದ್ರೆಯೂ ಅಲ್ಲ, ನಶೆಯೇ ಉನ್ಮಾದವೇ ಎಂದರೆ ಅದೂ ಅಲ್ಲ. ಅದೆಂಥ ರಸಾರ್ದ್ರಸ್ಥಿತಿ.

ಬೆಟ್ಟಗಳಲ್ಲಿ ಅಡ್ಡಾಡುತ್ತ

'ಎಲೆ ವಾಣಿ, ನಿನ್ನಲ್ಲಿ ಆ ಆನಂದವನ್ನು ವರ್ಣಿಸುವ ಶಕ್ತಿಯಿದೆಯೇ? ಮೊದಲು ಮುಸುಕಿನಲ್ಲಿ ಆ ಪ್ರಿಯಕರನ ಕಾಲು ಕಾಣಿಸುತ್ತಿತ್ತು. ಕೈ ಕಾಣಿಸುತ್ತಿತ್ತು. ಒಮ್ಮೆ ಕಣ್ಣು ಕಂಡರೆ ಮತ್ತೊಮ್ಮೆ ಕಿವಿ ತುಂಬ ಪ್ರಯಾಸ ಪಟ್ಟರೆ ಕಾಣುತ್ತಿತ್ತು. ಆದರೆ ಈಗ ಎಲ್ಲಿ ಕಾಣುತ್ತಿದೆ ನಾ, ಬೆತ್ತಲೆ, ಅವನು ಬೆತ್ತಲೆ! ನಾನು ಸ್ವಸ್ಥ ಅವನು ಸ್ವಸ್ಥ! ಎದೆ ಎದೆಯ ಮೇಲೆ ತುಟಿಯ ಮೇಲೆ ತುಟಿ, ಓ ಅಸ್ಥಿ ಮಾಂಸಗಳ ಹೃದಯವೇ ನೀನು ಮರೆಯಾಗಬೇಡ, ದಾರಿಬಿಡು ದೂರ! ದೂರ ಸಾಗು ಸಂತಸವೋ ಅಥವಾ ಮರಣದ ಒಸಗೆಯೋ ಕಾಣೆ. ಕಂಬನಿ ಯಾಕೆ ಜಳ ಜಳ ಬರುತ್ತಿದೆ! ಇದು ಮದುವೆಯ ಸಂತಸದ ಜಡಿಮಳೆಯೇ ಅಥವಾ ಮನೋಮರಣದ ಶೋಕವೋ ಕಾಣೆ! ಅಂತೂ ಸಂಸ್ಕಾರಗಳ ಅಂತಿಮ ಸಂಸ್ಕಾರ ನಡೆದು ಹೋಯಿತು. ಕಾಮನೆಗಳು ವಾಸನೆಗಳು ಸತ್ತು ಹೋದವು! ದುಃಖ ದಾರಿದ್ರ್ಯಗಳು ಅಂಧಕಾರ ಜ್ಞಾನದ ಬೆಳಕು ಮೂಡಿದ ಕೂಡಲೇ ಕರಗಿ ಹೋಯಿತು. ಶುಭ ಶುಭ ಕರ್ಮಗಳ ಹಡಗು ಮುಳುಗಿತು!

ಸ್ವಾಮಿಗಳು ೧೯೦೦ರ ಜುಲೈನಲ್ಲಿ ಮತ್ತೊಮ್ಮೆ ಹಿಮಾಲಯದ ಯಾತ್ರೆಗೆ ಹೊರಟರು. ಮೊದಲು ಹರಿದ್ವಾರದಿಂದ ಟೆಹರಿಗೆ ಹೋಗಿ ಅಲ್ಲಿಂದ ಯಮುನೋತ್ರಿಗೆ ಹೋದರು. ಅಲ್ಲಿಂದ ಹಿಮಾಲಯದ ಅನೇಕ ಶ್ರೇಣಿಗಳಲ್ಲಿ ಹಾದು ಗಿರಿರಾಜನ

ಪ್ರಾಕೃತಿಕ ಸೌಂದರ್ಯವನ್ನು ಆಸ್ವಾದಿಸುತ್ತ ಅವರು ಗಂಗೋತ್ತರಿಯನ್ನು ಮುಟ್ಟಿದರು. ಕೆಲವು ಕಾಲ ಅಲ್ಲಿದ್ದು ಅಲ್ಲಿಂದ ಕೇದಾರನಾಥ ಮತ್ತು ಬದರೀನಾಥ ಯಾತ್ರೆ ಮಾಡಿದರು. ಅಲ್ಲಿ ಕೆಲಕಾಲ ವಿಶ್ರಮಿಸಿ ಚಳಿಗಾಲ ಶುರುವಾಗುವ ಮುನ್ನವೇ ಆಲ್ಮೋರಕ್ಕೆ ಬಂದು ಅಲ್ಲಿಂದ ಮೈದಾನ ಪ್ರದೇಶಕ್ಕೆ ಬಂದರು.

ಮಥುರೆಯ ಧರ್ಮ ಮಹೋತ್ಸವ

ಮಥುರೆಯ ಶಾಂತಿ ಆಶ್ರಮದ ವತಿಯಿಂದ ಅಲ್ಲಿ ಒಂದು ಸರ್ವ ಧರ್ಮ ಸಮ್ಮೇಳನ ನಡೆಯಲಿತ್ತು. ಸ್ವಾಮಿ ರಾಮತೀರ್ಥರನ್ನು ಈ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು. ಇದು ಡಿಸೆಂಬರ್ ೧೯೦೧ ರಲ್ಲಿ ನಡೆಯಲಿತ್ತು. ಇದರಲ್ಲಿ ಎಲ್ಲ ಧರ್ಮದ ಪ್ರತಿನಿಧಿಗಳಿಗೆ ಭಾಷಣ ಮಾಡಲು ಹಾಗೂ ಪ್ರಬಂಧ ಮಂಡಿಸಲು ಅವಕಾಶ ನೀಡಲಾಗಿತ್ತು. ಎಲ್ಲರೂ ತಮ್ಮ ತಮ್ಮ ಧರ್ಮದ ವೈಶಿಷ್ಟ್ಯಗಳನ್ನು ಮಾತ್ರ ತಿಳಿಸಬೇಕು. ಪರಧರ್ಮದ ನಿಂದನೆ, ಖಂಡನೆ ಮಂಡನೆಗೆ ಅವಕಾಶವಿರಲಿಲ್ಲ.

ಅಧಿವೇಶನ ಆರಂಭಗೊಂಡಾಗ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ರಾಮತೀರ್ಥರು ಪ್ರಾಸ್ತಾವಿಕ ಭಾಷಣ ಮಾಡಿ ಸಮ್ಮೇಳನ ನಿಯಮ ಮತ್ತು ಉದ್ದೇಶಗಳನ್ನು ತಿಳಿಸಿಕೊಟ್ಟರು. ಎಲ್ಲರೂ ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ವಿನಂತಿಸಿಕೊಂಡರು.

ಮೂರು ದಿನಗಳ ಕಾಲ ತುಂಬಾ ಚೆನ್ನಾಗಿ ಈ ಸಮ್ಮೇಳನ ನಡೆಯಿತು. ಮೂರನೆಯ ದಿನ ಪಾದರಿ ಸ್ಕಾಟ್ ಎಂಬಾತ ತನ್ನ ಭಾಷಣದಲ್ಲಿ ಶ್ರೀಕೃಷ್ಣನ ಚಾರಿತ್ರ್ಯದ ಮೇಲೆ ಕೆಸರು ಎಸೆಯತೊಡಗಿದ. ಇದನ್ನು ಕೇಳಿ ಕೆರಳಿದ ಜನ 'ಶೇಮ್!ಶೇಮ್' ಎಂದು ಕೂಗತೊಡಗಿದರು. ಕೆಲವು ತರುಣರು ಪ್ರತಿಭಟನೆಗಾಗಿ ತೋಳು ನೀವಿಕೊಂಡು ಎದ್ದರು. ಪರಿಸ್ಥಿತಿ ಕೈ ಮೀರಿ ಹೋಗುತ್ತಿರುವುದನ್ನು ಕಂಡು ಅಧ್ಯಕ್ಷರು ತಮ್ಮ ಆಸನದಿಂದ ಎದ್ದಾಗ ಜನ ನಮ್ಮ ಸ್ವಾಮಿಗಳು ಬೈಬಲ್ಲಿನ ಮೇಲೆ ಟೀಕಾಸ್ತ್ರ ಪ್ರಯೋಗ ಮಾಡಿ ಅದನ್ನು ಛಿದ್ರ ಛಿದ್ರ ಮಾಡುತ್ತಾರೆ ಎಂದು ತಿಳಿದು ಹರ್ಷೋದ್ಗಾರ ಮಾಡಿತು. ಆದರೆ ಸ್ವಾಮಿಗಳು ಅತಿ ಮಧುರ ಶಬ್ದಗಳಲ್ಲಿ ಬೈಬಲ್ಲಿನಿಂದಲೇ ಉದಾಹರಣೆ ನೀಡಿ, ಆ ಪಾದರಿ ತನ್ನ ಮಾತುಗಳಿಂದ ಹಿಂದೂ ಧರ್ಮದ ಅವಹೇಳನ ಮಾತ್ರವಲ್ಲ ಬೈಬಲ್ಲಿಗೂ ಅಪಚಾರ ಮಾಡಿದ್ದಾರೆ ಎಂದು ತೋರಿಸಿಕೊಟ್ಟರು. ಆಗ ಆ ಪಾದರಿ ತನ್ನ ತಪ್ಪಿಗಾಗಿ ಬಹಿರಂಗವಾಗಿ ಕ್ಷಮಾಯಾಚನೆ ಮಾಡಿದ.

ಎಲ್ಲರ ಭಾಷಣ ಮುಗಿದ ಮೇಲೆ ಸ್ವಾಮಿಗಳ ಭಾಷಣ! ಅವರ ಮಾತಿನಿಂದ ಜನ ಮಾತ್ರ ಮೂಕರಾದರು. ಅವರ ಒತ್ತಾಯದ ಮೇಲೆ ಅವರು ಅಲ್ಲೇ ಕೆಲಕಾಲ ಇದ್ದರು.

ಧರ್ಮ ಸಮ್ಮೇಳನದಲ್ಲಿ ಸ್ವಾಮಿಗಳು ಮಾಡಿದ ಭಾಷಣದ ಕೆಲ ಅಂಶಗಳು :

ಪ್ರೇಮವೇ ನಿಜವಾದ ಧರ್ಮ, ಪ್ರೇಮವೇ ಈಶ್ವರ ಪ್ರಾಪ್ತಿಯ ದ್ವಾರ. ಪ್ರೇಮ

ಶೂನ್ಯವಾದ ಹೃದಯ ಬೆಳಕಿಲ್ಲದ ದೇಗುಲದಂತೆ, ಪ್ರೇಮವಿಲ್ಲದ ನಮ್ಮ ಆಲೋಚನೆ ಚಿಂತನ– ಮನನ ಪ್ರವಚನ ಎಲ್ಲ ವ್ಯರ್ಥ. ಪ್ರಭು ನಮ್ಮ ಸಿರಿವಂತಿಕೆಗೆ ಬುದ್ಧಿವಂತಿಕೆಗೆ ಪ್ರಭುತ್ವಕ್ಕೆ ಬಾಯಿಬಿಡುವವನಲ್ಲ. ಅವನಿಗೆ ತಮ್ಮ ಪ್ರೇಮದ ಹಸಿವು. 'ನಾಯಮಾತ್ಮಾ ಪ್ರವಚನೇನಲಭ್ಯ. ನವೋದಯ ಬಹುನಾ ಯುವೇ ವೈಷವೃಣುತೇತದ್ಯೆವ ಆತ್ಮಾವೃಣುತೆನೂಂಸ್ಮಾಮ್

ಈಗ ಪ್ರಶ್ನೆ ಏಳುವುದು ಭಗವಂತನಿಗೆ ಯಾರು ಪ್ರಿಯರು ಎಂದು. ಉಪನಿಷತ್ತಿನ ಪ್ರಕಾರ, ಯಾರ ಹೃದಯದಲ್ಲಿ ಪ್ರೇಮವಿದೆಯೋ ಮತ್ತು ಯಾರು ಎಲ್ಲ ಜೀವಿಗಳೂ ಭಗವಂತನ ಅಂಶವೆಂದು ತಿಳಿದು ಎಲ್ಲದರಲ್ಲೂ ವಿಶ್ವಾತ್ಮನ ಪ್ರತಿಬಿಂಬವನ್ನೇ ಕಾಣುತ್ತಾರೋ ಅವನೇ ಭಗವಂತನಿಗೆ ಅತ್ಯಂತ ಪ್ರಿಯ

ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾ ಮದ್ವಿಜಾನತಃ
ತತ್ರಕೋಮೋಹಃ ಕಃ ಶೋಕಃ ಏಕತ್ವಮನು ಪಶ್ಯತಃ |

ಏಕತ್ವ ಭಾವನೆಯೇ ನಮಗೆ ಪ್ರೇಮಿಸುವುದನ್ನು ಕಲಿಸುತ್ತದೆ. ತಮ್ಮನ್ನು ತಾವೇ ಯಾರೂ ದ್ವೇಷಿಸುವುದಿಲ್ಲ. 'ದ್ವಿತೀಯಾ ದ್ವೈ ಭಯಂಭವತಿ ! ಇನ್ನೊಬ್ಬರು ಎರಡು ಎಂದರೆ ಭಯವಾಗುತ್ತದೆ. ನಾವು ದ್ವೇಷ ಭಾವವನ್ನೇ ನಾಶ ಮಾಡಿದರೆ, ಎಲ್ಲರೂ ನಮ್ಮ ಆತ್ಮವೇ ಎಂದು ತಿಳಿದಾಗ ಯಾರಿಗೆ ಹೆದರುವುದು? ಯಾರೊಡನೆ ದ್ವೇಷ ಮಾಡುವುದು? ಆದ್ದರಿಂದ ನನ್ನ ಪ್ರಿಯ ಆತ್ಮಗಳೇ ನೀವು ದೇವರನ್ನು ಒಲಿಸಿಕೊಳ್ಳ ಬಯಸುವಿರಾದರೆ ಪ್ರಹ್ಲಾದ, ಧ್ರುವ, ನಾನಕ್, ಕಬೀರ್, ಚೈತನ್ಯ, ತುಲಸೀದಾಸ ಮತ್ತು ಮೀರಾಬಾಯಿಯಂತೆ ಪ್ರೇಮಮಯರಾಗಿ,

ಧರ್ಮ ಸಮ್ಮೇಳನ ಮುಗಿದ ಬಳಿಕ ಸ್ವಾಮಿಗಳು ಕೆಲಕಾಲ ತಮ್ಮ ಶಿಷ್ಯನಾರಾಯಣ ನೊಂದಿಗೆ ಲಕ್ನೌ, ಆಗ್ರಾ ಮೊದಲಾದ ಊರುಗಳಿಗೆ ಹೋಗಿ ಪ್ರವಚನ ನೀಡಿದರು. ಆದರೂ ಹೋದ ಕಡೆಯಲ್ಲೆಲ್ಲ ಜನ ಸಮುದ್ರ ಉಕ್ಕಿ ಹರಿಯುತ್ತಿತ್ತು. ಆ ಸಮುದ್ರ ಅದರ ಪ್ರಭಾವ ಮುದ್ರೆಯ ಸಮುದ್ರದಲ್ಲಿ ಮುಳುಗಿ ಹೋಗುತ್ತಿತ್ತು.

ಟಿಹರೀ ಮಹಾರಾಜರ ಭೇಟಿ ಮತ್ತು ವಿದೇಶಯಾತ್ರೆ

ಏಪ್ರಿಲ್ ೧೯೦೨ ರಲ್ಲಿ ರಾಮತೀರ್ಥರು ಹರಿದ್ವಾರದ ಮೂಲಕ ಟಿಹರಿಗೆ ಮತ್ತೊಮ್ಮೆ ಹೋದರು. ಅಲ್ಲಿ ಟಿಹರಿಯ ಮಹಾರಾಜರನ್ನು ಭೇಟಿಯಾದರು. ಮಹಾರಾಜ ಕೀರ್ತಿಸಿಂಹಶಾಹ ಆಗತಾನೇ ವಿದೇಶದಿಂದ ಉನ್ನತ ಶಿಕ್ಷಣ ಮುಗಿಸಿ ಮರಳಿದ್ದರು. ಆತ ಆದರ್ಶಚಾರಿತ್ರ್ಯ ಹಾಗೂ ಉದಾರ ವಿಚಾರಗಳ ಧಣಿ. ಮೊದಲ ಭೆಟ್ಟಿಯಲ್ಲೇ ಆತ ಸ್ವಾಮಿಗಳಿಂದ ತುಂಬಾ ಪ್ರಭಾವಿತನಾದ. ಅವರ ಬಗೆಗೆ ಎಲ್ಲಿಲ್ಲದ ಶ್ರದ್ಧೆ, ಭಕ್ತಿಯನ್ನು ಬೆಳೆಸಿಕೊಂಡ ಟಿಹರಿಯಿಂದ ನಾಲ್ಕು ಮೈಲಿಮೇಲಕ್ಕೆ ಭಾಗೀರಥೀ

ತೀರದಲ್ಲಿ ಇವರಿಗೆ ಒಂದು ಸುಂದರವಾದ ಕುಟೀರ ಮಾಡಿಸಿಕೊಟ್ಟ. ಅಲ್ಲಿಸ್ವಾಮಿಗಳು ತಪೋನಿಷ್ಠರಾಗಿರುತ್ತಿದ್ದರು. ಮಹಾರಾಜರು ಆಗಾಗ್ಗೆ ಅವರಲ್ಲಿಗೆ ಬಂದು ಆಧ್ಯಾತ್ಮದ ವಿಷಯವಾಗಿ ಚರ್ಚೆ ನಡೆಸುತ್ತಿದ್ದರು. ಸಮಾಧಾನ ಮಾಡಿಕೊಳ್ಳುತ್ತಿದ್ದರು.

ಜಪಾನಿನಲ್ಲಿ ಅಖಿಲ ವಿಶ್ವಧರ್ಮ ಮಹಾಸಭೆ ನಡೆಯಲಿದೆಯೆಂದು ತಿಳಿಯಿತು. ಅದರಲ್ಲಿ ಸ್ವಾಮಿಗಳು ಭಾಗವಹಿಸಬೇಕೆಂದು ಮಹಾರಾಜರು ಅವರನ್ನು ಒತ್ತಾಯ ಮಾಡಿದರು. ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿದರು. ಅವರು ತಮ್ಮ ಶಿಷ್ಯ ನಾರಾಯಣನ ಜೊತೆ ಸೆಪ್ಟೆಂಬರ್ ೧೯೦೨ರಲ್ಲಿ ಕಲ್ಕತ್ತಾದಿಂದ ಟೋಕಿಯೋವಿಗೆ ಪ್ರಯಾಣ ಬೆಳೆಸಿದರು. ಆದರೆ ಅಲ್ಲಿಗೆ ಹೋದಾಗ ಗೊತ್ತಾಯಿತು. ಧರ್ಮ ಮಹಾಸಭೆಯ ಸುದ್ದಿ ಸುಳ್ಳೆಂದು. ಆದರೆ ಜಪಾನೀಯರು ಸ್ವಾಮಿಗಳಿಗೆ ಭವ್ಯ ಸ್ವಾಗತ ನೀಡಿದರು. ಎಲ್ಲರನ್ನೂ ತಮ್ಮವರೆಂದೇ ಕಾಣುತ್ತಿದ್ದ ಸ್ವಾಮಿಗಳಿಗೆ ಎಲ್ಲೆಲ್ಲೂ ಆತ್ಮೀಯ ಸ್ವಾಗತ!

ಅವರು ಎದೆಗುಂದಲಿಲ್ಲ. ಅಲ್ಲಿ ಪ್ರೊಫೆಸರ್ ಛತ್ರೆ ಎಂಬ ಸರ್ಕಸ್ ಮಾಸ್ಟರನ ಪರಿಚಯವಾಯಿತು. ಆತ ಸ್ವಾಮೀಜಿಯವರಿಂದ ಎಷ್ಟೊಂದು ಪ್ರಭಾವಿತನಾದನೆಂದರೆ ಆತನು ಸನ್ಯಾಸ ಸ್ವೀಕಾರ ಮಾಡಿ ಸ್ವಾಮಿಗಳ ಶಿಷ್ಯನಾಗಿಬಿಟ್ಟ.

ಸಫಲತೆಯ ರಹಸ್ಯ

ಸ್ವಾಮಿಗಳ ಮೊದಲ ಭಾಷಣ ಟೋಕಿಯೋ ವಿಶ್ವ ವಿದ್ಯಾಲಯದಲ್ಲಿ ನಡೆಯಿತು. ಪ್ರಿಯ ಸೋದರರರೇ ಎರಡೂವರೆ ಸಾವಿರ ವರ್ಷಗಳ ಹಿಂದೆ ನಿಮ್ಮ ದೇಶಕ್ಕೆ ನಮ್ಮ ದೇಶದ ಒಬ್ಬ ಪವಿತ್ರಾತ್ಮನ ಪ್ರಿಯ ಸಂದೇಶವನ್ನು ತಾವು ಪ್ರೇಮದಿಂದ ಸ್ವೀಕರಿಸಿದ್ದೀರಿ. ಇಂದು ಅದೇ ದೇಶದಿಂದ ಅದೇ ಸಂದೇಶವನ್ನು ಹೊತ್ತು ಮತ್ತೊಬ್ಬ ನಿಮ್ಮಲ್ಲಿಗೆ ಬಂದಿದ್ದಾನೆ. ನಾನು ಪ್ರೇಮದಿಂದ ಅರ್ಪಿಸುವ ಕಾಣಿಕೆಯನ್ನು ನೀವು ಪ್ರೇಮದಿಂದ ಸ್ವೀಕರಿಸುವಿರೆಂದು ಆಶಿಸುತ್ತೇನೆ.

ಸಫಲತೆ ಯಶಸ್ಸಿನ ರಹಸ್ಯವೇನು ಎಂದು ಹೇಳುವ ಮುನ್ನ ನಾನು ತಮ್ಮಲ್ಲಿ ಒಂದು ವಿಷಯ ಅರಿಕೆ ಮಾಡಿಕೊಳ್ಳಬಯಸುತ್ತೇನೆ. 'ನಾನು, ಜಪಾನು ನನ್ನ ದೇಶ ಮತ್ತು ಜಪಾನಿಗಳು ನನ್ನ ದೇಶ ಬಾಂಧವರು ಎಂದು ಭಾವಿಸಿದ್ದೇನೆ. ಯಾಕೆಂದರೆ ಜಪಾನಿನ ಇತಿಹಾಸದ ಆರಂಭವಾಗುವುದು ಭಾರತದಿಂದಲೇ. ನಿಮ್ಮ ಪೂರ್ವಜರು ಭಾರತದಿಂದಲೇ ಇಲ್ಲಿಗೆ ಬಂದವರು. ಆದ್ದರಿಂದ ತಾವು ನನ್ನನ್ನು ನಿಮ್ಮ ಸೋದರನೆಂದು ಭಾವಿಸಿ, ವಿದೇಶೀಯಾತ್ರಿಯೆಂದಲ್ಲ.'

'ಈಗ ನಾನು ವಿಷಯಕ್ಕೆ ಬರುತ್ತೇನೆ. ಸಫಲತೆಯ ರಹಸ್ಯ ಎರಡು ಶಬ್ದಗಳಲ್ಲಿ ಅಡಗಿದೆ. ಅವೆಂದರೆ ಜ್ಞಾನ ಮತ್ತು ಕರ್ಮ. ಆದರೆ ಬರಿಯ ಜ್ಞಾನ ಇಲ್ಲವೇ ಬರಿಯ ಕರ್ಮದಿಂದೇನೂ ಆಗದು. ಇವೆರಡರ ಸಾಮಾಂಜಸ್ಯದಲ್ಲೇ ಸಫಲತೆಯ ಕೀಲಿಕೈ

ಇರುವುದು. ಒಬ್ಬ ಕೂಲಿಕಾರ ಅಭ್ಯಾಸ ಬಲದಿಂದ ರಸಾಯನಿಕ ಕ್ರಿಯೆಯನ್ನು ಮಾಡಿದರೆ ಅವನು ರಸಾಯನಶಾಸ್ತ್ರದ ಪಂಡಿತನೆನ್ನಿಸಿಕೊಳ್ಳುವುದಿಲ್ಲ. ಇದೇ ರೀತಿ ಒಬ್ಬ ಇಂಜಿನಿಯರ್ ಇಂಜಿನ್ನಿನ ಬಿಡಿಭಾಗಗಳ ಜ್ಞಾನ ಪಡೆದಿದ್ದರೂ ಫೈರ್‌ಮನ್ನನ ಕೆಲಸ ಮಾಡಲಾರ. ಕರ್ಮದಲ್ಲಿ ಸಿದ್ಧಿ ಬರಬೇಕಾದರೆ ಜ್ಞಾನಬೇಕು. ಅಂತೆಯೇ ಕರ್ಮವಿಲ್ಲದೆ ಯಶಸ್ವಿಯಾಗಲಾರದು. ಆದ್ದರಿಂದ ಸಫಲತೆ ಬಯಸುವವರು ಇವೆರಡನ್ನೂ ಒಟ್ಟಿಗೆ ಬಳಸಬೇಕಾಗುತ್ತದೆ. ಸಫಲತೆ ದಕ್ಕಿದ ಮೇಲೆ ಇವೆರಡರ ಸಹಯೋಗದ ಅಗತ್ಯ ಬೀಳದಿರಬಹುದು. ಇದು ಸಫಲತೆಯ ಕೀಲಿಕೈ ಆಯಿತು. ಈಗ ಇವುಗಳ ಸಾಧನ ಸಪ್ತಕಗಳನ್ನು ನೋಡೋಣ. ಅವುಗಳು ೧. ಉದ್ಯೋಗ, ೨. ಸ್ವಾರ್ಥ, ೩. ತ್ಯಾಗ, ೪. ಉತ್ಸಾಹ ಮತ್ತು ಸಾಹಸ ೫. ಪ್ರೇಮ, ೬. ಪ್ರಸನ್ನತೆ ಮತ್ತು ನಿರ್ಭಯತೆ ೭. ಸ್ವಾವಲಂಬನೆ.

ಈ ಏಳು ಅಂಶಗಳ ಮೇಲೆ ಸ್ವಾಮಿಗಳು ವಿಸ್ತಾರವಾಗಿ ಭಾಷಣ ಮಾಡಿದರು. ಜಪಾನಿನ ಜನರು ಅದರ ಮಾತನ್ನು ಅತ್ಯಂತ ಪ್ರೇಮ ಮತ್ತು ಶ್ರದ್ಧೆಯಿಂದ ಆಲಿಸಿದರು. ಅಲ್ಲಿಯ ವೃತ್ತ ಪತ್ರಿಕೆಗಳು ಸ್ವಾಮಿಗಳನ್ನು, ಅವರ ವಿಚಾರಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದವು. ನ್ಯಾಯವಾಗಿ ನೋಡಿದರೆ ಸ್ವಾಮಿಗಳ ಉಪದೇಶ ಜಪಾನಿಗಿಂತ ಭಾರತಕ್ಕೆ ಹೆಚ್ಚು ಪ್ರಸ್ತುತ. ಸ್ವಾವಲಂಬನೆ ಸ್ವಾರ್ಥತ್ಯಾಗ, ಇವೆಲ್ಲದರ ಅಭಾವ ನಮ್ಮ ನಾಡನ್ನು ಕಿತ್ತು ತಿನ್ನುತ್ತದೆ. ಯಾವ ದೇಶದ ಮಕ್ಕಳ ಹೃದಯ, ದೇಶ ಪ್ರೇಮ ಹಾಗೂ ದೇಶಾಭಿಮಾನದಿಂದ ಶೂನ್ಯವೋ ಅದು ಜೀವಿಸಿದ್ದರೂ ಸತ್ತಂತೆಯೇ ಯಾವ ದೇಶದ ಜನ ತಮ್ಮ ಅಧಿಕಾರಗಳನ್ನು ದೇಶ ಗೌರವವನ್ನು ಕಾಪಾಡಲಾರರೋ ಅದಕ್ಕಾಗಿ ಏನನ್ನು ತ್ಯಾಗ ಮಾಡಲಾರರೋ ಅವರು ದೇಶದ ಏಳಿಗೆಗಾಗಿ ನಿಲ್ಲಲಾರರು. ಜನ ಪರಾವಲಂಬನೆಯನ್ನು ಬಿಡಬೇಕು. ಸ್ವಾವಲಂಬಿಗಳಾಗಬೇಕು.

ಅಮೆರಿಕಾ ಯಾತ್ರೆ

ಸ್ವಾಮಿಗಳು ಜಪಾನಿನಿಂದ ಅಮೆರಿಕಾಕ್ಕೆ ಹೋಗಬಯಸಿದರು. ಜಪಾನಿಯರು ಅವರ ಪ್ರಯಾಣಕ್ಕೆ ಬೇಕಾದ ಹಡಗಿನ ವ್ಯವಸ್ಥೆ ಮಾಡಿದರು. ಆಗ ಈಗಿನಷ್ಟು ವಿಮಾನಯಾನದ ಸೌಲಭ್ಯವಿರಲಿಲ್ಲ. ಅವರು ಭಾವಪೂರ್ಣರಾಗಿ ಗದ್ಗದ ಹೃದಯದಿಂದ ಸ್ವಾಮಿಗಳನ್ನು ಬೀಳ್ಕೊಟ್ಟರು. ದಾರಿಯಲ್ಲಿ ಸ್ವಾಮಿಗಳ ಸಂಪರ್ಕ ಅಮೆರಿಕಾದ ಒಬ್ಬ ಖ್ಯಾತ ಪತ್ರಿಕೆಯ ಬಾತ್ಮೀದಾರನೊಂದಿಗೆ ಆಯಿತು. ಆತ ಸ್ವಾಮಿಗಳಿಂದ ಎಷ್ಟೊಂದು ಪ್ರಭಾವಿತನಾಗಿದ್ದನೆಂದರೆ ಕೂಡಲೇ ಆತನು ತನ್ನ ಪತ್ರಿಕೆಗೆ ತಂತಿಯ ಮೂಲಕ ಸ್ವಾಮಿಗಳ ಆಗಮನ ವಾರ್ತೆಯನ್ನು ಮುಟ್ಟಿಸಿದ. ಸ್ವಾಮಿಗಳ ಭವ್ಯ ಸ್ವಾಗತಕ್ಕಾಗಿ ಏರ್ಪಾಟು ನಡೆಯಿತು.

ಅಮೆರಿಕಾದ ಜನತೆ ಸ್ವಾಮಿಗಳ ವಾಗ್ಝರಿಯಲ್ಲಿ ಮುಳುಗಿ ಹೋಯಿತು. ಅಲ್ಲಿಯ

ಅನೇಕ ಪತ್ರಿಕೆಗಳು ಸ್ವಾಮೀಜಿಯವರ ಚಿತ್ರದೊಂದಿಗೆ ಹೀಗೆ ಬರೆದವು. ಜೀವಿತ ಏಸುಕ್ರಿಸ್ತ ಅಮೆರಿಕಾಕ್ಕೆ ಬಂದಿದ್ದಾನೆ. ಸ್ವಾಮೀಜಿಯವರ ಭಾಷಣಗಳನ್ನು ಓದಿ ಆಗಿನ ಅಮೆರಿಕಾದ ರಾಷ್ಟ್ರಪತಿ ತುಂಬ ಪ್ರಭಾವಿತರಾದರು. ಆತ ಸ್ವತಃ ಬಂದು ಸ್ವಾಮಿಗಳ ದರ್ಶನ ಮಾಡಿದ. ಆಗ ನ್ಯೂಯಾರ್ಕಿನ ಒಂದು ಪತ್ರಿಕೆ ಹೀಗೆ ಬರೆಯಿತು. "ಅಮೆರಿಕಾದಲ್ಲಿ ಒಬ್ಬ ವಿಚಿತ್ರ ಭಾರತೀಯ ಸಾಧು ಬಂದಿದ್ದಾನೆ. ಆತ ತನ್ನ ಕನ್ನಡಕವನ್ನು ಬಿಟ್ಟು ಬೇರಾವ ಲೋಹದ ಸಾಮಾನನ್ನು ಮುಟ್ಟ. ತನ್ನ ಬಳಿ ಯಾವ ಖಾದ್ಯ ಪದಾರ್ಥಗಳನ್ನು ಇಟ್ಟುಕೊಳ್ಳುವುದಿಲ್ಲ. ಸಂಚಾರಕ್ಕೆ ಹೊರಟರೆ ಒಂದು ಸಾಧಾರಣ ಬಟ್ಟೆಯಲ್ಲಿ ದಿನಗಟ್ಟಳೆ ಚಳಿ ಪ್ರದೇಶದಲ್ಲಿ ನಿರಾತಂಕವಾಗಿ ಅಡ್ಡಾಡುತ್ತಾನೆ. ಆತ ದಿನದಲ್ಲಿ ಹಲವಾರು ಕಡೆ ಪ್ರವಚನ ಮಾಡುತ್ತಾನೆ. ಅದರಲ್ಲೂ ಒಂದೊಂದು ಪ್ರವಚನ ಮೂರು ಮೂರು ಗಂಟೆಗಳ ಕಾಲ ನಡೆಯುತ್ತದೆ. ಅಷ್ಟೊಂದು ಧಾರಾ ಪ್ರವಾಹ ಆತನ ಮಾತಿನದು. ಆತನ ದಿವ್ಯ ಆಕಾರ, ಬಾಲ ಸುಲಭ ಮುಗುಳ್ನಗೆ ಮತ್ತು ಸರ್ವಾತ್ಮಭಾವ ಏಸುಕ್ರಿಸ್ತನಂತೆ ಎಲ್ಲರ ಮನಸ್ಸನ್ನು ಮೋಹಗೊಳಿಸುತ್ತದೆ.

ಸ್ವಾಮಿ ವಿವೇಕಾನಂದರು ಅಮೆರಿಕನ್ನರನ್ನು 'Brothers and Sisters of America' ಎಂದು ಸಂಬೋಧಿಸಿ ಮುಗ್ಧಗೊಳಿಸಿದರೆ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ರಾಮತೀರ್ಥರು ಹೇಳಿದರು. 'Myself in the form of brothers and sisters of America' ಎಂದರು. ಇದಕ್ಕಿಂತ ಏಕಾತ್ಮಭಾವ ಇನ್ನೇನುಬೇಕು? ಭಾರತೀಯರು ನಿಮ್ಮ ಆತ್ಮಬಂಧುಗಳು. ನೀವು ನಿಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಪ್ರಯತ್ನವನ್ನು ಅವರಿಗಾಗಿಯೂ ಮಾಡಬೇಕು. ಭಾರತೀಯರು ಇಂದು ತಮ್ಮ ದೌರ್ಬಲ್ಯದಿಂದ ದಾಸ್ಯದ ನೊಗದಡಿಯಲ್ಲಿದ್ದಾರೆ. ದಾಸ್ಯದ ದುಃಖ ಬಹುದೊಡ್ಡ ದುಃಖ. ಈಗ ಅವರ ಆತ್ಮ ಚೇತನವನ್ನು ಜಾಗೃತಗೊಳಿಸಿ ಅವರಿಗೆ ಮುಕ್ತಿ ದೊರಕುವಂತೆ ಮಾಡುವುದು ನಿಮ್ಮ ಕರ್ತವ್ಯ. ಆಮೇಲೆ ನೋಡಿ ಅವರು ನಿಮ್ಮ ಭುಜಕ್ಕೆ ಭುಜಕೊಟ್ಟು ವಿಶ್ವದ ಅಜ್ಞಾನಾಂಧಕಾರವನ್ನು ತೊಡೆದುಹಾಕಲು ಮುಂದಾಗುತ್ತಾರೆ.

ಧಾರ್ಮಿಕ ಏಕತೆ

ಈ ವಿಷಯವನ್ನು ಕುರಿತು ಅವರು ಒಮ್ಮೆ ಹೀಗೆ ಭಾಷಣ ಮಾಡಿದರು: ಮೂವರು ಬಾಲಕರು. ಒಬ್ಬ ಇಂಗ್ಲಿಷ್, ಒಬ್ಬ ಹಿಂದೂ, ಮತ್ತೊಬ್ಬ ಮುಸ್ಲಿಂ ಈ ಮೂವರಿಗೂ ಯಾವನೋ ಒಬ್ಬಾತ ಕಾಸುಕೊಟ್ಟು ಬೇಕಾದುದನ್ನು ತೆಗೆದುಕೊಳ್ಳಿ ಎಂದ. ಮೂವರು ತಮ್ಮ ಇಷ್ಟಾನುಸಾರ ವಾಟರಮೆಲನ್, ಮಿಣಕೆಹಣ್ಣು ಹಾಗೂ ಕರಬೂಜವನ್ನು ಕೊಳ್ಳ ಬಯಸಿದರು. ಮೂವರು ಜಗಳವಾಡತೊಡಗಿದರು. ಅಷ್ಟರಲ್ಲಿ ಈ ಮೂರು ಬಾಲಕರ ಭಾಷೆಯನ್ನು ಅರಿತಿದ್ದ ಒಬ್ಬಾತ ಅಲ್ಲಿಗೆ ಬಂದ. ಯಾಕೆ ಜಗಳವಾಡುತ್ತಿದ್ದೀರಿ? ಎಂದು

ಕೇಳಿದ. ನನಗೆ ವಾಟರ್ ಮೆಲನ್ ಬೇಕು' ಎಂದು ಇಂಗ್ಲಿಷ್ ಹುಡುಗ ಹೇಳಿದ. ಹಿಂದೂ ಹುಡುಗ ನನಗೆ ಮಿಣಕೆಹಣ್ಣು ಬೇಕು ಎಂದ, ಮುಸಲ್ಮಾನ ಹುಡುಗ ನನಗೆ ಕರಬೂಜ ಬೇಕು ಎಂದ. ನೀವು ನನಗೆ ದುಡ್ಡು ಕೊಡಿ ನಾನು ನಿಮಗೆ ಬೇಕಾದ ಪದಾರ್ಥವನ್ನು ತಂದುಕೊಡುತ್ತೇನೆ ಎಂದು ತೆಗೆದುಕೊಂಡು ಹೋಗಿ ಕರಬೂಜದ ಹಣ್ಣನ್ನು ಕೊಂಡು ತಂದು ಕೊಯ್ದು ಮೂವರಿಗೂ ಕೊಟ್ಟ. ತಮಗೆ ಬೇಕಾದ ಪದಾರ್ಥವನ್ನು ಪಡೆದು ಮೂವರೂ ಸಂತೋಷಪಟ್ಟರು. ನಿಜಕ್ಕೂ ಆ ಬಾಲಕರಿಗೆ ಬೇಕಾದುದು ಒಂದೇ ಹಣ್ಣು. ಆದರೆ ಅದರಲ್ಲಿ ಒಬ್ಬೊಬ್ಬರಿಗೂ ಇನ್ನೊಬ್ಬರ ಭಾಷೆ ಗೊತ್ತಿರಲಿಲ್ಲ. ಹೆಸರಿನ ಅಂತರವೇ ಹೊರತು ವಸ್ತುವಿನಲ್ಲಿ ಅಂತರವಿರಲಿಲ್ಲ.

ಈ ಬಾಲಕರ ಅವಿವೇಕವನ್ನೇ ಇಂದು ನಾವು ಧಾರ್ಮಿಕ ಸಂಪ್ರದಾಯಗಳಲ್ಲಿ ಕಾಣುತ್ತೇವೆ. ಎಲ್ಲರ ಗುರಿ ಒಂದೇ ಎಲ್ಲರೂ ಒಂದೇ ಗುರಿಯತ್ತ ಸಾಗುವ ಪಥಿಕರು, ಅಂತರವಿರುವುದು ಅವರ ದಾರಿಯಲ್ಲಿ, ಹೆಸರಿನಲ್ಲಿ. ಈ ಕಾರಣದಿಂದ ಕ್ರೈಸ್ತರು ಮುಸಲ್ಮಾನರೊಂದಿಗೆ, ಮುಸ್ಲಿಮರು ಹಿಂದೂಗಳೊಂದಿಗೆ, ಹಿಂದೂಗಳು ಬೌದ್ಧರೊಡನೆ ಬಡಿದಾಡುತ್ತಾರೆ.

ಒಂದೇ ಕುಟುಂಬದ ಇಬ್ಬರು ಅಣ್ಣ-ತಮ್ಮಂದಿರಲ್ಲಿ, ತಂದೆ-ಮಕ್ಕಳಲ್ಲಿ ಮತ ಭೇದವಿರುತ್ತದೆ. ಅವರ ದಾರಿಯೂ ಒಂದಾಗಿರುವುದಿಲ್ಲ. ಹೀಗಿರುವಾಗ ಎರಡು ದೇಶಗಳ ನಿವಾಸಿಗಳು ಒಂದೇ ಹಾದಿಯ ಪಥಿಕರಾಗುವುದು ಹೇಗೆ ಸಾಧ್ಯ? ಈ ಎಲ್ಲ ಜಗಳಗಳ ಕಾರಣ ಭೇದ ಭಾವವೇ ಇವರ ಬುದ್ಧಿ ಹೆಸರುಗಳ ಬೆನ್ನು ಹತ್ತಿದೆ. ನಾಗರಿಕತೆ ಸಂಸ್ಕೃತಿಯ ತಳ ಶೋಧಿಸುವುದು ಯಾರಿಗೂ ಬೇಕಿಲ್ಲ. ನಮ್ಮ ಇರಿಸರಿಕೆ, ವೇಷಭೂಷಣ. ಊಟ ತಿಂಡಿಗಳಲ್ಲಿ ಏಕರೂಪತೆಯಿಲ್ಲದಿರುವಾಗ ಪೂಜಾಸ್ಥಾನಗಳಲ್ಲಿ, ಪೂಜಾ ವಿಧಿಗಳಲ್ಲಿ ಏಕರೂಪತೆಯಿರುವುದು ಹೇಗೆ ಸಾಧ್ಯ?

ನಾವು ಪರರ ಆಹಾರ, ಮಾತು, ವೇಷದ ಬಗೆಗೆ ಟೀಕೆ ಮಾಡುವುದಿಲ್ಲ. ಹೀಗಿರುವಾಗ ಪೂಜಾಸ್ಥಾನ, ಪೂಜಾವಿಧಿಗಳ ಬಗೆಗೆ ಟೀಕೆ ಟಿಪ್ಪಣಿ ಮಾಡುತ್ತಾ ಜಗಳ ಮಾಡುವುದು ವ್ಯರ್ಥವೇ ಸರಿ. ನಮ್ಮ ಮಾರ್ಗವನ್ನು ಒಪ್ಪದವರನ್ನು ನಮ್ಮ ಶತ್ರುವೆಂದು ಭಾವಿಸಿ ಅವರನ್ನು ತಾತ್ಸಾರದಿಂದ ನೋಡುವುದು ಅಹಂಕಾರವಲ್ಲದೆ ಬೇರೇನು? ಇದರಿಂದ ಧರ್ಮವಾದ ರಾಷ್ಟ್ರವಾದಕ್ಕೆ ಪ್ರತಿದ್ವಂದ್ವಿಯಾಗಿದೆ.

ಪ್ರಿಯ ಧರ್ಮ ಜಿಜ್ಞಾಸುಗಳೇ, ನೀವು ಯಾವುದೇ ಧರ್ಮವನ್ನು ಸ್ವೀಕರಿಸುವುದಾದರೆ ಮೊದಲು ಅದನ್ನು ಪರೀಕ್ಷಿಸಿ. ಅಕ್ಕಸಾಲಿಗ ಚಿನ್ನವನ್ನು ನಾಲ್ಕು ಬಾರಿಯಲ್ಲಿ ಪರೀಕ್ಷಿಸುತ್ತಾನೆ. ಒರೆಗಲ್ಲಿಗೆ ಹಚ್ಚುವುದು, ಉಳಿಯಿಂದ ಕತ್ತರಿಸುವುದು, ಬೆಂಕಿಗೆ ಹಾಕಿ ಕಾಯಿಸುವುದು ಮತ್ತು ಬಡಿಯುವುದು. ಅದೇ ರೀತಿ ನೀವು ಕೂಡ ಧರ್ಮವನ್ನು ವಿವೇಕದ ಒರೆಗಲ್ಲಿಗೆ ಹಚ್ಚಿ, ಅದನ್ನು ನಿಮ್ಮ ಅಂತಃಕರಣ ಒಪ್ಪಿಕೊಳ್ಳುತ್ತದೋ ಇಲ್ಲವೋ ಎಂದು ವಿಚಾರಮಾಡಿ. ಒಪ್ಪಿಕೊಳ್ಳುವುದಾದರೆ ಅದನ್ನು ತರ್ಕದ ಉಳಿಯಿಂದ

ಕತ್ತರಿಸಿ. ಯಾಕೆಂದರೆ ಮನುಷ್ಯನ ಅಂತಃಕರಣ ವಿಶ್ವಾಸದ ಆಧಾರದ ಮೇಲೆ ಅನೇಕ ಕಲ್ಪಿತ ಸಂಗತಿಗಳನ್ನು ಗ್ರಹಿಸುತ್ತದೆ. ತರ್ಕದ ಉಳಿಯಿಂದ ಕತ್ತರಿಸಿದಾಗ ಅದರಲ್ಲಿ ಧರ್ಮ ಎಷ್ಟಿದೆ? ಬೆರಕೆ ಎಷ್ಟಿದೆ ? ಎಂಬುದು ವೇದ್ಯವಾಗುತ್ತದೆ. ಈಗ ಆ ಬೆರಕೆಯನ್ನು ಸ್ವಚ್ಛ ಧರ್ಮದಿಂದ ಬೇರ್ಪಡಿಸಬೇಕಾದರೆ ವಿರುದ್ಧ ಪಕ್ಷದ ಅಗ್ನಿ ಪರೀಕ್ಷೆಗೆ ಅದು ಒಳಗಾಗಬೇಕು. ಇದರಿಂದ ಅದರ ಕಾಳಿಕೆ ಸುಟ್ಟು ಭಸ್ಮವಾಗುತ್ತದೆ. ಈಗ ಅದನ್ನು ಬುದ್ಧಿಯ ಸುತ್ತಿಗೆಯಿಂದ ಬಡಿದು ನಿಮಗೆ ಅನುಕೂಲವಾಗುವಂತೆ ಮಾಡಿಕೊಳ್ಳಬೇಕು. ಈ ರೀತಿ ಧರ್ಮಪರೀಕ್ಷೆಯನ್ನು ನೀವೇ ಸ್ವತಃ ಮಾಡಿಕೊಳ್ಳಬೇಕು.

ನಾವು ನಮ್ಮ ಧಾರ್ಮಿಕ ಸ್ವಾತಂತ್ರ್ಯವನ್ನು ಯಾರಿಗೂ ಮಾರಿಕೊಳ್ಳಬಾರದು. ಕೃಷ್ಣನಿರಬಹುದು, ಬುದ್ಧನಿರಬಹುದು, ಕ್ರಿಸ್ತನಿರಬಹುದು, ಮಹಮದ್ ಇರಬಹುದು. ಈ ಮಹಾ ಪುರುಷರು ತಮ್ಮ ತಮ್ಮ ಕಾಲದಲ್ಲಿ, ದೇಶದಲ್ಲಿ ತೋರಿಸಿದ ಮಾರ್ಗದ ಮೂಲಕ ಅವರು ತಮ್ಮ ಯುಗವನ್ನು ಸಮಸ್ಯೆಗಳನ್ನು ತಮ್ಮ ತೀಕ್ಷ್ಣ ಬುದ್ಧಿಯಿಂದ ಪರೀಕ್ಷಿಸಿ ಪರಿಹಾರ ಕಂಡುಕೊಂಡರು. ದಾರಿತಪ್ಪಿದ ಜನರಿಗೆ ದಾರಿ ತೋರಿಸಿ ಅವರು ಪ್ರಗತಿ ಪಥದಲ್ಲಿ ನಡೆಯುವಂತೆ ಮಾಡಿದರು. ಅದಕ್ಕೆ ಇಂದಿನ ಹಾಗೂ ಮುಂಬರುವ ಕಾಲದ ಪಾರ್ಟಿಗಳು ಕೃತಜ್ಞವಾಗಿರಬೇಕು. ನಾವು ಇವರ ಅಥವಾ ಇವರ ಶಿಷ್ಯರ ಉಪದೇಶವನ್ನು ದೇಶಕಾಲಾನುಸಾರ ವಿಚಾರ ಮಾಡಿ ಅನುಸರಿಸಬೇಕು.

'ರಾಮತೀರ್ಥ ನೀನು ನಿನ್ನ ಪೂರ್ವಜರ ಬಗೆಗೆ ಶ್ರದ್ಧೆಯಿಡಬೇಡ ಅಥವಾ ಅವರ ಆದರ್ಶಗಳನ್ನು ಅನುಸರಿಸಬೇಡ ಎಂದು ಹೇಳುವುದಿಲ್ಲ. ನಿಮಗೆ ಕಾಲಜ್ಞಾನವಿದ್ದರೆ ಕುಂದಣಕ್ಕೆ ಕಂಪಿಟ್ಟಂತೆ. ಸತ್ಯದ ಮೇಲೆ ಯಾರ ಮೊಹರೂ ಇಲ್ಲ. ಅದು ಕೃಷ್ಣನ ಆಸ್ತಿಯಲ್ಲ, ಬುದ್ಧನ ಸ್ವತ್ತಲ್ಲ ಅಥವಾ ಕ್ರಿಸ್ತನ ಜಾಗೀರಿಯೂ ಅಲ್ಲ, ಮಹಮ್ಮದನ ಅಂಕುಶವೂ ಅದರ ಮೇಲಿಲ್ಲ. ಆದ್ದರಿಂದ ಅದನ್ನು ಯಾವೊಬ್ಬನ ಹೆಸರಿನಲ್ಲಿ ಪ್ರಚಾರ ಮಾಡುವುದು ಅದರ ಮಹತ್ವವನ್ನು ಹೀಗಳೆದಂತೆ. ಸತ್ಯದಿಂದ ಮನುಷ್ಯನಿಗೆ ಗೌರವವೇ ಹೊರತು ಮನುಷ್ಯನಿಂದ ಸತ್ಯಕ್ಕಲ್ಲ. ಸೂರ್ಯನ ಬೆಳಕು ರಾಜನ ಅರಮನೆಯನ್ನು ಬೆಳಗುತ್ತದೆ, ಬಡವನ ಗುಡಿಸಲನ್ನು ಬೆಳಗುತ್ತದೆ.

ರಾಮ ನಿಮಗೆ ವೇದಾಂತದ ಉಪದೇಶ ನೀಡುತ್ತಾನೆ. ಆದರೆ ರಾಮನ ವೇದಾಂತ ಸೈದ್ಧಾಂತಿಕವಲ್ಲ. ವ್ಯಾವಹಾರಿಕ. ಅದನ್ನು ತಾವು ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ, ವೇದಧರ್ಮವೆನ್ನಿ, ಬುದ್ಧಿಧರ್ಮವೆನ್ನಿ, ಬೈಬಲ್ಲಿನಧರ್ಮವೆನ್ನಿ, ಕುರಾನಿನ ಧರ್ಮವೆನ್ನಿ, ರಾಮನಿಗೆ ನಾಮದ ಗೊಂದಲವಿಲ್ಲ. ರಾಮ ನಿಮಗೆ ಪ್ರಾಚೀನ ಗ್ರಂಥಗಳ ಇಲ್ಲವೆ ನವೀನ ಗ್ರಂಥಗಳ ಅಥವಾ ವೈಜ್ಞಾನಿಕ ಗ್ರಂಥಗಳ ಧರ್ಮ ಹೇಳುವುದಿಲ್ಲ. ಅವನು ನಿಮಗೆ ಹೇಳುವ ಧರ್ಮ ವಾಯುವಿನಲ್ಲಿ ಕಂಪನವುಂಟು ಮಾಡುತ್ತದೆ. ನೀರಿನಲ್ಲಿ ಕಲರವ ನಾದವುಂಟು ಮಾಡುತ್ತದೆ. ಅದರ ಪ್ರಾಕೃತಿಕ ಸೌಂದರ್ಯ, ಸಾಗರದ ತರಂಗಗಳಲ್ಲಿ, ಉನ್ನತ ಪರ್ವತ ಶೃಂಗಗಳಲ್ಲಿ ವಿಜೃಂಭಿಸುತ್ತದೆ. ವೃಕ್ಷಗಳ ಬಣ್ಣ ಬಣ್ಣದ

ಎಲೆಗಳು, ಹೂ, ಹಣ್ಣುಗಳು. ತಮ್ಮ ಅರಳಿದ ವದನದಿಂದ ಯಾರ ಗುಣಗಾನ ಮಾಡುತ್ತಿವೆಯೋ ಮತ್ತು ಪ್ರಕೃತಿದೇವಿ ತನ್ನನ್ನು ವಿವಿಧ ಅಲಂಕಾರಗಳಿಂದ ಅಲಂಕರಿಸಿಕೊಂಡು ಯಾರನ್ನು ಸ್ವಾಗತಿಸುವಳೋ ಅವನ ಧರ್ಮ ಇದು. ಆ ಧರ್ಮ ನಮ್ಮ ಮನವನ್ನು ಪವಿತ್ರಗೊಳಿಸುತ್ತದೆ. ಆತ್ಮವನ್ನು ಸದೃಢಗೊಳಿಸುತ್ತದೆ. ಇದರ ಉಪದೇಶ ನೀಡಲೆಂದೇ ರಾಮ ಹಿಂದೂಸ್ಥಾನದಿಂದ ಅಮೆರಿಕಾಕ್ಕೆ ಬಂದಿದ್ದಾನೆ.

ಅಮೆರಿಕಾದಲ್ಲಿ 'ನಾಸ್ತಿಕ ಸಮಾಜ' ಎಂಬ ಸಂಸ್ಥೆಯಿತ್ತು. ಅದರ ನಾಯಕಿ ದೊಡ್ಡ ವಿದುಷಿ. ಆಕೆಯಂತೂ ರಾಮತೀರ್ಥರ ಪ್ರಭಾವ ಮುದ್ರೆಯ ಸಮುದ್ರದಲ್ಲಿ ಮುಳುಗಿ ಹೋದಳು. ಆಕೆ ತನ್ನ ಸರ್ವಸ್ವವನ್ನು ತೊರೆದು ಸನ್ಯಾಸ ಸ್ವೀಕಾರ ಮಾಡಿ ಅವರ ಶಿಷ್ಯಳಾದಳು. ತನ್ನ ಉಳಿದ ಜೀವನವನ್ನು ವೇದಾಂತ ಪ್ರಚಾರಕ್ಕಾಗಿ ಮುಡಿಪಾಗಿಟ್ಟಳು.

ರಾಮತೀರ್ಥರು ಮೂರು ವರ್ಷಕಾಲ ಅಮೆರಿಕಾದಲ್ಲಿದ್ದು ವ್ಯಾವಹಾರಿಕ ವೇದಾಂತದ ಪ್ರಚಾರ ಮಾಡಿದರು. ಬಹಳಷ್ಟು ಕಡೆ ಭಾಷಣ ಮಾಡಿ ವೇದಾಂತದ ಬಿರುಗಾಳಿ ಎಬ್ಬಿಸಿದರು. ಅನಂತರ ಜಿಬ್ರಾಲ್ಟರ್ ಮೂಲಕ ಸ್ವಾಮಿಗಳು ಈಜಿಪ್ಟಿಗೆ ಬಂದರು. ಅಲ್ಲಿಯ ಮಸೀದಿಯೊಂದರಲ್ಲಿ ರಾಮತೀರ್ಥರು ಪಾರಸಿಯಲ್ಲಿ ಅತ್ಯಂತ ವಿದ್ವತ್ಪೂರ್ಣವಾದ ಭಾಷಣ ಮಾಡಿದರು. ಅದನ್ನು ಕೇಳಿ ಅಲ್ಲಿಯ ದೊಡ್ಡ ದೊಡ್ಡ ಪಂಡಿತರು ದಾರ್ಶನಿಕರು ಮೂಗಿನ ಮೇಲೆ ಬೆರಳಿಟ್ಟುಕೊಂಡರು.

೧೯೦೪ರ ಕೊನೆಯಲ್ಲಿ ಸ್ವಾಮೀಜಿ ಭಾರತಕ್ಕೆ ಮರಳಿದರು. ಅಷ್ಟು ಹೊತ್ತಿಗೆ ಅವರ ಕೀರ್ತಿ ಮುಗಿಲು ಮುಟ್ಟಿತ್ತು. ಸ್ವದೇಶಕ್ಕೆ ಮರಳಿದ ಮೇಲೆ ಅವರ ಮೊದಲ ಭಾಷಣ ಮುಂಬಯಿಯಲ್ಲಿ ಆಯಿತು. ಅದರಲ್ಲಿ ಅವರು ಭಾರತೀಯರು ಎಲ್ಲ ಭೇದ ಭಾವಗಳನ್ನು ಮರೆತು ಸರ್ವಾತ್ಮವಾದಿಗಳಾಗಿ ಮುಕ್ತಿ ಸಾಧನೆ ಮಾಡಬೇಕೆಂದು ಕರೆಕೊಟ್ಟರು.

ಅವರು ಮುಂಬಯಿಯಿಂದ ಮಥುರಾಕ್ಕೆ ಬಂದಾಗ ಅವರ ಕೆಲವು ಭಕ್ತರು ತಮ್ಮ ಹೆಸರಿನಲ್ಲಿ ಮತ ಪ್ರಚಾರಕ್ಕಾಗಿ ಒಂದು ಸಂಸ್ಥೆಯನ್ನು ಹುಟ್ಟು ಹಾಕಬೇಕೆಂದು ಅವರಲ್ಲಿ ವಿನಂತಿಸಿಕೊಂಡರು. ಆಗ ಸ್ವಾಮಿಗಳು ಹೇಳಿದರು : ಭರತವರ್ಷದಲ್ಲಿ ಏನೆಲ್ಲ ಸಂಸ್ಥೆಗಳಿವೆಯೋ ಅವೆಲ್ಲ ರಾಮನವೇ, ರಾಮ ಅಲ್ಲಿ ಕೆಲಸ ಮಾಡುತ್ತಾನೆ. ಎಲ್ಲ ರಾಮನವೇ. ಎಲ್ಲ ನನ್ನ ಆತ್ಮಸ್ವರೂಪರೇ.

ಅಮೆರಿಕಾದಿಂದ ಹಿಂದಿರುಗಿದ ಮೇಲೆ ರಾಮತೀರ್ಥರ ಮನಸ್ಸು ದೇಶ ಸೇವೆಯತ್ತ ತಿರುಗಿತು. ದೇಶಭಕ್ತಿಯಲ್ಲಿ ಅವರು ಕೊಚ್ಚಿ ಹೋದರು. ಆದರೆ ಇದರ ಅರ್ಥ ಅವರು ವೇದಾಂತವನ್ನು ಮರೆತರೆಂದಲ್ಲ. ಅವರ ದೃಷ್ಟಿಯಲ್ಲಿ ದೇಶ ಬೇರೆ ಅಲ್ಲ, ದೇವರು ಬೇರೆ ಅಲ್ಲ. ತಮ್ಮ ದೇಶ ದಾಸ್ಯ ಶೃಂಖಲೆಯಲ್ಲಿ ಬಂಧಿತವಾಗಿರುವುದನ್ನು ನೆನೆದಾಗ ಅವರ ಕಣ್ಣು ತುಳುಕುತ್ತಿತ್ತು. ಆದ್ದರಿಂದ ಅವರು ಕಡೆಯುಸಿರಿರುವವರೆಗೂ ದೇಶ ಸೇವೆಯಲ್ಲಿ ಮಗ್ನರಾಗಿರಬಯಸಿದರು.

ಈ ವ್ರತವನ್ನು ಪಾಲಿಸಲು ಅವರು ಒಂದು ವರ್ಷ ತನಕ ಭಾರತದ ಮೂಲೆ ಮೂಲೆಯಲ್ಲಿ ಸಂಚರಿಸಿದರು. ದರಿದ್ರನಾರಾಯಣನ ಸೇವೆ ಮಾಡುವಂತೆ ಅವರು ತಮ್ಮ ಶಿಷ್ಯರಿಗೆ ಕರೆಕೊಟ್ಟರು. ಈಗ ಜನಕ್ಕೆ ಸ್ವಾಮಿಗಳ ವಾಸ್ತವಿಕ ಪರಿಚಯವಾಯಿತು. ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿದ ನಿಷ್ಕಾಮ ಕರ್ಮಯೋಗಿಯ ಮೈವೆತ್ತ ರೂಪವೇ ರಾಮತೀರ್ಥರೆಂದು ಅವರು ಮನಗಂಡರು. ಬ್ರಹ್ಮ ಸಮಾಜ ಮತ್ತು ಆರ್ಯ ಸಮಾಜ ವರ್ಷಗಳ ನಿರಂತರ ಪರಿಶ್ರಮದಿಂದ ಮಾಡಲಾಗದ ಜನಜಾಗೃತಿಯನ್ನು ರಾಮತೀರ್ಥರು ತಮ್ಮ ಜೀವಿತದ ಅಲ್ಪಕಾಲದಲ್ಲಿ ಮಾಡಿತೋರಿಸಿದರು.

ಸ್ವಾಮಿಗಳು ಟಿಹರಿ ಮಹಾರಾಜರು ಕಟ್ಟಿಸಿಕೊಟ್ಟಿದ್ದ ಕುಟೀರದಲ್ಲಿ ವಾಸ್ತವ್ಯ ಹೂಡಿದ್ದರು. ಎಂದಿನಂತೆ ಅವರ ದರ್ಶನಕ್ಕಾಗಿ ನೂರಾರು ಜನ ಬರುತ್ತಿದ್ದರು. ಒಂದು ದಿನ ಅವರ ಪತ್ನಿ ಮಕ್ಕಳೊಂದಿಗೆ ಬಂದು ಅವರ ದರ್ಶನ ಮಾಡಬಯಸಿದಳು. ಅದಕ್ಕೆ ಅನುಮತಿ ಬೇಡಿದಳು.

ಸ್ವಾಮಿಗಳ ಅಡುಗೆಯವನು ಬಂದು ಈ ವಿಷಯ ಅರಿಕೆ ಮಾಡಿಕೊಂಡ. ಆಗ ಸ್ವಾಮಿಗಳು ಹೇಳಿದರು : ಸನ್ಯಾಸಿಯಾದವನು ತನ್ನ ಪೂರ್ವಾಶ್ರಮದ ಬಂಧುಗಳನ್ನು ಅದರಲ್ಲೂ ಪತ್ನಿಯನ್ನು ನೋಡಬಾರದು. ಆದ್ದರಿಂದ ಸಾಧ್ಯವಿಲ್ಲ ಎಂದು ಹೇಳಿ ಕಳಿಸು. ಅವನು ಅಂತೆಯೇ ಹೇಳಿದ. ಅವರು ತುಂಬ ನೊಂದುಕೊಂಡು ಹೊರಟು ಹೋದರು. ಅದನ್ನು ಕಂಡು ಅಡುಗೆಯವನು ಹೇಳಿದ ; 'ಸ್ವಾಮೀಜಿ, ನೀವು ತಪ್ಪು ಮಾಡಿದಿರಿ, ಆಕೆ ನಿಮ್ಮನ್ನು ಗಂಡನೆಂದು ನೋಡಬರಲಿಲ್ಲ. ದೊಡ್ಡ ಸ್ವಾಮಿ, ಜ್ಞಾನಿಯೆಂದು ನೋಡಿ ಗೌರವಾರ್ಪಣೆ ಮಾಡಲು ಬಂದಿದ್ದಳು. ಆದರೆ ನೀವು ಸಮದರ್ಶಿಗಳು ಎಂದುಕೊಂಡಿದ್ದು ಆಕೆಗೆ ನಿರಾಶೆಯಾಗಿರಬೇಕು.

ತಮ್ಮ ಅಡುಗೆಯವನು ಇಂಥ ಮಾತನಾಡಬಲ್ಲನೆಂದು ಅವರು ತಿಳಿದಿರಲಿಲ್ಲ. ಅದನ್ನು ಕೇಳಿ ಅವರ ಮನಸ್ಸಿಗೆ ತುಂಬ ಗ್ಲಾನಿಯಾಯಿತು. ಅವರು ಹೇಳಿದರು! 'ಹೌದು ಸನ್ಯಾಸಿಯೆಂಬ ಹಮ್ಮಿನ ಭೂತ ನನ್ನ ತಲೆಯ ಮೇಲೆ ಏರಿ ಕುಳಿತಿದೆ. ಅದಕ್ಕೆ ಕಾರಣವಾದ ಈ ಕಾವಿಯಿದ್ದರೆ ತಾನೇ ಹಮ್ಮುಬಿಮ್ಮು?! ಅದೇ ಬೇಡ! ಮೋಹ ಯಾವ ರೀತಿಯಲ್ಲಿ ಕಾಡುತ್ತದೋ ಕಾಣೆನಾದೆನಲ್ಲ!

ಕೂಡಲೇ ಅವರು ತಮ್ಮ ಕಾವಿಯನ್ನು ಕಳಚಿ ಬೀಸಾಡಿ ಶ್ವೇತಾಂಬರಧಾರಿಯಾದರು.

ದೀಪ ನಿರ್ವಾಣ

೧೯೦೬ರ ಕಾರ್ತೀಕ ಅಮಾವಾಸ್ಯೆಯ ಮಧ್ಯಾಹ್ನ ಸ್ವಾಮಿಗಳು ಟಿಹರಿಯಿಂದ ಕೊಂಚ ದೂರದಲ್ಲಿದ್ದ ಭೃಂಗುಗಂಗಾನಲ್ಲಿ ಸ್ನಾನ ಮಾಡಲು ಹೋದರು. ಗಂಗೆ ಪ್ರಖರ ಧಾರೆಯಾಗಿ ಹರಿಯುತ್ತಿದ್ದಳು. ಸ್ವಾಮಿಗಳು ಓಂ ಓಂ ಎಂದು ಗಾನ ಮಾಡುತ್ತ ನದಿಗೆ ಇಳಿದರು. ಒಂದು ಮುಳುಗು ಹಾಕಿದ್ದರು. ಅಷ್ಟರಲ್ಲೇ ಅವರು ಯಾವ ಕಲ್ಲಿನ ಮೇಲೆ

ನಿಂತಿದ್ದರೋ ಅದು ಕುಸಿಯಿತು. ಅವರು ಸುಳಿಯೊಳಕ್ಕೆ ಸಿಕ್ಕಿಬಿದ್ದರು. ತನ್ನ ಪರಮ ಪ್ರಿಯ ಶಿಶುವನ್ನು ಗಂಗಾಮಾತೆ ಆತ್ಮಲೀನಗೊಳಿಸಿಕೊಂಡಿರಬೇಕು.

ಜಲಸಮಾಧಿಗೆ ಮುನ್ನವೇ ಸ್ವಾಮಿಗಳಿಗೆ ಭವಿಷ್ಯದ ಸಂಕೇತ ದೊರೆತಂತೆ ಕಾಣುತ್ತದೆ. ಸ್ನಾನಕ್ಕೆ ಹೋಗುವ ಸ್ವಲ್ಪವೇ ಮುನ್ನ ಅವರು ಬರೆದಿದ್ದ ಅಪೂರ್ಣ ಲೇಖನದ ಈ ಪಂಕ್ತಿಗಳೇ ಅದಕ್ಕೆ ಸಾಕ್ಷಿ:

‘ಬ್ರಹ್ಮ, ವಿಷ್ಣು, ಶಿವ’
‘ಇಂದ್ರ, ಗಂಗಾ, ಭಾರತ’

‘ಎಲೆ ಮೃತ್ಯುವೇ, ನಿಸ್ಸಂದೇಹವಾಗಿ ಈ ದೇಹವನ್ನು ಹಾರಿಸಿಬಿಡು. ನನ್ನ ಉಳಿದ ರೂಪ ನನಗೆ ಸಾಲದೇನೂ ಇಲ್ಲ. ಕೇವಲ ಚಂದ್ರಕಿರಣಗಳು ಮತ್ತು ಚಂದ್ರಿಕೆಯ ನಕ್ಷತ್ರಗಳನ್ನು ಹೊದ್ದುಕೊಂಡು ನೆಮ್ಮದಿಯಿಂದಿರುತ್ತೇನೆ. ನದೀ, ನಾಲೆಗಳ ವೇಷದಲ್ಲಿ ಹಾಡು ಹೇಳುತ್ತಾ ಅಡ್ಡಾಡುತ್ತಿರುತ್ತೇನೆ. ನನ್ನ ಈ ಭ್ರಮಣ ಶೀಲ ರೂಪ ಯಾವಾಗಲೂ ಪ್ರವಾಹ ರೂಪದಲ್ಲಿರುತ್ತದೆ. ಈ ರೂಪದಲ್ಲಿ ಬೆಟ್ಟಗಳಿಂದ ಇಳಿದೇ ಬಾಡಿದ ಗಿಡಗಳನ್ನು ನಳನಳಿಸುವಂತೆ ಮಾಡಿದೆ. ಹೂಗಳನ್ನು ನಗಿಸಿದೆ. ಬುಲ್‌ಬುಲ್ಲನ್ನು ಅಳಿಸಿದೆ. ಬಾಗಿಲುಗಳನ್ನು ತಟ್ಟಿದೆ. ಮಲಗಿದ್ದವರನ್ನು ಎಬ್ಬಿಸಿದೆ. ಯಾರದೋ ಕಂಬನಿಯನ್ನು ಒರೆಸಿದೆ. ಯಾರದೋ ಮುಸುಕನೋಸರಿಸಿದೆ. ಇವನನ್ನು ರೇಗಿಸಿದೆ. ಅವನನ್ನು ಛೇಡಿಸಿದೆ. ನಿನ್ನನ್ನು ಕೆರಳಿಸದೆ ಅದು ಹೋಯಿತು–ಇದು ಹೋಯಿತು. ಜೊತೆಯಲ್ಲಿ ಏನನ್ನೂ ಇಟ್ಟುಕೊಳ್ಳಲಿಲ್ಲ, ಯಾರ ಕೈಗೂ ಸಿಕ್ಕಿಕೊಳ್ಳಲಿಲ್ಲ.

ಸ್ವಾಮಿಗಳ ಜೊತೆ ಅವರ ಅಡುಗೆಯವನು ಹೋಗಿದ್ದ. ಸ್ವಾಮಿಗಳು ಮುಳುಗಿ ಹೋದುದನ್ನು ಕಂಡು ಗಾಬರಿಗೊಂಡು ಅವನು ಆಶ್ರಮಕ್ಕೆ ಓಡಿ ಹೋಗಿ ಚೌಕೀದಾರನಿಗೆ ತಿಳಿಸಿದ. ಅವನು ಕೂಡಲೇ ಆ ಸುದ್ದಿಯನ್ನು ಮಹಾರಾಜರಿಗೆ ಮುಟ್ಟಿಸಿದ. ಅವರು ಆಗ ತಾನೇ ರಾಜ್ಯಪ್ರವಾಸದಿಂದ ಹಿಂದಿರುಗಿದ್ದರು. ಈ ದಾರುಣ ಸುದ್ದಿಯನ್ನು ಕೇಳಿದ ಕೂಡಲೇ ಅವರು ತಮ್ಮ ಅಧಿಕಾರಿಗಳೊಂದಿಗೆ ಆ ಸ್ಥಳಕ್ಕೆ ಧಾವಿಸಿದರು. ಈಜುಗಾರರು ಸ್ವಾಮಿಗಳ ದೇಹವನ್ನು ಹುಡುಕಿದ ಬಳಿಕ, ಘಟನಾ ಸ್ಥಳದಿಂದ ಒಂದೂವರೆ ಮೈಲಿದೂರದಲ್ಲಿ ದಡದ ಮೇಲೆ ಅವರ ಹೆಣ ಪದ್ಮಾಸನ ಮುದ್ರೆಯಲ್ಲಿ ಸಮಾಧಿ ಸ್ಥಿತಿಯಲ್ಲಿ ಸಿಕ್ಕಿತು. ಮಹಾರಾಜರ ಸೂಚನೆಯ ಮೇರೆಗೆ ಸ್ವಾಮಿಗಳ ಕಳೇಬರವನ್ನು ಪೆಟ್ಟಿಗೆಯಲ್ಲಿಟ್ಟು ಭಾಗೀರಥೀ ನದಿಯಲ್ಲಿ ತೇಲಿ ಬಿಡಲಾಯಿತು.

ಸ್ವಾಮಿಗಳ ಆಕಸ್ಮಿಕ ನಿಧನದಿಂದ ಮಹಾರಾಜರಿಗೆ ದೊಡ್ಡ ಆಘಾತವಾಯಿತು. ಅಂದು ದೀಪಾವಳಿ. ದೀಪಗಳನ್ನೆಲ್ಲ ಆರಿಸಿ, ಶೋಕಾಚರಣೆ ಮಾಡುವಂತೆ ಅವರು ಅಪ್ಪಣೆ ಮಾಡಿದರು.

ಸ್ವಾಮಿಗಳ ಸಾವಿನ ಸುದ್ದಿ ಬರಸಿಡಿಲಿನಂತೆ ದೇಶ ವಿದೇಶಗಳಲ್ಲಿ ಎರಗಿತು. ಅವರ ವಿಯೋಗದಿಂದ ಬಹಳ ಜನ ಮಮ್ಮಲ ಮರುಗಿದರು. ಶೋಕ ಸಭೆ ನಡೆಸಿ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ವಿದೇಶೀಯರ ಬಾಯಿಂದ ಈ ಉದ್ಗಾರ ಹೊರ ಹೊಮ್ಮಿತು. Oh Grave! Where is they victory! oh! Death! where is they sting.

ಸ್ವಾಮಿ ರಾಮತೀರ್ಥರ ಜೀವನದ ಬಹುದೊಡ್ಡ ವಿಚಿತ್ರವೆಂದರೆ ಅವರು ಹುಟ್ಟಿದ್ದು ದೀಪಾವಳಿಯ ದಿನ. ಸನ್ಯಾಸಿಯಾಗಿದ್ದು ದೀಪಾವಳಿಯಂದು, ಮತ್ತೆ ದೀಪಾವಳಿಯಂದೇ ಅವರ ನಿಧನವಾಯಿತು. ರಾಮತೀರ್ಥರ ರಚನೆಗಳಲ್ಲಿ ಅವರ ಕೆಲವು ಭಾಷಣಗಳು ಕೆಲವು ಪತ್ರಗಳು ಮತ್ತು ಕೆಲವು ಕವಿತೆಗಳು ದೊರೆಯುತ್ತವೆ. ಅವುಗಳಿಂದ ಅವರ ಬ್ರಾಹ್ಮೀಸ್ಥಿತಿಯ ಸೆಳೆತವನ್ನು ಕಾಣಬಹುದು. ಅವರು ಆತ್ಮಾನುಭೂತಿಯಿಂದ ಪ್ರಭಾವಿತವಾದ ತಮ್ಮ ವ್ಯಾಪಕ ದೃಷ್ಟಿಕೋನದಿಂದಾಗಿ ಎಲ್ಲರನ್ನೂ ಆತ್ಮ ಸ್ವರೂಪವಾಗಿಯೇ ಕಾಣುತ್ತಿದ್ದರು. ಅವರು ಅದರ ರಂಗಿನಿಂದ ತಮ್ಮ ಪ್ರತಿಯೊಂದು ಚಟುವಟಿಕೆಯನ್ನು ಅದ್ದಿ ಮುಳುಗಿಸಿದ್ದರು. ಅವರ ಭಾವುಕತೆ ತುಂಬ ತೀವ್ರವಾಗಿತ್ತು. ಅದು ಕೆಲವೊಮ್ಮೆ ಭಾವಾವೇಶ ಇಲ್ಲವೆ ಉನ್ಮಾದ ಸ್ಥಿತಿಯನ್ನು ಮುಟ್ಟುತ್ತಿತ್ತು. ಇದರಿಂದ ಸರ್ವಸಾಧಾರಣರು ಅವರ ಮಾತನ್ನು ಕೇಳಿ ದಂಗು ಬಡಿದವರಂತಾಗುತ್ತಿದ್ದರು. ಆದರೆ ಇದರಿಂದ ಅವರ ವಿಚಾರಗಳಲ್ಲಿ ವಿಶೃಂಖಲತೆಯುಂಟಾಗುತ್ತಿರಲಿಲ್ಲ. ತಮ್ಮ ವಾಸ್ತವಿಕ ಗುರಿಯಾದ ಆತ್ಮಾನುಭೂತಿಯ ಮೂಲಕ ವಿಶ್ವಕಲ್ಯಾಣ ಕಲ್ಪನೆಯಿಂದ ದೂರ ಸರಿಯುತ್ತಿರಲಿಲ್ಲ. ಅವರು ಈ ಮಾನಸಿಕ ಸ್ಥಿತಿಯನ್ನು ಒಮ್ಮೆ A Share of Balanced Recklessness ಅರ್ಥಾತ್ "ಸಂತುಲಿತ ಪ್ರಮಾದಾವಸ್ಥೆ" ಎಂದು ಕರೆದಿದ್ದರು.

ರಾಮತೀರ್ಥರು ತಾವು ಉಪದೇಶಿಸಿದ ಮತವನ್ನು 'ನಗದು ಧರ್ಮ' ಎಂದು ಕರೆಯುತ್ತಿದ್ದರು. ಅವರು ಹೇಳುತ್ತಿದ್ದರು, ಇದು ಇಂದಿನ ಬದುಕಿಗೆ ಸಂಬಂಧಿಸಿದುದು. ಇನ್ನೊಂದು 'ಉದರಿ ಧರ್ಮ. ಅದು ಅಂಧ ವಿಶ್ವಾಸದ ಮೇಲೆ ನಿಂತಿದೆ. ಉದರಿಧರ್ಮ ಹೇಗೆ ನಗದು ಧರ್ಮ ಮಾಡಲು, ಆಚರಿಸಲು, ಅನುಷ್ಠಾನ ಮಾಡಬೇಕಾದುದು. ಧರ್ಮದ ಈ ನಗದು ರೂಪದ ಬಗೆಗೆ ಎಲ್ಲ ಧರ್ಮಗಳಲ್ಲೂ ಏಕವಾಕ್ಯತೆಯಿದೆ. ಇದರಲ್ಲಿ ಎರಡು ಮಾತಿಲ್ಲ. ನಗದು ಧರ್ಮದ ಪರಿಭಾಷೆಯೊಳಗೆ ಸತ್ಯ ನುಡಿಯುವುದು, ಜ್ಞಾನ ಸಂಪಾದನೆ, ಅದನ್ನು ಆಚರಣೆಯಲ್ಲಿ ತರುವುದು, ಅನುಷ್ಠಾನ ಸ್ವಾರ್ಥರಹಿತನಾಗಿರುವುದು, ಜಗತ್ತಿನ ದುರಾಶೆ ಹಾಗೂ ಭಯದ ಮೋಡಿಗೆ ಸಿಲುಕಿ ತನ್ನ ವಾಸ್ತವಿಕ ಚಿದ್ರೂಪವನ್ನು ಮರೆಯದಿರುವುದು ಮತ್ತು ಸ್ಥಿರಸ್ವಭಾವ ದಿಂದಿರುವುದು, ಇವೆಲ್ಲವುಗಳ ಚರ್ಚೆ ಇಲ್ಲಿದೆ.

ಒಮ್ಮೆ ರಾಮತೀರ್ಥರು ಯಾರೋ ಕೇಳಿದ ಪ್ರಶ್ನೆಗೆ ಹೀಗೆ ಉತ್ತರ ನೀಡಿದ್ದರು: 'ಧರ್ಮದ ಉದ್ದೇಶ ಧರ್ಮವೇ! ಅದೇ ಎಲ್ಲ ವಿದ್ಯೆಗಳ ಗುರಿ, ಅಂತಿಮ ನಿಷ್ಕರ್ಷ ಹಾಗೂ ಪರಿಣಾಮ. ಅವರು, ಅದು ಚಿತ್ತದ ವಿಕಾಸಾವಸ್ಥೆಯ ಆಧಾರವೆಂದಿದ್ದರು. ಅದರ ಮೂಲಕ ಶಾಂತಿ, ಸತೋಗುಣ, ಔದಾರ್ಯ, ಪ್ರೇಮಶಕ್ತಿ ಮತ್ತು ಜ್ಞಾನ ಇವೆಲ್ಲ ನಮಗೆ ದೊರೆಕೊಳ್ಳುತ್ತವೆ. ಅವು ನಮ್ಮ ಸ್ವಂತದ್ದಾಗುತ್ತವೆ. ಧರ್ಮದ ಮೂಲಕ ಮನುಷ್ಯನ ಜೀವನದಲ್ಲಿ ಒಂದು ಅಭೂತಪೂರ್ವ ಪರಿವರ್ತನೆ ಉಂಟಾಗಬೇಕು. ಅದರಿಂದ ನಮ್ಮ ಆಚಾರ, ವ್ಯವಹಾರ, ವಾಣಿ ಮತ್ತು ವಿಚಾರಗಳು ಒಂದು ಪರಿಚ್ಛಿನ್ನ ಶರೀರ ಮತ್ತು ಅದರ ದಾಸ್ಯ (ದೇಹಧ್ಯಾನ) ಎಂಬ ದೃಷ್ಟಿಯುಂಟಾಗದೆ, ಸರ್ವವ್ಯಾಪಕ ವಿಶ್ವಾತ್ಮ ಮತ್ತು ಜಗತ್ಪ್ರಾಣನ ದಶೆ ನಮ್ಮ ದಶೆಯಾಗಬೇಕು.

ಧರ್ಮದ ಪ್ರಾಣವೆಂದರೆ ಹೃದಯ ವಿಚಲಿತವಾಗುವುದು, ಕರಗುವುದು, ಖುದೀ (ದೇಹಾತ್ಮ ಭಾವ)ಗೆ ಬದಲಾಗಿ ಖುದಾ ಈ (ಬ್ರಹ್ಮಭಾವ)ಯ ಪ್ರಾಪ್ತಿ, ಅದು ಒಂದೇ, ಏಕಮಾತ್ರ, ಅದು ಎಂದೂ ಬದಲಾಗದಂಥದು. ಧರ್ಮದ ಶರೀರ ಇಲ್ಲವೆ ಬಾಹ್ಯ ರೂಪಗಳು ಅನೇಕವಿರಬಹುದು. ದೇಶ, ಕಾಲ ಮತ್ತು ಅವಸ್ಥೆಗೆ ಅನುಗುಣವಾಗಿ ಭಿನ್ನಭಿನ್ನವಾಗಿರಬಹುದು. ಸರ್ವಸಾಧಾರಣರು ಧರ್ಮದ ಈ ಬಾಹ್ಯ ರೂಪವನ್ನೇ ತಮ್ಮದಾಗಿಸಿಕೊಂಡು ತಮ್ಮ ಸಾಮಾಜಿಕ ಕಟ್ಟು-ಕಟ್ಟಳೆಗಳು, ಧರ್ಮ ಗ್ರಂಥಗಳು, ಪರಲೋಕದ ಬಗೆಗಿನ ವಿಚಾರಗಳು ಇವುಗಳ ಬಗೆಗೆ ವಿವಾದದಲ್ಲಿ ಮಗ್ನರಾಗುತ್ತಾರೆ. ಅದರಿಂದ ಅವರ ಹೃದಯ ಕರಗುವುದಿಲ್ಲ. ಅದರಿಂದಾಗಿ ಹಲವರು ಧರ್ಮ ಪರಿವರ್ತನೆ ಮಾಡಿಕೊಂಡಿರುವುದೂ ಉಂಟು.'[೧]

ರಾಮತೀರ್ಥರು ಭಾರತೀಯ ಋಷಿಮನೀಷಿಸಂತಮಹಂತರ ಅಭಿಪ್ರಾಯಗಳನ್ನೇ ಪ್ರತಿಬಿಂಬಿಸಿದ್ದಾರೆ. ಅಷ್ಟೇ ಅಲ್ಲ, ಅವರು ನುಡಿದಂತೆ ನಡೆದ ಮಹಂತರು. ತಮ್ಮ ಅಲ್ಪಕಾಲೀನ ಸಾತ್ವಿಕ ಜೀವನದಲ್ಲಿ ಒಂದು ಉಚ್ಚ ಕೋಟಿಯ ಆದರ್ಶವನ್ನು ಜನತೆಯ ಮುಂದಿಟ್ಟರು.

---

೧ ಸ್ವಾಮೀ ರಾಮತೀರ್ಥ ಕೇ ಲೇಖ್ ವ ಉಪದೇಶ್ ಭಾಗ II, ರಾಮತೀರ್ಥ ಪಬ್ಲಿಕೇಷನ್ ಲೀಗ್ ಲಕ್ನೋ, ೧೯೪೫

ಗರತಿಯ ಹಾಡಿನ ಕನ್ನಡ ಗರತಿ

— ಪಿ. ಶಶಿಕಲಾ

ದುಡಿಮೆ, ನೋವು, ನಲಿವು, ಆಶಯ, ವಾತ್ಸಲ್ಯ, ಮಾತೃತ್ವ ಇವೆಲ್ಲ ಕನ್ನಡನಾಡಿನ ಜನಪದ ಗರತಿಯ ತುಂಬು ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಆಕೆಯ ಹಾಡುಗಳು ಹೃದಯತುಂಬಿ ಆಕೆಯ ಕೊರಲಿನಿಂದ ಉದುರಿದ ಮುತ್ತುಗಳು. ಜನಪದ ಕವಯಿತ್ರಿ ಯಾವ ರಾಜಾಶ್ರಯವನ್ನು ಪಡೆದಿರಲಿಲ್ಲ. ಆಕೆ ಪಂಡಿತರ ಪಡಸಾಲೆಗೂ ಹೋಗಿ ಬಂದವಳಲ್ಲ. ಗರತಿ ಹಾಡಿದ ಹಾಡು ಯಾವ ವೇದಕ್ಕೂ ಕಡಿಮೆಯಿಲ್ಲ. ಕಾವ್ಯಕ್ಕೂ ಕೀಳಿಲ್ಲ. ಇಲ್ಲಿ ಕನ್ನಡ ಗರತಿಯ ತುಂಬಿದ ಬದುಕನ್ನು ಕಾಣುತ್ತೇವೆ.

ಕನ್ನಡನಾಡಿನ ಮಹಿಳೆಯರ ಜೀವನವನ್ನು ಅವರ ಬಾಳಗುರಿಯನ್ನು ಅರಿಯ ಬೇಕಾದರೆ ಗರತಿಯರ ಬಗೆಗೆ ರಚಿತವಾದ ಕನ್ನಡ ಜನಪದ ಗೀತೆಗಳನ್ನು ಪರಿಶೀಲಿಸ ಬೇಕು. ಪಾಶ್ಚಾತ್ಯರ ಸಾಮಾಜಿಕ, ಶೈಕ್ಷಣಿಕ ಪ್ರಭಾವದಿಂದಾಗಿ ಈಗ ನಿಜವಾದ ಕರ್ನಾಟಕ ಸಂಸ್ಕೃತಿಯನ್ನು ನಾವಿಂದು ಮರೆತಂತಿದೆ. ನಮ್ಮ ಬಾಳಿನಲ್ಲಿ ಆಚಾರ-ವಿಚಾರಗಳು ದೂರವಾಗಿವೆ. ಹೊಸ ವಿಚಾರಗಳು ಇನ್ನೂ ಹೊಂದಿಕೆಯಾಗಿಲ್ಲ. ಹಳೆ ಹೊಸ ವಿಚಾರಗಳ ಸಂಪ್ರದಾಯಗಳ ಮಧ್ಯಂತರದಲ್ಲಿ ನಾವಿಂದು ಬಾಳುತ್ತಿದ್ದೇವೆ. ನಮ್ಮ ಪೂರ್ವದ ಸಂಸ್ಕೃತಿಯನ್ನು ಬಾಳಿನ ಆದರ್ಶವನ್ನು ನಾವು ಕಡೆಗಣಿಸಲಾಗದು. ಬಾಳಿನ ಆದರ್ಶ ಗಳನ್ನು ಇಂದಿನ ವಾತಾವರಣಕ್ಕೆ ಹೊಂದಿಸಿಕೊಂಡು ಬಾಳುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಕರ್ತವ್ಯವನ್ನು ಅರಿತುಕೊಳ್ಳಲು ನಮ್ಮ ನಾಡಿನ ಗರತಿಯರ ಬಾಳು ಆದರ್ಶಪ್ರಾಯವಾಗಿದೆ. ತ್ಯಾಗ, ಭಕ್ತಿ, ಶ್ರದ್ಧೆ, ಮಮತೆಗಳ ಮೂರ್ತಿಯಾಗಿದ್ದಾಳೆ. ಕನ್ನಡ ಗರತಿ ಯೋಗ್ಯಳಾದ ಮಗಳು, ಮಮತೆಯ ಮಡದಿ, ಪ್ರೀತಿಯ ಸೊಸೆ, ವಾತ್ಸಲ್ಯದ ತಾಯಿಯಾದ ಹೆಣ್ಣಿನ ವಿವಿಧ ರೂಪಗಳನ್ನು ಗರತಿಯ ಹಾಡುಗಳಲ್ಲಿ ನಾವು ಕಾಣುತ್ತೇವೆ.

ತನ್ನ ನಿತ್ಯ ಜೀವನದಲ್ಲಿ ಅನುಭವಿಸಿದ ಸಂಗತಿಗಳನ್ನು ಗರತಿಯು ಸರಸ ಸಾಹಿತ್ಯ ರೂಪದಲ್ಲಿ ಹೊರಹೊಮ್ಮಿಸಿದ್ದಾಳೆ. ದೇವರಲ್ಲಿಯ ಭಕ್ತಿ, ಗಂಡನಿಗಾಗಿ ಪ್ರೀತಿ ಮಗುವಿನ ಬಗೆಗೆ ವಾತ್ಸಲ್ಯ, ತವರು ಮನೆಯ ಅಕ್ಕರೆ, ಅತ್ತೆ ಮನೆಯ ವಿರಸ ಮೊದಲಾದ ಅನುಭವಗಳೆಲ್ಲ ಹೃದಯಾಂತರಾಳದಿಂದ ಹೊರಹೊಮ್ಮಿವೆ.

ಗರತಿ ತನ್ನ ದಿನಗೆಲಸವನ್ನು ಬೆಳ್ಳಿ ಚುಕ್ಕಿ ಮೂಡಿದಾಗ ಪ್ರಾರಂಭಿಸುತ್ತಿದ್ದಳು. ಉದಯಕಾಲದ ಪ್ರಶಾಂತ ವಾತಾವರಣದಲ್ಲಿ, ಮಕ್ಕಳು ಸಕ್ಕರೆಯ ಸವಿನಿದ್ರೆಯಲ್ಲಿದ್ದಾಗ ದನಕರುಗಳೆಲ್ಲ ಕೊಟ್ಟಿಗೆಯಲ್ಲಿ ಅಂಬಾ ಎನ್ನುತ್ತಿರುವಾಗ, ಬೀಸುವ ಕಲ್ಲಿನ ಗರಗರ ಸಪ್ಪಳ ಕನ್ನಡ ಗರತಿಗೆ ಸ್ಫೂರ್ತಿಯನ್ನೀಯುತ್ತಿತ್ತು. ಬೀಸುವ ಕಲ್ಲಿನ ಸಪ್ಪಳವೇ ಅವಳ ಸಂಗೀತಕ್ಕೆ ಹಿಂಬದಿಯ ವಾದ್ಯ, ಸಂಸಾರದ ನೂರೆಂಟು ತಾಪತ್ರಯಗಳನ್ನು ಮರೆತು ಭಕ್ತಿಗೀತೆಗಳಿಂದ ಗರತಿಯು ದಿನಚರಿಯನ್ನು ಆರಂಭಿಸುತ್ತಾಳೆ-

ಶಿವ ಶಿವ ಎಂದರ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ | ಎಲೆ ಮನವೆ
ಶಿವನೆಂಬ ಶಬುದ ಬಿಡಬ್ಯಾಡ

ಎಂಬ ಏಕನಿಷ್ಠೆಯಿಂದ ಭಕ್ತಿಯಿಂದ ದೇವರನ್ನು ಸ್ತುತಿಸುತ್ತಾಳೆ. ಸ್ವಾರ್ಥಮಯವಾದ ಈ ಜಗತ್ತಿನಲ್ಲಿ ಎರಡನೆಯವರನ್ನು ತನ್ನ ಸಹಾಯಕ್ಕಾಗಿ ನಂಬಿ ನಿರಾಶಳಾದ ಗರತಿಯ

ಮಂದಿ ಮಂದೀಯೆಂದು ಮಂದಿ ನಂಬಲಿಹೋದ
ಮಂದಿ ಬಿಟ್ಟ್ಯಾರ ನಡುನೀರ | ಮಲ್ಲಯ್ಯ
ತಂದಿ ನನ ಕೈಯ ಬಿಡಬಾಡ

ಎಂಬ ಅವಳ ಹಂಬಲ ಸಾರ್ಥಕವಾಗುವುದು. ನಂಬಿದ ಗರತಿಯನ್ನು ಕಾಯಲು ಪರಶಿವನ ಕರುಣೆ ಸದಾ ಸಿದ್ಧವಾಗುತ್ತದೆ.

ಮಂದೇನ ಕೊಟ್ಟೀತ ಮನವೇನು ದಣದೀತ
ಮುಂಜಾನದಾನ ಗಿರಿಮಲ್ಲ | ಕೊಟ್ಟರೆ
ಮನಿ ತುಂಬಿ ನಮ್ಮ ಮನ ತುಂಬಿ

ದೇವನೊಲಿದರೆ ಮನೆ ಮನಗಳು ತುಂಬಿ ತುಳುಕಾಡುವುವು. ಇಂತಹ ಶ್ರದ್ಧೆಗೆ ಭಕ್ತಿಪ್ರಿಯ ಶಿವನು ಒಲಿಯದಿರುವನೇ? ಗರತಿಯು ಶ್ರದ್ಧೆಯಿಂದ ದೊರೆಯುವ ಅಲೌಕಿಕವಾದ ಆನಂದವನ್ನು ಅನುಭವಿಸುತ್ತಾಳೆ. ಏಕಾಗ್ರಚಿತ್ತದಿಂದ ಕಲ್ಲು ಬೀಸುವ ಗರತಿ ಧ್ಯಾನದಲ್ಲಿ ಮಗ್ನಳಾಗುತ್ತಾಳೆ. ಭಕ್ತಿಪರವಶಳಾಗುತ್ತಾಳೆ. ದೈವೀಅನುಗ್ರಹದಿಂದ ಮನೆಮನಗಳನ್ನು ತುಂಬಿಕೊಂಡ ಕನ್ನಡ ಗರತಿ ಪಾವನೆಯಾಗಿದ್ದಾಳೆ.

ಬೆಳಿಗ್ಗೆ ಎದ್ದೊಡನೆ ಬೀಸುವ ಕೆಲಸ ಮುಗಿಸಿದ ಕನ್ನಡ ಗರತಿ ಎತ್ತಿನ ಕೊಟ್ಟಿಗೆಯನ್ನು ಹಸನಾಗಿಸುವ ಕಾರ್ಯದಲ್ಲಿ ಮಗ್ನಳಾಗುತ್ತಾಳೆ. ಮನಸ್ಸು ಶುದ್ಧವಾಗಿ ದೇವರ ಧ್ಯಾನದಲ್ಲಿದ್ದ ಗರತಿಗೆ, ಕಸ ಸಗಣಿ ಹೊಲಸು ಎನ್ನಿಸುವುದಿಲ್ಲ. ಎಲ್ಲವೂ ಪವಿತ್ರವೇ ಅವಳಿಗೆ

ಕಸವು ಹೊಡೆದ ಕೈಯ ಕಸ್ತೂರಿ ನಾತಾವ
ಬಸವಣ್ಣಾ ನಿನ್ನ ಸಗಣೇಯ | ಬಳಿದ ಕೈ
ಎಸಳ ಯಾಲಕ್ಕಿ ಗೊನಿನಾತ

ಎನ್ನುವ ಮಾತಿನಲ್ಲಿ 'ದೃಷ್ಟಿಯಂತೆ ಸೃಷ್ಟಿ' ಎಂದೆನಿಸದೆ ಇರಲಾರದು. ಒಳಗೆ ಭಾವ ಶುದ್ಧವಾದಲ್ಲಿ ಮನ ಪವಿತ್ರವಾದಲ್ಲಿ ಯಾವ ಕಾರ್ಯ ಮಾಡಿದರೂ ಪವಿತ್ರ ಭಾವನೆ ಬರುವುದು. ಕಸ ಸಗಣಿಗಳಲ್ಲೂ, ಕಸ್ತೂರಿ ಏಲಕ್ಕಿಗಳ ಕಂಪಿನ ವಾಸನೆ ಕಾಣುವ ಗರತಿಯ ದೃಷ್ಟಿ ಉದಾತ್ತವಾದುದು -

ಆಸರಕಿ ಅಳದಿಟ್ಟ ಬ್ಯಾಸರಕಿ ಬಳದಿಟ್ಟ
ಚಿಂತೀಯ ಕಾಲಾಗ ತುಳಿದಿಟ್ಟೆ ಈ ದೇಹ
ಶೀಲ ಮಾಡಿಟ್ಟೆ ಜನದಾಗ

ಧೀರ ಗರತಿ ಆಸರಿಕೆ ಬೇಸರಿಕೆಗಳನ್ನರಿಯದವಳು. ದೇಹವನ್ನು ಮನೆಯ ಜನರ ಸುಖಕ್ಕಾಗಿ ಸುಣ್ಣದ ಹರಳಿನಂತೆ ಸುಡುವವಳು. ಕರ್ಮಯೋಗಿನಿಯಾಗಿ ಮರ್ತ್ಯವನ್ನು ಗೆದಿಯುವವಳು ಕನ್ನಡದ ಗರತಿ.

ಕನ್ನಡ ಗರತಿಯ ಸಂಸಾರ ದೊಡ್ಡದು. ಆದರೆ ಬಡತನದ್ದು. ಪತಿ ಬಡವನೆಂದು ಕೊರಗುವುದಿಲ್ಲ ಆಕೆ.

ಕೂಲಿ ಮಾಡಿದರೇನು ಕೋರಿ ಹೊತ್ತರೇನು
ನಮಗ ನಮ ರಾಯ ಬಡವೇನ | ಬಂಗಾರ
ಮಾಲ ಇದ್ದಾಂಗ ಮನಿಯಾಗ

ಗರತಿಯ ಇಂಥ ಭಾವನೆ ಹಿರಿದಾದುದು. ಬಡತನವಿದ್ದರೇನು ಪತಿಯೇ ಬಂಗಾರ, ಪ್ರೇಮವೇ ದೇವತೆಯವಳಿಗೆ. ಪತಿಯಲ್ಲಿ ಸರ್ವಸೌಭಾಗ್ಯವನ್ನು ಕಾಣುವುದೇ ಹೆಣ್ಣಿನ ಹಿರಿಮೆ. ನಮಗೆ ನಮ ರಾಯ ಬಡವೇನ ಎಂಬ ಮಾತಿನಲ್ಲಿ ಪತಿಯ ಬಗೆಗೆ ಗರತಿಗಿದ್ದ ಆದರ ಅಭಿಮಾನಗಳು ಎದ್ದು ಕಾಣುತ್ತವೆ.

ಬಾಣಂತಿತನಕ್ಕೆ ತೌರಿಗೆ ಹೋದ ಗರತಿಗೆ ಹೆಣ್ಣು ಮಗು ಹುಟ್ಟಿದರೂ ಆಗ ಅವಳಿಗೆ ಬೇಸರವಿಲ್ಲ. ತನ್ನ ರಕ್ತಮಾಂಸಗಳಿಂದ ರೂಪುಗೊಂಡ ಆ ಸುಂದರ ಮೂರ್ತಿಯನ್ನು ಕಂಡು ಸಂತಸಪಡುವಳು. ತನಗೆ ಹೆಣ್ಣು, ಗಂಡು ಎಲ್ಲವೂ ಒಂದೇ ಎಂದು ತಿಳಿಯುವಳು. ಹೆಣ್ಣೆಂದರೆ ಪತಿಗೆಲ್ಲಿ ಅಸಮಾಧಾನವೋ ಎಂದು ಹೆದರಿ

ಹೆಣ್ಣು ಹುಟ್ಯಾದಂತ ಹೇಳಿ ಕಳುಹಲಿಬ್ಯಾಡ
ಹೆಣ್ಣೆಂದರವರು ಹೆದರ್ಯಾರ | ಕಂದವ್ವ
ಹೆಣ್ಣಲ್ಲ ನಮಗ ರವಿಚಿನ್ನ

ಎಂದುಕೊಳ್ಳುತ್ತಾಳೆ. ತಾಯಿಗೆ ಮಗುವಿನಿಂದಲೇ ಸ್ವರ್ಗ ಸುಖ, ಆ ಸುಖದೆದುರು ಸ್ವರ್ಗವೂ ಅವಳಿಗೆ ಬೇಡ. ಕೂಸು ನಕ್ಕರೆ ಸಂತೋಷದಿಂದ ಹೃದಯ ತುಂಬಿಬರುವುದು. ಅತ್ತರೆ ಮನದಲ್ಲಿ ಕಸಿವಿಸಿಪಡುವಳು-

ನನ್ನ ಕಂದಾ ಮುದ್ದು ಹೊನ್ನು ತಾವರಿ ಮುದ್ದು
ಹಣ್ಣುಳ್ಳ ಗಿಡಕೆ ಗಿಣಿ ಮುದ್ದು | ಕಂದವ್ವ
ನೀ ಮುದ್ದು ನನ್ನ ಬಳಗಕ

ತಾವರೆಯ ಸೊಬಗು ಶ್ರೇಷ್ಠವಾದುದು. ಅದರಲ್ಲೂ ಹೊನ್ನುತಾವರೆ ಮುದ್ದಾಗಿಯೇ ಇರಬೇಕಲ್ಲವೆ? ಗರತಿಗೆ, ಗರತಿಯ ಬಳಗಕ್ಕೆ ಆ ಮಗುವೂ ತಾವರೆಯಷ್ಟು ಮುದ್ದಾಗಿ ಕಂಡಿರಬೇಕು. ಅವಳ ವಾತ್ಸಲ್ಯವೇ ಅದಕ್ಕೆ ಕಾರಣ.

ತವರುಮನೆಯಿಂದ ತೊಟ್ಟಿಲ ಬಟ್ಟಲುಗಳೊಂದಿಗೆ ಹೊಸ ಸೀರೆಯನ್ನುಟ್ಟು ಕಂದನನ್ನೆತ್ತಿಕೊಂಡು ಅತ್ತೆಯ ಮನೆಗೆ ಹೊರಡುತ್ತಾಳೆ. ಆಗ ಅವಳಿಗೆನ್ನಿಸುವುದು, ನನಗಾಗಿ ಇಷ್ಟೊಂದು ಮಾಡಿದ ತವರಿನವರಿಗೆ ನಾನೇನು ಕೊಡಬಲ್ಲೆ? ತವರು ಮನೆಯಿಂದ ಆಭರಣ ಸೀರೆಗಳನ್ನೊಯ್ಯುವುದು ಮಾತ್ರ ಹೆಣ್ಣಿಗೆ ರೂಢಿಯಾಗಿದೆ. ಅದಕ್ಕೆ ಪ್ರತಿಯಾಗಿ ತಾನು ಹೃದಯಾಂತರಾಳದಿಂದ ಹರಕೆ ಕೊಡುವುದೊಂದೇ ಹಾದಿಯೆಂದು ಬಗೆಯುತ್ತಾಳೆ-

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ | ಕುಡಿಯಂಗ
ಹಬ್ಬಲಿ ಅವರ ರಸಬಳ್ಳಿ

ಎಂಬ ಪ್ರಾರ್ಥನೆಯೊಂದಿಗೆ ಅತ್ತೆಯ ಮನೆಗೆ ಹೊರಡುತ್ತಾಳೆ. ಅಲ್ಲಿ ತನ್ನ ಅತ್ತೆ. ನಾದಿನಿ, ಓರಗಿತ್ತಿ, ಭಾವ ಮೊದಲಾದವರ ಮುಂದೆ ಮಗುವಿನ ಚೆಲುವಿನ ವರ್ಣನೆ ಮಾಡುವಳು-

ತವರೂರಿಗ್ಹೋದಾಗ ನವಿಲ ಬಣ್ಣದ ಪಕ್ಷಿ
ತಲಿಬ್ಯಾನಿಯೆದ್ದು ಅಳತಿತ್ತ | ಕಂದನ
ಛಲುವೀಕಿ ನೋಡಿ ನಗತಿತ್ತ

ಅಳುತ್ತಿರುವ ಹಕ್ಕಿಯೂ ಕೂಡ ಮಗುವಿನ ಸೌಂದರ್ಯಕ್ಕೆ ತಲೆದೂಗಿ ನಗುತ್ತಿತ್ತಂತೆ. ಮಗುವಿನ ಬಗೆಗೆ ಅವಳಿಗಿರುವ ಮಮತೆಯೇ ಆ ರೀತಿ ಅವಳಿಂದ ಮಾತನಾಡಿಸುತ್ತದೆ. ತನ್ನ ಮಗು ಅತ್ತರೆ ಮುತ್ತು ಉದುರವುವೆಂದು, ಭಾವ ಎತ್ತಿಕೊಳ್ಳಿರೆಂದು ಹೇಳುತ್ತಾಳೆ. ಎಲ್ಲರ ಕೈಯಲ್ಲಿ ಅರಿಗಿಳಿಯಂತೆ ಆಡುತ್ತಾ ಬೆಳೆಯುತ್ತಿರುವ ಮಗು ಕುಳಿತು ಕೊಳ್ಳುವುದನ್ನು ಕಲಿತಾಗ ತಾಯಿಗೆ ಹೆಚ್ಚಿನ ಆಸೆ ಚಿಗುರೊಡೆಯುತ್ತಿದೆ -

ಕುಂತಾರು ಮಗಳೀಗಿ ಕೂದಲ ಬಿಟ್ಟೇನ
ನಗರದ ಚೌರಿ ತರಸೇನ| ಮನಿಯಾನ
ತಮ್ಮಗ ಧಾರಿ ಎರದೇನ

ಎಂಬ ಹಂಬಲ ಆಕೆಗೆ ತಲೆದೋರುತ್ತಿದೆ. ಮಗಳು ದೊಡ್ಡವಳಾದೊಡನೆ ತಮ್ಮನಿಗೆ ಮಗಳನ್ನು ಕೊಡಬೇಕು. ಅಂದರೆ ತವರುಮನೆ ತನ್ನದಾಗುವುದೆಂಬ ಆಶೆ ಗರತಿಗೆ. ತಮ್ಮನಿಗೆ ಹೊರಗಿನ ಹೆಣ್ಣು ತಂದರೆ ತವರುಮನೆ ತನಗೆ ಎರವಾಗುವುದೇನೋ ಎಂಬ ಅಂಜಿಕೆ ಆಕೆಗೆ. ಗುರುತು ಪರಿಚಯವಿಲ್ಲದ ಮನೆಗೆ ಮಗಳು ಹೋಗಿ ಬಾಳುವೆ ಮಾಡಬೇಕಲ್ಲ ಎನ್ನುವ ಚಿಂತೆಯೂ ಇದೆ. ಅಲ್ಲಿ ಅತ್ತೆ ಮನೆಯವರು ಮಗಳಿಗೆ ತೊಂದರೆ ಕೊಟ್ಟರೆ ಹೇಗೆ? ಇಲ್ಲಿ ತವರು ಮನೆಯಲ್ಲಾದರೆ ತನ್ನ ತಾಯಿ ಇರುತ್ತಾಳೆ. ಯಾವ ತೊಂದರೆಯೂ ಆಗದಂತೆ ಮಗಳನ್ನು ನೋಡಿಕೊಳ್ಳುತ್ತಾಳೆ ಎಂಬ ಯೋಚನೆಯೂ ಬರುತ್ತದೆ. ಆದರೆ ಎಲ್ಲವೂ ದೈವಾಧೀನ.

ಮಗಳು ದಿನಗಳೆದಂತೆ ಬೆಳೆದು ದೊಡ್ಡವಳಾಗುತ್ತಾಳೆ. ಅರಿಸಿಣ್ಣಚ್ಚಿದ ಮಾರಿ, ಸರಪಳ್ಳಚ್ಚಿದ ವಾಲಿಗಳನ್ನಿಟ್ಟ ಯುವತಿ

ಮುತ್ತಿನ ಸರ ಕಟ್ಟಿ ಮ್ಯಾಲೆ ನಿಂತಾಳ
ಬಟ್ಟಲುಗಣ್ಣು ತಿರುವ್ಯಾಳ| ಕಂದಮ್ಮ
ದಿಟ್ಟಿ ಸೋಂಕ್ಯಾವ ಒಳಗ್ಹೋಗ

ಎಂದು ಮಗಳಿಗೆ ಹೇಳುತ್ತಾಳೆ. ಮಗಳ ಸೌಂದರ್ಯವನ್ನು ಕಂಡು ನೆರೆಹೊರೆಯವರು ದೃಷ್ಟಿ ಬಿಟ್ಯಾರು. ದೃಷ್ಟಿ ತಾಗಿದರೆ ಮಗಳ ಮುಖ ಬಾಡಿತೆಂಬ ಭಯವಿದೆ.

ತಮ್ಮನಿಗೆ ಮಗಳನ್ನು ಕೊಡಲಾಗದೆ ಬೇರೆ ವರನಿಗೆ ಕೊಟ್ಟು ಲಗ್ನ ನಡೆಯುತ್ತಿದೆ. ಒಂಬತ್ತು ತಿಂಗಳು ಹೊತ್ತು ಹೆತ್ತ ಕರುಳ ಕುಡಿಯನ್ನು ಹೆರವರ ಮನೆಗೆ ಕಳಿಸಬೇಕಾದಾಗ ಅವಳ ಮನ ದುಃಖದಿಂದ ತುಂಬುತ್ತದೆ.

ಹತ್ತು ತಿಂಗಳು ನಿನ್ನ ಹೊತ್ತುಕೊಂಡು ತಿರುಗೇನು
ಮುತ್ತು ಸುರಿವಿದರ ಬರಿ ಉಡಿಯ| ನನ ಮಗಳ
ಅತ್ತೇರಿಗೊಪ್ಪಿಸಿ ಕೊಡಲ್ಯಾಂಗ

ಎಂಬ ಕೊರಗು ಇದೆ. ಮಗಳು ಬಟ್ಟಲ ಬೆಳಗುವುದನ್ನು ಅರಿಯಳು. ಬೆಳಿಗ್ಗೆ ಎದ್ದು ಹಾಲನ್ನವನ್ನುಂಡು ಸಂತೋಷದಿಂದ ಮಂಚದಲ್ಲಿ ಕೂತು ಕಥೆ ಕಟ್ಟಿ ಹೇಳುತ್ತ, ಮನಸ್ಸಿಗೆ ಆನಂದವನ್ನುಂಟು ಮಾಡುತ್ತಿದ್ದಳು. ಇಂತಹ ಮಗಳನ್ನು ಕಳಿಸಿ ಬಾಳುವೆನೆಂತು? ಕರ್ಪೂರದ ಗುಡ್ಡಕ್ಕೆ ಉರಿ ಹತ್ತಿದಂತೆ ಆಯಿತು. ಮಗಳನ್ನು ಒಪ್ಪಿಸಿ ಕೊಡಬೇಕಲ್ಲ ಎಂಬ ತಳಮಳ ತಂದೆಗೆ ಉಂಟು. ಗಂಡಸಾದರೇನು ಕರುಳಿನ ಕೊರಗು

ಬಿಟ್ಟೀತೆ? ಸಣ್ಣತಮ್ಮನಾಗಿದ್ದರೆ ಸರಿಪಾಲು ತಕ್ಕೊಂಡು ನಮ್ಮ ಮನೆಯಲ್ಲೇ ಇರುತ್ತಿದ್ದನಲ್ಲ ಎಂದು ಅಣ್ಣನು ದುಃಖಿಸುತ್ತಾನೆ. ಅವನ ಹೃದಯದಲ್ಲೂ ಸುಣ್ಣದ ಭಟ್ಟಿಗೆ ತಣ್ಣೀರು ಹೊಯ್ದಂತಾಗುವುದು. ಎಷ್ಟು ದುಃಖಪಟ್ಟರೇನು ? ಕೊಟ್ಟ ಹೆಣ್ಣು ಕುಲಕ್ಕೆ ಹೊರತಲ್ಲವೆ? ಮಗಳನ್ನು ಗಂಡನ ಮನೆಗೆ ಕಳುಹಿಸಬೇಕಷ್ಟೆ? ಅದಕ್ಕಾಗಿ ಮಗಳ ಅತ್ತೆಯನ್ನು ಕರೆದು 'ಇವಳಿನ್ನು ನಮ್ಮ ಮಗಳಲ್ಲ ನಿಮ್ಮ ಮಗಳು' ಎಂದು ಹಂದರದಲ್ಲಿರುವ ದೈವದ ಸಾಕ್ಷಿಯಾಗಿ ಮಗಳನ್ನು ಒಪ್ಪಿಸುವರು.

ಕರ್ನಾಟಕ ಜಾನಪದ ಮುಂದೇನು?

— ಮಹಾದೇವಿಬಾಯಿ
— ವಿಜಯಲಕ್ಷ್ಮಿ ಮಾನಾಪುರ

ಇಡೀ ನಾಡು ರಾಷ್ಟ್ರಕವಿ ಕುವೆಂಪುರವರ ಜನ್ಮಶತಮಾನೋತ್ಸವ ವರ್ಷವನ್ನು ಆಚರಿಸುತ್ತಿರುವ ಸಂಭ್ರಮದ ಬೆನ್ನ ಹಿಂದೆಯೇ ಹೆಮ್ಮೆಯ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು "ಕರ್ನಾಟಕ ಜಾನಪದ ಮುಂದೇನು?" ಎಂಬ ವಿಷಯ ಕುರಿತಂತೆ ೨೦೦೪ ಮಾರ್ಚ್ ೧೯ ರಂದು ಹಮ್ಮಿಕೊಂಡಿದ್ದ ಚರ್ಚಾಗೋಷ್ಠಿ ಔಚಿತ್ಯಪೂರ್ಣವೂ ಸಕಾಲಿಕವೂ ಆಗಿತ್ತು.

ಜನಪದ ಬದುಕನ್ನು ಇಡುಗಂಟಾಗಿ ಕಟ್ಟಿಕೊಡುವ ಪ್ರಯತ್ನದಲ್ಲಿ ಚರ್ಚಾಗೋಷ್ಠಿ ಸಫಲವಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಅಂದು ಬೆಳಿಗ್ಗೆಯಿಂದ ಸಂಜೆಯವರೆಗೆ ನಿರಂತರವಾಗಿ ನಡೆದ ವಿಚಾರಗೋಷ್ಠಿ, ಜಾನಪದ ಈವರೆಗೆ ಕ್ರಮಿಸಿದ ದಾರಿ ಮತ್ತು ಮುಂದೆ ಸಾಗಬೇಕಾದ ಹಾದಿ ಕುರಿತಂತೆ ನಾಡಿನ ಜಾನಪದ ವಿದ್ವಾಂಸರು ವಿಚಾರ ವಿನಿಮಯ ಮಾಡಿಕೊಂಡರು. ಜನಪದ ಸಾಹಿತ್ಯ, ಕಲೆ, ಸಂಸ್ಕೃತಿಯ ಸೊಬಗನ್ನು ಮೆರೆದ ಈ ವಿಚಾರಗೋಷ್ಠಿಯಲ್ಲಿ ಹಲವು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಸಂಶೋಧಕರು, ವಿದ್ವಾಂಸರು ಜಾನಪದ ಅಧ್ಯಯನಾಸಕ್ತರು ಅತ್ಯಂತ ಸಡಗರದಿಂದ ಪಾಲ್ಗೊಂಡಿದ್ದು ಗೋಷ್ಠಿಗಳಿಗೆ ಜೀವಕಳೆಯನ್ನು ತಂದಂತಿತ್ತು.

ಸಂಸ್ಥೆಯ ಸಭಾಂಗಣದಲ್ಲಿ ಬೆಳಗ್ಗೆ ಉದ್ಘಾಟನಾ ಸಮಾರಂಭ ಜರುಗಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಜೆ. ಶಶಿಧರ ಪ್ರಸಾದ್ ಅವರು ವಹಿಸಿದ್ದು, ಹೆಸರಾಂತ ಜಾನಪದ ವಿದ್ವಾಂಸರಾದ ಪ್ರೊ. ಬಿ.ಎ. ವಿವೇಕರೈಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಭೆಯ ಆಶಯವನ್ನು ಪ್ರೊ. ಅಂಬಳಿಕೆ ಹಿರಿಯಣ್ಣನವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಬಿಡಿಸಿಟ್ಟರು.

ಮೊದಲಿಗೆ ಸಭೆಯನ್ನು ಉದ್ಘಾಟಿಸಿದ ಪ್ರೊ. ಬಿ.ಎ. ವಿವೇಕ ರೈ ಅವರು ಜಾನಪದ ಕುರಿತ ಹಾಗೆ ಕ್ಷೇತ್ರಕಾರ್ಯಕ್ಕೆ ಒತ್ತುಕೊಟ್ಟು, ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕಾರ್ಯದಿಂದ ದೂರ ಉಳಿದಿದೆ. ಹೀಗಾಗಿ ವಿಫುಲ ಸಾಮಗ್ರಿ

ಇಲ್ಲದೆ ಅಧ್ಯಯನ ಸೊರಗಿದೆ. ಸೈದ್ಧಾಂತಿಕವಾಗಿ, ತಾತ್ವಿಕವಾಗಿ ಮತ್ತು ಬೌದ್ಧಿಕವಾಗಿ ಬಂಡಾಯದ ನೆಲೆಯಲ್ಲಿ ಜಾನಪದವನ್ನು ಗ್ರಹಿಸುವಂತಹ ಪ್ರವೃತ್ತಿ ಕಂಡುಬರುತ್ತಿದೆ. ವಿದ್ವತ್ ಬರಹಗಳಲ್ಲಿ ಬಳಕೆಗೊಳ್ಳುತ್ತಿರುವ ಶಬ್ದಗಳು ಒಂದು ರೀತಿಯಲ್ಲಿ ರಕ್ತಮಾಂಸರಹಿತವಾದ ಕೇವಲ ಹೇಳಿಕೆಗಳಾಗಿ ಮಾತ್ರ ನಿಲ್ಲುವ ಮಟ್ಟಕ್ಕೆ ತಲುಪುವ ಅಪಾಯ ಬಂದೊದಗಿದೆ. ಕ್ಷೇತ್ರಕಾರ್ಯದ ಮೂಲಕ ಕನ್ನಡ ಜಾನಪದ ಅಧ್ಯಯನ ಜಗತ್ತಿಗೆ ಮಾದರಿಯಾಗಬೇಕು, ಆ ಮೂಲಕ ಅದರ ಪ್ರಮುಖ ಲಕ್ಷಣವಾದ ಗಡಿದಾಟಿ ಹೋಗುವ ಪ್ರಕ್ರಿಯೆಗೆ ತೆರೆದಿಡಬೇಕು ಎಂದ ಅವರು ಕನ್ನಡ ಜಾನಪದ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಹೆಚ್ಚಾಗಿ ಅನುವಾದಗೊಳ್ಳದಿರುವ ಕಾರಣ ಕನ್ನಡ ಜಾನಪದ ಹೊರಜಗತ್ತಿಗೆ ಪರಿಚಯ ಆಗಿಲ್ಲ ಎಂದರು. ನಮ್ಮಲ್ಲಿ ಜಾನಪದ ಯೂರೋಪಿನಂತೆ ಮ್ಯೂಸಿಯಂ ವಸ್ತುವಾಗಿ ಉಳಿದಿಲ್ಲ. ಅದು ತನ್ನ ಗಡಿರೇಖೆಗಳನ್ನು ಮೀರಿ ಬಡಾವಣೆ, ಊರು, ಕೇರಿ, ಹಳ್ಳಿ, ವಠಾರ ಹಾಗೂ ಮನೆ ಮನೆಗಳಲ್ಲಿ ಸುತ್ತಾಡುತ್ತಿದ್ದು ಅದು ಮನುಷ್ಯನ ಅಧ್ಯಯನ ಕೂಡ ಆಗಿದೆ. ಆರಂಭದ ಹಂತದಲ್ಲಿ ಅಧ್ಯಯನದ ಶಿಸ್ತಿಗೆ ಯೂರೋಪ್ ಮಾದರಿಗಳನ್ನು ನಾವು ಅನುಸರಿಸಿದ್ದು ನಿಜ, ಅದಕ್ಕಾಗಿ ನಾಚಿಕೆ ಪಡಬೇಕಿಲ್ಲವೆಂದರು.

ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಕರ್ನಾಟಕದಲ್ಲಿ ಜಾನಪದ ಅಧ್ಯಯನ ಹೆಚ್ಚಾಗಿ ನಡೆದದ್ದು ೧೯೬೦-೭೦ ರ ದಶಕದಲ್ಲಿ. ಅಲ್ಲಿಯವರೆಗೆ ವ್ಯಕ್ತಿಗತ ನಡೆಗಳಲ್ಲಿ ನಡೆಯುತ್ತಿದ್ದಂತಹ ಸಂಗ್ರಹ ಮತ್ತು ಅಧ್ಯಯನಕ್ಕೆ ಸಾಂಸ್ಥಿಕವಾದಂತಹ ಒಂದು ರೂಪ ಪ್ರಾಪ್ತವಾಗಿದ್ದು ಹಾಗೂ ಜಾನಪದ ಅಧ್ಯಯನಕ್ಕೆ ಸ್ಥಿರವಾದಂತಹ ಒಂದು ಭದ್ರ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟಂತಹ ಕೀರ್ತಿ ಕನ್ನಡ ಅಧ್ಯಯನ ಸಂಸ್ಥೆಯದಾಗಿದೆ. ಇದರ ಜೊತೆಗೆ ಜಾನಪದದಲ್ಲಿ ಎಂ.ಎ. ಶಿಕ್ಷಣ, ಡಿಪ್ಲೊಮಾ, ಇತರ ಸ್ನಾತಕೋತ್ತರ ಪದವಿಗಳಲ್ಲಿ ಜಾನಪದ ಐಚ್ಛಿಕಗಳು, ಜಾನಪದ ವಸ್ತುಸಂಗ್ರಹಾಲಯ, ಜಾನಪದ ಧ್ವನಿಮುದ್ರಣ, ಜನಪದ ಕಲೆಗಳ ಪರಿವೀಕ್ಷಣೆ ಇವುಗಳ ಮೂಲಕ ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಜಾನಪದ ಅಧ್ಯಯನಕ್ಕೆ ಹೊಸ ತಿರುವನ್ನು ದೊರಕಿಸಿದೆ. ಈ ಹೆಮ್ಮೆಗೆ ಕಾರಣರಾದಂಥವರೆಂದರೆ ಪ್ರೊ. ದೇ.ಜ.ಗೌ, ಹಾ. ಮಾ. ನಾ. ಜೀ. ಶಂ. ಪ. ಹಾಗೂ ಪಿ. ಆರ್. ತಿಪ್ಪೇಸ್ವಾಮಿಯವರು ಎಂದರು.

ಮೈಸೂರು ವಿಶ್ವವಿದ್ಯಾನಿಲಯವು ಸುಮಾರು ಎಪ್ಪತ್ತೈದಕ್ಕೂ ಹೆಚ್ಚು ಜಾನಪದ ಕೃತಿಗಳನ್ನು ಹೊರತಂದು ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡುವುದರ ಮೂಲಕ ಜಾನಪದದ ವಿರಾಟ್ ಸ್ವರೂಪವನ್ನು ಅರಿತುಕೊಳ್ಳು ವುದಕ್ಕೆ ಹಾಗೂ ಸಂಶೋಧನೆಯ ವಿವಿಧ ನೆಲೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಈ ಮೇಲಿನ ಚಟುವಟಿಕೆಗಳು ನೆರವಾಗಿವೆ. ಕಾರಣಾಂತರಗಳಿಂದ ಕೆಲವು ದಶಕಗಳಿಂದ

ನಮ್ಮ ಜಾನಪದದ ಕೆಲಸ ಕಾರ್ಯಗಳು ಸ್ಥಗಿತಗೊಂಡಿದ್ದು ಇದೀಗ ಈ ಚರ್ಚಾಗೋಷ್ಠಿಯ ಮೂಲಕ ಮತ್ತೆ ಅದು ಚಾಲನೆಯನ್ನು ಪಡೆಯುತ್ತಿರುವುದು ಆಶಾದಾಯಕ ಸಂಗತಿ ಎಂದು ಹೇಳಿದರು.

ಜಾನಪದ ಎಂದರೆ ಕೇವಲ ಸಂಗ್ರಹಣೆ, ವಿಭಜನೆ, ಸೂಚಿ ತಯಾರಿಕೆ, ದಾಖಲೀಕರಣ, ವಸ್ತುಸಂಗ್ರಹಾಲಯಗಳ ನಿರ್ಮಾಣವೆಂದು ಪರಿಭಾವಿಸಿದರೆ ತಪ್ಪಾಗುತ್ತದೆ. ಇವೆಲ್ಲವುಗಳನ್ನು ಒಳಗೊಂಡಂತೆ ಇನ್ನೂ ಮುಂದೆ ಹೋಗಿ ಈಗಾಗಲೇ ಶೇಖರಗೊಂಡಿರುವ ಸಾಮಗ್ರಿಯನ್ನು ಅಧ್ಯಯನಕ್ಕೆ ಎತ್ತಿಕೊಂಡು, ಇಂದಿನ ಸಮಾಜ ಚಿಂತಕರು, ಸಂಸ್ಕೃತಿ ಚಿಂತಕರು ಹಾಗೂ ಸಮಾಜ ವಿಜ್ಞಾನಿಗಳು ಇತ್ತ ಗಮನಹರಿಸಬೇಕಾದ ಅನಿವಾರ್ಯತೆ ಇದೆ ಎಂದು ಪ್ರತಿಪಾದಿಸಿದರು.

ಜಾಗತೀಕರಣ ಮುಕ್ತ ಮಾರುಕಟ್ಟೆ, ಗ್ಯಾಟ್ ಒಪ್ಪಂದ, ಪರಿಸರ ಸಮಸ್ಯೆಗಳು ಇವೇ ಮೊದಲಾದ ವಿದ್ಯಮಾನಗಳು ಜಾನಪದ ಅಧ್ಯಯನದ ಮೇಲೆ ಪರಿಣಾಮ ಬೀರುತ್ತಿವೆ. ಇದು ಸಾಂಸ್ಕೃತಿಕವಾದ ವಿದ್ಯಮಾನವಾಗಿರುವ ಹಾಗೆಯೇ ರಾಜಕೀಯ, ಆರ್ಥಿಕವಾದಂತಹ ವಿದ್ಯಮಾನವೂ ಹೌದು. ಈ ಎಲ್ಲಾ ಸಂದಿಗ್ಧಗಳ ನಡುವೆ ಜಾನಪದವಿಜ್ಞಾನವನ್ನು ಇತರ ಪೂರಕ ವಿಜ್ಞಾನಗಳ ಜೊತೆಯಲ್ಲಿ ಒಂದು ಶಿಸ್ತಾಗಿ ಬೆಳೆಸುವಂತಹ ಪ್ರಯತ್ನ ಕೂಡ ಈಗ ನಡೆದಿದೆ. ಶಿಕ್ಷಣರಂಗದಲ್ಲಿ ಜಾನಪದವನ್ನು ಸೀಮಿತ (marginal) ವಿಷಯವಾಗಿ ಪರಿಭಾವಿಸಬೇಕೆ? ಕೇವಲ ಪರಂಪರಾಗತ ಜ್ಞಾನವಾಗಿ ಇದನ್ನು ಉಳಿಸಿಕೊಳ್ಳಬೇಕೆ? ಅಥವಾ ಸಮಕಾಲೀನ ಮತ್ತು ಭವಿಷ್ಯತ್ ಕಾಲೀನ ಮಹತ್ವವಿರುವ ವಿಷಯವಾಗಿ ಇದನ್ನು ಬೆಳೆಸಬೇಕೆ? ಎಂಬಂತಹ ಪ್ರಶ್ನೆಗಳು ಕೂಡ ಇಂದಿನ ವಿದ್ವಾಂಸರ ಮುಂದೆ ಒಂದು ಸವಾಲಾಗಿ ನಿಂತಿದೆ ಎಂದು ತಿಳಿಸಿದರು.

ಜಾನಪದ ವಿಜ್ಞಾನವನ್ನು ಬಹುಶಿಸ್ತೀಯ ನೆಲೆಯಲ್ಲಿ ಅಧ್ಯಯನದ ವಿಷಯವಾಗಿ ಬೆಳೆಸುವಂತಹ ಪ್ರಯತ್ನಗಳು ಕೂಡ ನಡೆದಿವೆ. ಅದೇ ರೀತಿ ಇದನ್ನೊಂದು ಆನ್ವಯಿಕ ವಿಜ್ಞಾನ (Applied Science) ವಾಗಿ ಅಂದರೆ, ಸಸ್ಯಸಂಬಂಧಿ ಔಷಧಿಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ, ಆಧುನಿಕ ರಂಗಭೂಮಿಯಲ್ಲಿ ಅಳವಡಿಸುವಂಥ ಪ್ರಯತ್ನ ನಡೆಯುತ್ತಿದೆ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸುವುದಾದರೆ, ವಸಾಹತುಶಾಹಿ ವ್ಯವಸ್ಥೆಯಿಂದ ಬಿಡುಗಡೆ ಹೊಂದಿದಂತಹ ಬಹುತೇಕ ಎಲ್ಲ ದೇಶಗಳಿಗೂ ಇರುವಂತಹ ಏಕೈಕ ಪ್ರಬಲವಾದಂತಹ ಒಂದು ಅಸ್ತ್ರವೆಂದರೆ ಅದು ಜಾನಪದ. ಇಂಥ ಜಾನಪದ ಅಧ್ಯಯನಕ್ಕೆ ಉಜ್ವಲವಾದ ಭವಿಷ್ಯವಿದೆ ಎನ್ನುವಂಥದ್ದು ಇದರಿಂದ ಮನದಟ್ಟಾಗುತ್ತದೆ. ಪ್ರಸ್ತುತದಲ್ಲಿ ಕನ್ನಡ ಜಾನಪದ ಅಧ್ಯಯನದ ಅನೇಕ ಇಕ್ಕಟ್ಟು ಬಿಕ್ಕಟ್ಟುಗಳನ್ನು ಗಮನಿಸುವುದಾದರೆ ಇಲ್ಲಿ ಅನೇಕ ಸವಾಲುಗಳು ನಮಗೆ ಎದುರಾಗುತ್ತವೆ. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾದರೆ ನಾವು ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಂಡು ಹೊಸ ರೀತಿಯಲ್ಲಿ ಸಜ್ಜಾಗಬೇಕಿದೆ. ಜೊತೆಗೆ ಸವಾಲಿಗನುಗುಣವಾಗಿ

ಹೊಸಪಡೆಯನ್ನು ಕಟ್ಟಬೇಕಾಗಿದೆ. ಮುಖ್ಯವಾಗಿ ಇಂದು ಪ್ರಚಲಿತದಲ್ಲಿರುವಂತಹ ಎಲ್ಲ ಒಲವು-ನಿಲುವುಗಳನ್ನು ಗಮನದಲ್ಲಿಟ್ಟುಕೊಂಡು ಜಾನಪದ ಅಧ್ಯಯನದ ಭವಿಷ್ಯವನ್ನು ಪುನರ್‌ರೂಪಿಸಿಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದ ಕುಲಪತಿಗಳಾದ ಪ್ರೊ. ಜೆ. ಶಶಿಧರಪ್ರಸಾದ್ ಅವರು ಜಾನಪದ ಅಧ್ಯಯನ ವೈಜ್ಞಾನಿಕವಾಗಿ ನಡೆಯಬೇಕೆಂಬುದರ ಬಗ್ಗೆ ಹೆಚ್ಚು ಒತ್ತುಕೊಟ್ಟರು. ಜಾನಪದವನ್ನು ವೈಜ್ಞಾನಿಕವಾಗಿ ನೋಡುವ ಕಾಲಬಂದಿದೆ. ಈ ಜಾನಪದ ಅಧ್ಯಯನ ಸಂಗ್ರಹದ ಹಂತದಲ್ಲಿಯೇ ನಿಂತರೆ ಸಾಲದು. ಯಾವುದೇ ವಿಚಾರವಾಗಲಿ ಅದು ತನ್ನ ಗಡಿಯನ್ನು ಮೀರಿ ಅಧ್ಯಯನಕ್ಕೆ ಒಳಪಡಬೇಕು. ಹಾಗಾಗಿ ಜಾನಪದ ಕೂಡ ತನ್ನ ಗಡಿಮೀರಿ ಸಸ್ಯ ವಿಜ್ಞಾನ, ಭೌತ ವಿಜ್ಞಾನ ಮತ್ತು ವೈದ್ಯ ವಿಜ್ಞಾನಗಳ ಜೊತೆ ಸಂಪರ್ಕ ಕಲ್ಪಿಸಿಕೊಂಡು ಹೊಸ ಹೊಸ ಪ್ರಯೋಗಗಳಿಗೆ ಒಳಪಡಬೇಕು. ಉದಾಹರಣೆಗೆ ತುಂಬೆಸೊಪ್ಪಿನ ರಸ ಹಾವು ಕಡಿತಕ್ಕೆ ಉತ್ತಮವಾದ ಔಷಧಿಯಾಗಿದೆ ಎಂಬುದು ನಮ್ಮ ಜನಪದ ವೈದ್ಯದಲ್ಲಿದೆ. ಇತ್ತೀಚಿನ ಪ್ರಯೋಗಗಳ ಪ್ರಕಾರ ಈ ರಸದಲ್ಲಿ 'ಕೆ'ವಿಟಮಿನ್ ಇರುವುದು ದೃಢಪಟ್ಟಿದ್ದು ಅದು ಹಾವು ಕಚ್ಚಿದ ತಕ್ಷಣ ರಕ್ತ ಹೆಪ್ಪುಗಟ್ಟುವುದನ್ನು ತಡೆಯುವುದಕ್ಕೆ ದಿವ್ಯೌಷಧಿಯಾಗಿದೆ. ಈ ರಸವನ್ನು ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಯ ಕಿವಿ ಅಥವಾ ಮೂಗಿಗೆ ಬಿಟ್ಟರೆ ರಕ್ತ ಹೆಪ್ಪುಗಟ್ಟದೆ ವ್ಯಕ್ತಿ ಅಪಾಯದಿಂದ ಪಾರಾಗುತ್ತಾನೆ. ಹಾಗೆಯೇ ಕಿವಿ ಹಾಗೂ ಮೂಗಿನೊಳಗಿನ ಚರ್ಮ ತೆಳುವಾಗಿರುವುದರಿಂದ ಅವುಗಳ ಮೂಲಕ ಬಿಡುವ ರಸ ಬೇಗ ರಕ್ತದ ಜೊತೆ ಸೇರಿಕೊಳ್ಳುತ್ತದೆ. ಇಂಥ ಮಾಹಿತಿಗಳನ್ನು ಬೇರೆ ಬೇರೆ ವಿಭಾಗದವರ ಜೊತೆ ಹಂಚಿಕೊಂಡು ಸಂಶೋಧನೆಗೆ ತೊಡಗಿದರೆ ಹೆಚ್ಚು ಪ್ರಯೋಜನವಾದೀತು ಎಂದು ಹೇಳಿದರು.

ಅಲ್ಲದೆ ವಿಶ್ವವಿದ್ಯಾನಿಲಯದ ವತಿಯಿಂದ ಪ್ರಾರಂಭವಾಗಿರುವ ವೆಬ್‌ಸೈಟಿಗೆ ಜಾನಪದಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯದ ಪ್ರತಿಯೊಂದು ವಸ್ತು, ಚಿತ್ರ, ಮಾಹಿತಿಗಳನ್ನು ಹಾಕಿ ತನ್ಮೂಲಕ ನಮ್ಮ ವಿವರಗಳು ಜಗತ್ತಿನ ಎಲ್ಲ ಕಡೆಗೆ ಲಭ್ಯವಾಗುವಂತೆ ಮಾಡಬೇಕಾಗಿದೆ. ಹೊರದೇಶದ ಜಾನಪದ ತಜ್ಞರು ಅದನ್ನು ಗಮನಿಸಿ ಜಾನಪದ ವಿಭಾಗದ ಸಂಪರ್ಕವನ್ನಿಟ್ಟುಕೊಳ್ಳಲು ಸಾಧ್ಯವಾಗುತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಸ್ತುತ ಚರ್ಚಾಗೋಷ್ಠಿಯನ್ನು ಎರಡು ಹಂತಗಳಲ್ಲಿ ಹಮ್ಮಿಕೊಂಡಿದ್ದು, 'ಕರ್ನಾಟಕ ಜಾನಪದ ಅಧ್ಯಯನ : ಒಂದು ಹಿನ್ನೋಟ, ಕುರಿತ ಮೊದಲ ಹಂತದ ಗೋಷ್ಠಿಯಲ್ಲಿ ಕಳೆದ ಶತಮಾನದ ಆರಂಭದಿಂದ ಮೊದಲ್ಗೊಂಡು ಇಲ್ಲಿಯವರೆಗೆ ಜಾನಪದ ನಡೆದು ಬಂದ ದಾರಿಯ ಸಿಂಹಾವಲೋಕನವನ್ನು ಮಾಡುವಂತಹ ಒಂದು ಪ್ರಯತ್ನವಿತ್ತು. ಅಧ್ಯಯನದಲ್ಲಿ ನಮ್ಮವರು ಅಳವಡಿಸಿಕೊಂಡ ಮಾದರಿಗಳ

ಗುಣಾವಗುಣಗಳನ್ನು ಒಂದು ಸೂಕ್ಷ್ಮ ವಿಶ್ಲೇಷಣೆಗೆ, ಗಂಭೀರವಾದ ಚರ್ಚೆಗೆ ಒಡ್ಡುವಂತಹ ಪ್ರಯತ್ನವನ್ನು ಮಾಡಲಾಗಿತ್ತು. ಪ್ರಾರಂಭದ ಹವ್ಯಾಸಿರೂಪದ ಸಂಗ್ರಹ, ರಾಷ್ಟ್ರೀಯತೆ ಮತ್ತು ಆಧುನಿಕವಾದದಿಂದ ಪ್ರೇರಿತವಾದ ಯುರೋ ಕೇಂದ್ರಿತವಾದ ಅಧ್ಯಯನಗಳು, ಆಧುನಿಕೋತ್ತರದ ಲೇಪನವಿರುವಂತಹ ಯುರೋ ಅಮೆರಿಕನ್ ಕೇಂದ್ರಿತವಾದ ಅಧ್ಯಯನ, ವಸಾಹತೋತ್ತರ ಮಾದರಿ, ಸ್ತ್ರೀ ಕೇಂದ್ರಿತ ನೆಲೆ, ಜನಪದ ನೆಲೆ, ಲೋಕದೃಷ್ಟಿ ನೆಲೆ, ಬಹುಮುಖಿ ಧೋರಣೆ, ವರ್ತಮಾನದ ದೇಶೀನೆಲೆಯ ಪ್ರಯತ್ನಗಳ ಪ್ರಸ್ತಾಪ ಕೂಡ ಈ ಗೋಷ್ಠಿಯಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

'ಕರ್ನಾಟಕ ಜಾನಪದ ಅಧ್ಯಯನ : ಒಂದು ಮುನ್ನೋಟ' ಕುರಿತ ಗೋಷ್ಠಿಯಲ್ಲಿ ಪ್ರಸಕ್ತ ವಿದ್ಯಮಾನಗಳ ಬೆಳಕಿನಡಿಯಲ್ಲಿ ಜಾನಪದ ಅಧ್ಯಯನ ತಳೆಯಬೇಕಾದ ದೃಷ್ಟಿ ಧೋರಣೆಗಳಾವುವು ಮತ್ತು ಈ ಅಧ್ಯಯನವನ್ನು ಮುನ್ನಡೆಸುವುದಕ್ಕೆ ಅಗತ್ಯವಾದಂತಹ ನಿಶ್ಚಿತದಾರಿಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಯಿತು. ಯಾವ ದಾರಿಯಲ್ಲಿ ಯಾವ ಮಾದರಿಯಲ್ಲಿ ಜಾನಪದ ಅಧ್ಯಯನ ಸಾಗಿದರೆ ಹೆಚ್ಚು ಪ್ರಯೋಜನವಾಗುತ್ತದೆ ಎನ್ನುವುದರ ಕಡೆಗೆ ಗಮನಹರಿಸಲಾಯಿತು.

ಪ್ರಸ್ತುತ ಬೆಳೆವಣಿಗೆ ಮತ್ತು ಒಲವು-ನಿಲುವುಗಳನ್ನು ಹೊಸ ದೃಷ್ಟಿಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು ಎರಡು ಗೋಷ್ಠಿಗಳಲ್ಲಿ ತಲಾ ಒಬ್ಬೊಬ್ಬ ವಿದ್ವಾಂಸರು ವಿಷಯ ಮಂಡಿಸಿದರು. ಟಿಪ್ಪಣಿ ಮಂಡನಾಕಾರರು ವಿಷಯದ ಪರ - ವಿರೋಧ ವಾದಂತಹ ಎರಡೂ ಮಗ್ಗಲುಗಳನ್ನು ಸ್ಪರ್ಶಿಸಿ ಚರ್ಚೆಯನ್ನು ಬೆಳೆಸುವಂತಹ ಪ್ರಯತ್ನ ಮಾಡಿದರು. ವಿಶೇಷವಾಗಿ ಈ ಗೋಷ್ಠಿಗಳಲ್ಲಿ ತಮ್ಮ ಪ್ರತಿಕ್ರಿಯೆಗಳ ಮೂಲಕ ಸಕ್ರಿಯವಾಗಿ ಚರ್ಚೆಗಿಳಿದ ಸಂವಹನಾಸಕ್ತರು ಗೋಷ್ಠಿಗಳಿಗೆ ಜೀವ ತುಂಬಿದರು. ಅಂತಿಮ ಘಟ್ಟದಲ್ಲಿ ಈ ಚರ್ಚೆಯ ಫಲಿತಗಳನ್ನು ಕ್ರೋಢೀಕರಿಸಿ ಭವಿಷ್ಯದ ಅಧ್ಯಯನದ ದಿಕ್ಕು ದೆಸೆಗಳನ್ನು ಅನಾವರಣಗೊಳಿಸುವ ಪ್ರಯತ್ನ ನಡೆಯಿತು.

ಮೊದಲ ಗೋಷ್ಠಿಯಲ್ಲಿ ವಿಷಯಮಂಡಿಸಿದ ಪ್ರೊ. ಆರ್ಬಿಯಸ್ ಸುಂದರಂ ಅವರು ಮಾತನಾಡುತ್ತ ಇಂಗ್ಲಿಷಿನಲ್ಲಿ 'FOLKLORE' ಎಂಬ ಪದಕ್ಕೆ ಚಾಲನೆ ಕೊಟ್ಟಂತಹ ವಿಲಿಯಂಜಾನ್‌ಥಾಮ್ಸ್ ೧೫೦ ವರ್ಷಗಳ ಹಿಂದೆ ಮಾಡಿದಂತಹ ಕೆಲಸ ಪ್ರಪಂಚದಲ್ಲಿ ಜಾನಪದ ವಿಷಯದ ಬಗ್ಗೆ ಆಸಕ್ತಿ ಕೆರಳಿಸುವಂಥ ಒಂದು ಪರಿಸ್ಥಿತಿಯನ್ನು ಕಲ್ಪಿಸಿತು. ಅದಕ್ಕೂ ಮೊದಲು ಈ ಬಗ್ಗೆ ನಮಗೆ ಆಸಕ್ತಿ ಇರಲಿಲ್ಲವೆ? ಎಂದು ಯೋಚಿಸಿದಾಗ ಕರ್ನಾಟಕದಲ್ಲಿ ೧೫೦ ವರ್ಷಗಳ ಹಿಂದೆಯೇ ಜಾನಪದದ ಬಗೆಗೆ ಆಸಕ್ತಿ ತಳೆದ ಇಬ್ಬರು ವ್ಯಕ್ತಿಗಳೆಂದರೆ ಮೆಕಂಜೆ ಮತ್ತು ಹೇಮಚಂದ್ರ. ಕರ್ನಾಟಕದಲ್ಲಿ ಇಡೀ ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಹಳ್ಳಿ ಹಳ್ಳಿಯ ಸಾಂಸ್ಕೃತಿಕ ವಿಷಯಗಳನ್ನು ಸಂಗ್ರಹಮಾಡಿ ಕೈಫಿಯತ್ತುಗಳು ಹೊರಬರಲು ಕಾರಣರಾದವರು ಮೆಕಂಜೆಯವರು. ಕರ್ನಾಟಕದಲ್ಲಿ ೧೬೦ ವರ್ಷಗಳ ಹಿಂದೆ ನಮ್ಮ ಸುತ್ತ ಮುತ್ತ ಇರುವಂತಹ ಐತಿಹ್ಯಗಳನ್ನು ಸಂಗ್ರಹಮಾಡಿ

ಒಂದು ಕಥಾಸಾರವಾಗಿ ದಾಖಲು ಮಾಡಿದಂಥ ಕೀರ್ತಿ ಹೇಮಚಂದ್ರನಿಗೆ ಸಲ್ಲುತ್ತದೆ. ೧೯ನೇ ಶತಮಾನದಲ್ಲಿ ಮುಖ್ಯವಾಗುವಂತಹ ಎರಡು ಹೆಸರುಗಳೆಂದರೆ ಕಿಟ್ಟೆಲ್ ಮತ್ತು ಫ್ಲೀಟ್‌ರವರದು. ಹಾಗೆಯೇ ೨೦ನೇ ಶತಮಾನದ ಪ್ರಾರಂಭಕಾಲದಲ್ಲಿ ನಡೆದ ಜಾನಪದ ಸಂಬಂಧಿ ಸಾಧನೆಗಳನ್ನು ತಳ್ಳಿಹಾಕುವಂತಿಲ್ಲ ಎಂದು ತಿಳಿಸಿದರು.

'ಗರತಿಯ ಹಾಡು' ಕೃತಿಯ ಮುನ್ನುಡಿಯಲ್ಲಿ ಬಿ.ಎಂ.ಶ್ರೀ ಅವರು 'ಜನವಾಣಿ ಬೇರು; ಕವಿವಾಣಿ ಹೂವು' ಎಂಬ ನುಡಿಯ ಮೂಲಕ ನಮ್ಮ ಜನಪದ ಸಾಹಿತ್ಯವನ್ನು 'ಬೇರು' ಎಂದು ಗುರುತಿಸಿರುವುದು ಮಹತ್ವದ ವಿಷಯವಾಗಿದೆ. ಜೊತೆಗೆ ಕೋಲಾರ ಜಿಲ್ಲೆಯ ಲಾವಣಿಗಳನ್ನು ಸಂಗ್ರಹಮಾಡಿ ಪುಸ್ತಕಗಳನ್ನು ಪ್ರಕಟಿಸಿದ ಮಾಸ್ತಿಯವರ ಕೆಲಸ ಕೂಡ ಪ್ರಶಂಸಾರ್ಹ. ಹೀಗಾಗಿ ಸ್ವಾತಂತ್ರ್ಯಪೂರ್ವದ ಕೆಲವು ವಿದ್ವಾಂಸರು ಮಾಡಿದಂತಹ ಕೆಲಸ ಬಹಳ ಮಹತ್ವದ್ದೆನಿಸದಿದ್ದರೂ ಕೂಡ ಅದು ಮೂಲಭೂತವಾದ ಕೆಲಸವೆಂದು ಪರಿಗಣಿಸಬಹುದು. ಆ ಕಾಲದಲ್ಲಿ ಜಾನಪದ ಸಂಗ್ರಹ ಅಥವಾ ಅಧ್ಯಯನಕ್ಕೆ ತೊಡಗಿಸಿಕೊಂಡ ವಿದ್ವಾಂಸರುಗಳು ವೈಯಕ್ತಿಕ ಪದವಿಗಳಿಸುವುದ ಕ್ಕೋಸ್ಕರ ಕೆಲಸ ಮಾಡದೆ, ಮೂಲಸಂಸ್ಕೃತಿಯನ್ನು ಉಳಿಸಿಕೊಳ್ಳುವುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಕರ್ನಾಟಕ ಜಾನಪದದ ಈ ಸಾಧನೆಯು ಭಾರತದ ಗಮನ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿತು. ಅದರಲ್ಲೂ ಇಂಥ ಕೆಲಸ ಮೈಸೂರಿನಲ್ಲಿ ಜರುಗಿದ್ದು ಸಂತೋಷದ ಸಂಗತಿ. ಏಕೆಂದರೆ ಅಮೆರಿಕೆಯಲ್ಲಿ ಜಾನಪದವನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಗುರುತಿಸಲು ಹೊರಟಾಗ ಅನೇಕರ ವಿರೋಧ ವ್ಯಕ್ತವಾಯಿತು. ಇಂಥ ಪರಿಸ್ಥಿತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೇ. ಜವರೇಗೌಡರಂಥವರು ಜಾನಪದ ಅಧ್ಯಯನ ವಿಷಯವನ್ನು ಶಿಕ್ಷಣದಲ್ಲಿ ಅಳವಡಿಸಬಹುದೆಂಬ ಕಲ್ಪನೆಯನ್ನು ಮಾಡಿದ್ದು, ಅನಂತರ ಕಾಲದಲ್ಲಿ ಎಂ.ಎ. ಸ್ನಾತಕೋತ್ತರ ಪಠ್ಯವಿಷಯವನ್ನಾಗಿ ಅಳವಡಿಸಬಹುದೆನ್ನುವ ದೂರದ ಯೋಚನೆ ಯನ್ನು ಮಾಡಿದ್ದು ಒಂದು ಮಹತ್ವದ ಸಂಗತಿ. ಹಾಗಾಗಿ ೩೦ ವರ್ಷಗಳಿಂದಲೂ ಜಾನಪದದಂಥ ಒಂದು ವಿಷಯವು ಅವಿಚ್ಛಿನ್ನವಾಗಿ ಮುಂದುವರಿದು ಕೊಂಡು ಬರುತ್ತಿರುವುದು ಮಹತ್ವದ ಬೆಳವಣಿಗೆ ಎಂದೇ ಹೇಳಬೇಕು. ಅನಂತರದಲ್ಲಿ ಇದು ದೇಶದ ಅನೇಕ ವಿಶ್ವವಿದ್ಯಾಲಯಗಳಿಗೆ ಒಂದು ಮಾದರಿಯಾಯಿತು. ಆದುದರಿಂದ ಜಾನಪದ ಮುಖ್ಯ ವಿಷಯವಾಗಿ ಅಧ್ಯಯನಕ್ಕೆ ಒಳಪಡುತ್ತದೆಯೆಂದರೆ ಅದಕ್ಕೆ ಸ್ಫೂರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೆಂದೇ ಹೇಳಬೇಕು ಎಂದು ಸ್ಪಷ್ಟಪಡಿಸಿದರು.

ಹಾಗೆಯೇ ಕರ್ನಾಟಕದಲ್ಲಿ ವ್ಯಾಪಕವಾಗಿ ಮತ್ತು ಎಲ್ಲ ಕ್ಷೇತ್ರಗಳಲ್ಲಿ ಜಾನಪದದ ಒಳ ವಿಭಾಗಗಳಲ್ಲಿ ಆಗಿರುವಷ್ಟು ಕೆಲಸ ನಮ್ಮ ದೇಶದ ಯಾವ ಭಾಷೆಯಲ್ಲಾಗಲಿ, ರಾಜ್ಯದಲ್ಲಿಯಾಗಲಿ ಆಗಿಲ್ಲವೆಂಬುದು ಸತ್ಯಸಂಗತಿ. ಇವಕ್ಕೆ ಅನೇಕ ಮಹನೀಯರು

ಕಾರಣಕರ್ತರಾಗಿದ್ದಾರೆ. ಹಾಗಾಗಿಯೇ ಜಾನಪದ ಅಧ್ಯಯನ ಸಮಗ್ರರೂಪ ಪಡೆಯುವಲ್ಲಿ ಯಶಸ್ವಿಯಾಗಿದೆ. ಜಾನಪದವೆಂದರೆ ಕೇವಲ ಸಂಗ್ರಹ, ವಿಭಜನೆ ಮಾಡುವುದಲ್ಲ. ಬದಲಾಗಿ ಇದನ್ನು ಕುರಿತು ಆಲೋಚಿಸಬೇಕಾದ ಮತ್ತು ಇದನ್ನು ವಸ್ತುಸಂಗ್ರಹಾಲಯದಲ್ಲಿ ಭದ್ರಪಡಿಸಬೇಕೆನ್ನುವುದು ಮಹತ್ವದ ವಿಷಯ ಎಂದು ವಾದಿಸಿದರು.

ಜಾನಪದದಲ್ಲಿ ಈಗಾಗಲೇ ನಡೆದಿರುವಂತಹ ಕೆಲಸವನ್ನು ಗಮನಿಸಿದರೆ ತೌಲನಿಕ ಅಧ್ಯಯನಗಳ ಕಡೆಗೆ ನಾವು ಹೆಚ್ಚು ಗಮನಹರಿಸಿಲ್ಲವೆಂದು ತೋರುತ್ತದೆ. ಹಾಗೆಯೇ ಶಿಷ್ಟಸಾಹಿತ್ಯವನ್ನು ಸಾಂಸ್ಕೃತಿಕವಾಗಿ ಅಧ್ಯಯನಕ್ಕೆ ಒಳಗುಮಾಡಿಕೊಳ್ಳುವಂತಹ ಹೆಚ್ಚಿನ ಕೆಲಸವನ್ನು ನಾವು ಮಾಡಿಲ್ಲವೆಂಬುದು ಕೂಡ ಗಮನಿಸಬೇಕಾದ ಸಂಗತಿ. ಜಾನಪದ ಸಂಶೋಧನೆಗೆ ಸಂಬಂಧಿಸಿದ ಒಂದು ದೋಷವೆಂದರೆ, ಈವರೆಗೆ ವಿವೇಚನೆ, ವಿಶ್ಲೇಷಣೆ ಕಡೆಗೆ ಒತ್ತುಕೊಟ್ಟು ಅಧ್ಯಯನ ನಡೆದಿದೆಯೇ ಹೊರತು ಮೂಲಭೂತವಾದಂತಹ ಸಾಂಸ್ಕೃತಿಕ ಒಳನೋಟಗಳ ಕಡೆಗೆ ಕಣ್ಣು ಹಾಯಿಸಿಲ್ಲದಿರುವುದು. ಪರಿಸ್ಥಿತಿ ಹೀಗಿರುವಾಗ ಭವಿಷ್ಯದಲ್ಲಿ ಆ ಬಗೆಗೆ ಒಂದು ಹೊಸ ನೋಟವನ್ನು ಬೀರಬೇಕಾದ ಗುರುತರವಾದ ಜವಾಬ್ದಾರಿ ಎಲ್ಲರ ಮೇಲಿದೆ.

ಟಿಪ್ಪಣಿಕಾರರಾದ ಡಾ. ಡಿ.ಬಿ. ನಾಯಕ ಅವರು ಮಾತನಾಡಿ, ಜಾನಪದ ಅಧ್ಯಯನ ಪ್ರಾರಂಭವಾದಂದಿನಿಂದ ಇಂದಿನವರೆಗೂ ಜಾನಪದಕ್ಕೆ ಸಾವಿಲ್ಲ ಎಂಬ ಸ್ಥಿತಿಯನ್ನು ಕಾಯ್ದುಕೊಂಡು ಬಂದಿದ್ದೇವೆ. ಅದೇ ಸಂಪೂರ್ಣ ಸತ್ಯವಲ್ಲ. ಸ್ವಾತಂತ್ರ್ಯಪೂರ್ವದ ದೇಶಿ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬ ಅಭಿಲಾಷೆ ಮುಖ್ಯ ನೆಲೆಯಿಂದ ನಮ್ಮ ಜಾನಪದ ಸಂಗ್ರಹ ಆಗಬೇಕೆನ್ನುತ್ತಾರೆ.

ಬೆಟಗೇರಿ ಕೃಷ್ಣಶರ್ಮರು ೧೯೩೦ರಲ್ಲಿ 'ಹಳ್ಳಿಯ ಹಾಡುಗಳು' ಎನ್ನುವಂಥ ಒಂದು ಲೇಖನ ಬರೆದಂತಹ ಸಂದರ್ಭದಲ್ಲಿ 'ನಮ್ಮ ಜಾನಪದದಲ್ಲಿ ಸೊಗಸಿದೆ, ಅದು ಕಳೆದುಹೋಗ್ತಾಯಿದೆ, ಎಚ್ಚೆತ್ತು ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ ಕಾಯ್ದಿಡಬೇಕು. ಅದನ್ನು ಕಲಿತ ಕನ್ನಡಿಗರೆಲ್ಲರೂ ಕೂಡ ಆ ಕ್ಷೇತ್ರದಲ್ಲಿ ಕೆಲಸ ಮಾಡಲು ಮುಂದಾಗಬೇಕು, ನಶಿಸಿಹೋಗುತ್ತಿರುವುದನ್ನು ಉಳಿಸಿಕೊಳ್ಳುವುದು ಅಕ್ಷರಸ್ಥರ ಕೆಲಸ, ಎಂದು ಹೇಳಿರುವುದನ್ನು ಕಾಣುತ್ತೇವೆ. ಇದರಿಂದ ಪ್ರೇರಿತರಾದ ಅನೇಕ ಜನ ವಿದ್ವಾಂಸರು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಲು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅನೇಕ ಸಂಗ್ರಹಗಳೂ ಕೂಡ ಕಾಣಿಸಿಕೊಂಡವು. ಅಂಥ ಸಂಗ್ರಹಗಳಲ್ಲಿ ಅರ್ಚಕ ಬಿ. ರಂಗಸ್ವಾಮಿಯವರ 'ಹುಟ್ಟಿದಹಳ್ಳಿ' ಹಲಸಂಗಿ ಗೆಳೆಯರ 'ಗರತಿಯ ಹಾಡು' ಸಂಕಲನಗಳು ಹೊರ ಬರಲಿಕ್ಕೆ ಬೇಂದ್ರೆಯವರ ಪ್ರೇರಣೆ ಕಾರಣವಾಗಿದೆ ಎಂಬುದನ್ನು ಮರೆಯುವಂತಿಲ್ಲ.

ಹೀಗಾಗಿ ಈ ಸಂದರ್ಭದಲ್ಲಿ ಶಿಷ್ಟ ಮತ್ತು ಜಾನಪದ ಬೇರೆ ಬೇರೆಯಲ್ಲ. ಇವೆರಡೂ

ಅಷ್ಟೇ ಮುಖ್ಯವಾಗಿರತಕ್ಕಂತಹವು. ನಮ್ಮ ಸಂಸ್ಕೃತಿ ಬರೀ ಶಿಷ್ಟದಲ್ಲಿಲ್ಲ, ಅದು ಜಾನಪದದಲ್ಲಿದೆ. ಇವೆರಡರ ಮುಖಾಂತರವಾಗಿ ಮಾತ್ರ ನಮ್ಮ ದೇಶೀ ಸಂಸ್ಕೃತಿಯನ್ನು ನಾವು ಕಂಡುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಸಾಹಿತಿಗಳು ಕಂಡುಕೊಂಡರು. ಆನಂತರದಲ್ಲಿ ಅಷ್ಟೇ ಮಹತ್ವದ ಕೆಲವು ಸಂಕಲನಗಳು ಕೂಡ ಬಂದವು. 'ಜೀವನ ಸಂಗೀತ, 'ಮಲ್ಲಿಗೆ ದಂಡೆ' ಇವು ಮುಖ್ಯವಾದವು. ಇವಲ್ಲದೆ ೧೯೩೫ರಲ್ಲೇ ದೇವುಡು ಹೊರ ತಂದಿರುವ 'ಕರ್ನಾಟಕ ಸಂಸ್ಕೃತಿ' ಎಂಬ ಕೃತಿ ಮಹತ್ವದ್ದು. ದೇವುಡು ಅವರ ಕೃತಿಯಲ್ಲಿರುವ ಒಂದು ಮಾತೆಂದರೆ 'ಜನಸಾಮಾನ್ಯರ ಭಾವನ ಉಚ್ಛತೆ, ಶೀಲದ ಸ್ವಚ್ಛತೆ, ವಿಚಾರಗಳ ವಿಧಜ್ಞತೆ – ಇವು ಆ ಸಾಹಿತ್ಯದಲ್ಲಿ ಓದುಗರನ್ನು ಅಚ್ಚರಿಗೊಳಿಸುವಂತೆ ಒಡಮೂಡಿಲ್ಲವೆ?' ಎಂಬ ಪ್ರಶ್ನೆಯನ್ನು ಹಾಕುತ್ತಾರೆ. ಅದರ ಜೊತೆಗೆ ಜನ-ಜೀವನದ ಇತಿಹಾಸ, ಸಂಶೋಧಕರಿಗೆ, ಶಿಲಾಲೇಖ- ತಾಮ್ರ ಪಟಗಳಿಗಿಂತಲೂ ಹೆಚ್ಚಿನ ಸಹಾಯದಿಂದ ದೊರೆಯದೆ ಇರಲಾರದು. ಅದಕ್ಕಾಗಿ ಇತಿಹಾಸ ಅಥವಾ ಸಂಸ್ಕೃತಿಯನ್ನು ಕಟ್ಟಿಕೊಡಲು ಈ ಲಿಖಿತ ದಾಖಲೆಗಳಷ್ಟು ಪ್ರಮುಖವಾಗಿರುವಂತಹದ್ದು ಜಾನಪದ ದಾಖಲೆ ಅಥವಾ ಸಾಹಿತ್ಯ ಅನ್ನುವಂತಹ ವಿಚಾರ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

೧೯೭೦ರ ದಶಕದ ನಂತರದಲ್ಲಿ ಜಾನಪದ ಅಧ್ಯಯನ ಬಹಳ ವಿಶಿಷ್ಟವಾದಂತಹ ನೆಲೆಯಿಂದ ಪ್ರಾರಂಭವಾಗಿರುವಂಥದ್ದು. ವಿವೇಕರೈ ಅವರು ಗುರ್ತಿಸಿದ ಹಾಗೆ ಜನಪದರು ಜಾನಪದ ಕ್ಷೇತ್ರವನ್ನು ಪ್ರವೇಶಿಸಿ ಅಕ್ಷರಜ್ಞಾನವನ್ನು ಪಡೆದು ಅವರೇ ಸಂಶೋಧನೆಗೆ ಮುಂದಾಗಿರತಕ್ಕಂತಹ ಹಿನ್ನೆಲೆಯಿಂದ ಜಾನಪದ ಅತ್ಯಂತ ಸೂಕ್ಷ್ಮವಾದುದು. ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಕಂಡುಕೊಳ್ಳುವಂಥ ಅಧ್ಯಯನದ ನೆಲೆಗಳು ಪ್ರಾರಂಭವಾದ ನಂತರದಲ್ಲಿ ವಿದೇಶೀಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಇಂದು ಅಧ್ಯಯನ ಪ್ರಾರಂಭವಾಗಿರುವುದನ್ನು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಆಗಿರತಕ್ಕಂತಹ ಜಾನಪದ ಅಧ್ಯಯನವನ್ನು ನಾವೆಲ್ಲ ಮೆಚ್ಚಿಕೊಳ್ಳಬೇಕು. ವಸ್ತುಸಂಗ್ರಹಾಲಯಗಳು ಇನ್ನೂ ಹೆಚ್ಚಿಗೆ ಆಗಬೇಕು. ಜಾನಪದ ಕ್ಷೇತ್ರದಲ್ಲಿ ಭಾಷಿಕವಾದಂತಹ ಒಂದು ಕೊರತೆಯನ್ನು ಕಾಣುತ್ತಿದ್ದೇವೆ. ಜನಪದ ಸಂಗೀತದ ಅಧ್ಯಯನ, ವೈದ್ಯ ಜಾನಪದದ ಅಧ್ಯಯನ ಹಾಗೂ ಜಾನಪದ ಗ್ರಂಥ ಸೂಚಿಯ ಕೆಲಸ ಕ್ರಮಬದ್ಧವಾಗಿ ನಡೆಯಬೇಕು. ಹಾಗಾಗಿ ನಮಗೆ ನಮ್ಮ ಪರಂಪರೆಯ ಅರಿವಿದ್ದಾಗ ಮಾತ್ರ ಪರಂಪರೆಯ ನಿರ್ಮಾಣ ಸಾಧ್ಯ ಎಂದು ಪ್ರತಿಪಾದಿಸಿದರು.

ಕ್ಯಾತನಹಳ್ಳಿ ರಾಮಣ್ಣನವರು ತಮ್ಮ ಟಿಪ್ಪಣಿಯನ್ನು ಮಂಡಿಸುತ್ತ, ನಿಜವಾಗಿ ಜಾನಪದ ಅಧ್ಯಯನ ಪ್ರಾರಂಭವಾಗಿದ್ದು ೧೨೦ ವರ್ಷಗಳಿಂದೀಚೆಗೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ೧೮೮೫ರಲ್ಲಿ ಇಂಡಿಯನ್ ಆಂಟಿಕ್ವರಿಯ ಒಂದು ಸಂಚಿಕೆಯಲ್ಲಿ ಪ್ರಕಟವಾದಂತಹ ಕನ್ನಡದ ಮೊಟ್ಟಮೊದಲ ಲಾವಣಿ 'ಸಂಗೊಳ್ಳಿ

ರಾಯಣ್ಣನ ದಂಗೆ'. ಇದನ್ನು ಸಂಗ್ರಹಿಸಿ ಇಂಗ್ಲಿಷಿಗೆ ಭಾಷಾಂತರಿಸಿ ಲಿಪ್ಯಂತರ ಸಹಿತ ಪ್ರಕಟಪಡಿಸಿದವರು ಫ್ಲೀಟ್‌ರವರು. ಅದೇ ಸಂಚಿಕೆಯಲ್ಲಿ ಕನ್ನಡದ ಮೊಟ್ಟಮೊದಲ ಅಧ್ಯಯನಶೀಲ ಲೇಖನವಾದ 'A selection of canaries Ballads' ಎಂಬುದನ್ನು ಫ್ಲೀಟ್ ಅವರೇ ಪ್ರಕಟಪಡಿಸಿದರು.

ಬುಕಾನಿನ್ ಎಂಬ ಪ್ರವಾಸಿ ಸಮುದ್ರದ ತಡಿಯಿಂದ ಹೊರಟು ಮೈಸೂರು ಶ್ರೀರಂಗಪಟ್ಟಣವನ್ನೆಲ್ಲ ದಾಟಿ ತಮಿಳುನಾಡನ್ನು ತಲುಪುತ್ತಾರೆ. ಈ ಸಂದರ್ಭದಲ್ಲಿ ಅವರು ಕಂಡ ಕರ್ನಾಟಕ ಜಾನಪದ ಹಾಗೂ ಸಂಸ್ಕೃತಿಗೆ ಸಂಬಂಧಪಟ್ಟ ಅನೇಕ ವಿವರ ಗಳನ್ನು, ಅನುಭವಗಳನ್ನು ಅವರು ತಮ್ಮ ಬೃಹತ್ ಪ್ರವಾಸಕಥನದಲ್ಲಿ ದಾಖಲಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಬಿ.ಎಸ್. ಗದ್ದಗಿಮಠ ಅವರನ್ನು ಮರೆಯಲಿಕ್ಕಾಗದು. ಏಕೆಂದರೆ ಅವರು ರಾತ್ರೋರಾತ್ರಿ ಎತ್ತಿನಗಾಡಿ ಕಟ್ಟಿಕೊಂಡು ತಮ್ಮ ಹೆಂಡತಿ ಜೊತೆ ಕ್ಷೇತ್ರಕಾರ್ಯಕ್ಕೆ ಹೊರಟು ಬಿಡುತ್ತಿದ್ದರು. ಅವರ ಪಿಎಚ್.ಡಿ. ಪ್ರಬಂಧ ಪ್ರಕಟಗೊಂಡ ತರುವಾಯ ಬಹುಶಃ ಇದೊಂದು ಅಧ್ಯಯನಶೀಲ ವಿಷಯ ಎನ್ನುವುದರ ಕಡೆ ನಮ್ಮ ಗಮನಹರಿಯಿತೆಂದು ಕಾಣುತ್ತದೆ. ಹಾಗೆಯೇ ಕನ್ನಡದಲ್ಲಿ ಮೊತ್ತ ಮೊದಲ ಸಲ ಕಾವ್ಯಮೀಮಾಂಸೆಯ ಬಗ್ಗೆ ಯೋಚನೆ ಮಾಡಿದವರು ವೀರಣ್ಣದಂಡೆಯವರು. ಇಂಥ ಸಂದರ್ಭದಲ್ಲಿ ದೇ. ಜವರೇಗೌಡರನ್ನು ಮರೆಯಲಿಕ್ಕಾಗದು.

ಹಿಂದೆ ಕ್ಷೇತ್ರಕಾರ್ಯ ಮಾಡುವವರ ಸಂಖ್ಯೆ ಕಡಿಮೆಯಿತ್ತು. ಸಾಹಿತ್ಯ ವಿಫುಲವಾಗಿ ದೊರೆಯುತ್ತಿತ್ತು ; ಈಗ ಬೇಕಾದಷ್ಟು ಕ್ಷೇತ್ರಕಾರ್ಯ ನಡೆಯುತ್ತಿದೆ, ಎಷ್ಟು ಬೇಕೊ ಅಷ್ಟನ್ನು ಮಾತ್ರ ಮಾಹಿತಿ ಮಾಡಿಕೊಳ್ಳುತ್ತಿದ್ದಾರೆ. ಒಂದು ವಿಷಯವೆಂದರೆ ಅದೊಂದೇ ವಿಷಯ. ಬೇರೆ ವಿಷಯದ ಬಗ್ಗೆ ಯೋಚಿಸುವುದಿಲ್ಲ. ಇನ್ನು ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೇರೆ ಬೇರೆ ಕ್ಷೇತ್ರದಲ್ಲಿ ಹೆಸರು ಮಾಡಿದಂತಹ ವಿದ್ವಾಂಸರು ಬಹಳಷ್ಟಿದ್ದಾರೆ. ಅಂಥ ವಿದ್ವಾಂಸರು ನಮ್ಮ ಜಾನಪದಕ್ಕೆ ವೈಜ್ಞಾನಿಕವಾಗಿ ಹೇಗೆ ಅರ್ಥ ಕಲ್ಪಿಸಬಲ್ಲರು. ಈ ದೆಸೆಯಲ್ಲಿ ನಂಬಿಕೆ ಆಚರಣೆಗಳ ಬಗ್ಗೆ ವೈಜ್ಞಾನಿಕವಾದ ಅಧ್ಯಯನ ಆಗಬೇಕು. ಕನ್ನಡದಲ್ಲಿ ಡಾ. ರಾಮಲಿಂಗಯ್ಯನವರು 'ವೈದ್ಯಕೀಯ ನಂಬಿಕೆಗಳ ವಿಶ್ಲೇಷಣೆ' ಎಂಬ ಒಂದು ಕೃತಿಯನ್ನು ಪ್ರಕಟಿಸಿರುವುದು ಗಮನಾರ್ಹ ವಿಷಯ ಎಂದು ತಮ್ಮ ವಾದವನ್ನು ಮುಂದಿಟ್ಟರು.

ಮೈಲಹಳ್ಳಿ ರೇವಣ್ಣನವರು ಟಿಪ್ಪಣಿ ಮಂಡಿಸುತ್ತ ಜಾನಪದದ ವ್ಯಾಪ್ತಿ ವಿಶಾಲವಾದುದು. ಹಾಗೆ ನೋಡಿದರೆ ನಾವು ಮಾತನಾಡಿದ್ದೆಲ್ಲವೂ ಜಾನಪದವೇ. ಕರ್ನಾಟಕದಲ್ಲಿ ಜಾನಪದವನ್ನು ಬೇರೆ ಬೇರೆ ಆಯಾಮ ದೃಷ್ಟಿಕೋನಗಳಿಂದ ನೋಡುವಂಥ ಕ್ರಮ ಜರುಗಿದೆ. ಸಾಹಿತ್ಯ ಹಾಗೂ ಭೌತಿಕವಾದಂತಹ ವಿಚಾರಗಳು, ಜನಾಂಗಿಕ ಸಂಬಂಧದ ವಿಚಾರಗಳನ್ನು ಕುರಿತ ಹಾಗೆ ಅಧ್ಯಯನ ಸಾಗಿದೆ. ಅವರಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಲೌಕಿಕ ಧಾರ್ಮಿಕ ಕಾವ್ಯಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ಆದರೆ ಅಂಥ ಕಾವ್ಯಗಳನ್ನು ಹಾಡಿದಂತಹ ಕಲಾವಿದರು ಯಾವ ಜನಸಮುದಾಯಕ್ಕೆ ಸೇರಿದವರು ಎನ್ನುವುದನ್ನು ದಾಖಲಿಸುವಾಗ ಅನೇಕ ತಪ್ಪುಗಳು ಜರುಗಿವೆ. ಇದು ಸಾಧಾರಣವಾದಂತಹ ತಪ್ಪೆನಿಸಿದರೂ ಇತಿಹಾಸ ಹಾಗೂ ಸಂಸ್ಕೃತಿಯನ್ನು ಕಟ್ಟಿಕೊಡುವಂತಹ ಸಂದರ್ಭದಲ್ಲಿ ಇದು ದೊಡ್ಡ ಅಪವಾದವಾಗಿಯೇ ಗೋಚರಿಸುತ್ತದೆ. ಆದ್ದರಿಂದ ಇಂಥ ತಪ್ಪುಗಳು ಆಗದಂತೆ ನೋಡಿಕೊಳ್ಳಲು ಕ್ಷೇತ್ರಕಾರ್ಯ ಮಾಡಿ ಸಂಬಂಧಿಸಿದ ವಿಚಾರಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ ನೋಡಬೇಕು ಹಾಗೂ ತೌಲನಿಕವಾದ ಅಧ್ಯಯನ ಮಾಡಬೇಕು ಎಂದರು.

ವೈ.ಸಿ. ಭಾನುಮತಿಯವರು ತಮ್ಮ ಟಿಪ್ಪಣಿಯಲ್ಲಿ ಕರ್ನಾಟಕ ಜಾನಪದ ಅಧ್ಯಯನದ ಹಿನ್ನೋಟದ ಬಗೆಗೆ ಒಂದು ಸ್ಪಷ್ಟ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾದರು. ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಹಿಂದೆ ಹಲವಾರು ವ್ಯಕ್ತಿಗಳು ಸಂಸ್ಥೆಗಳು ಇವೆ. ಈವರೆಗೆ ನಡೆದಂತಹ ಅಧ್ಯಯನದಲ್ಲಿ ಭಾಗಿಯಾದವರೆಂದರೆ ವಿದೇಶಿ ವಿದ್ವಾಂಸರು, ನವೋದಯದ ಸಾಹಿತಿಗಳು, ಆಸಕ್ತ ವ್ಯಕ್ತಿಗಳು, ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳು ಮತ್ತು ಅಕಾಡಮಿಗಳು. ಆಯಾಯ ಕಾಲಘಟ್ಟದಲ್ಲಿ ನಡೆದಂತಹ ಅಧ್ಯಯನ ಮಾದರಿಗಳನ್ನು ಗಮನಿಸಿ ಸಂಗ್ರಹಕಾಲ, ವಿಶ್ಲೇಷಣೆಕಾಲ, ಅಂತರ್‌ಶಾಸ್ತ್ರೀಯ ಅಧ್ಯಯನಕಾಲ ಮತ್ತು ಸಂಸ್ಕೃತಿಯ ಅಧ್ಯಯನಕಾಲ- ಹೀಗೆ ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ೧೫೦೦ ವರ್ಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 'ಕವಿರಾಜಮಾರ್ಗ' ಗ್ರಂಥದಲ್ಲಿ ಮೊತ್ತ ಮೊದಲಿಗೆ ಜಾನಪದಕ್ಕೆ ಮನ್ನಣೆ ಇತ್ತಿರುವುದರ ಜೊತೆಗೆ ಜನಪದರ ಸಹಜ ಪ್ರತಿಭೆಯ ಬಗ್ಗೆ ಉಲ್ಲೇಖ ಕೂಡ ಇದೆ. ಹಾಗೆ ನೋಡಿದರೆ ಇಂಡಾಲಜಿಯ ಅಂಗವಾಗಿ ಜಾನಪದ ಅಧ್ಯಯನ ಪ್ರಾರಂಭವಾಯಿತೆನ್ನಬಹುದು.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಇಂಗ್ಲಿಷ್ ಶಿಕ್ಷಣದ ಪ್ರಭಾವ, ರಾಷ್ಟ್ರೀಯ ದ್ಯೋತಕವಾಗಿ ದೇಶಿ ವಿದ್ವಾಂಸರು ಜನಪದ ಸಾಹಿತ್ಯ ಸಂಗ್ರಹ ಚಿಂತನೆಗಳ ಮೂಲಕ ಜಾನಪದದ ಹತ್ತಿರಕ್ಕೆ ಎಲ್ಲರ ಗಮನಹರಿಯುವಂತೆ ಮಾಡಿದರು. ಆರಂಭದಲ್ಲಿ ಜನಪದ ಗೀತೆಗಳ ಸಂಗ್ರಹಕ್ಕೆ ಹೆಚ್ಚು ಒತ್ತು ದೊರೆಯಿತು. ಉತ್ತರ ಕರ್ನಾಟಕದಲ್ಲಿ ಗದ್ದಗಿಮಠ ಅವರ ಪ್ರೇರಣೆಯಿಂದ ಅನೇಕರು ಆ ಕ್ಷೇತ್ರಕ್ಕೆ ಧುಮುಕಿದರು. ದಕ್ಷಿಣ ಕರ್ನಾಟಕದಲ್ಲಿ ದೇ.ಜ.ಗೌ., ಹಾ.ಮಾ.ನಾ., ಜೀ.ಶಂ.ಪ – ಅವರ ಪ್ರೇರಣೆಯಿಂದ ಅಧ್ಯಯನಾಸಕ್ತರು ಜಾನಪದಕ್ಕೆ ಇಳಿದರು. ಅದರಲ್ಲೂ ಹಾ.ಮಾ.ನಾ. ಅವರ 'ಜಾನಪದ ಸ್ವರೂಪ' ಎಂಬ ಕೃತಿ ಮುಂದಿನ ಜಾನಪದದ ಅಧ್ಯಯನದ ಗತಿಯನ್ನು ನಿರ್ದೇಶಿಸಿತಲ್ಲದೆ ವೈಜ್ಞಾನಿಕ ಅಧ್ಯಯನಕ್ಕೆ ಅದು ಭದ್ರಬುನಾದಿ ಹಾಕಿತು. ಹಾಗೆಯೇ ದೇ. ಜವರೇಗೌಡರು ಏಷ್ಯಾದಲ್ಲಿಯೇ ಇಂದು ಪ್ರಖ್ಯಾತಿ ಪಡೆದಿರುವ ಜಾನಪದ ವಸ್ತುಸಂಗ್ರಹಾಲಯ ಸ್ಥಾಪನೆಗೆ ರೂವಾರಿಯಾದರು.

೧೯೮೦ರ ತರುವಾಯ ಪಾಶ್ಚಾತ್ಯ ಅಧ್ಯಯನದ ವಿಧಾನವನ್ನು ಅನುಸರಿಸುವ ಪ್ರವೃತ್ತಿ ಕರ್ನಾಟಕ ಜಾನಪದ ಅಧ್ಯಯನದಲ್ಲಿ ಕಂಡು ಬಂದಿತು. ೧೯೯೦ರ ದಶಕದಿಂದೀಚೆಗೆ ದೇಶೀ ಸಿದ್ಧಾಂತಗಳನ್ನು ರೂಪಿಸಿಕೊಳ್ಳಬೇಕೆಂಬ ಹಂಬಲ ವ್ಯಕ್ತವಾಗಿ ಆ ನಿಟ್ಟಿನಲ್ಲಿ ವೀರಣ್ಣದಂಡೆಯವರು ಕೆಲಸ ಮಾಡಿದ್ದಾರೆ. ಹಾಗೆಯೇ ಅಂತರ್‌ಶಿಸ್ತಿಗೆ ಸಂಬಂಧಿಸಿದ ಅಧ್ಯಯನಗಳು ಕೂಡ ತಕ್ಕಮಟ್ಟಿಗೆ ನಡೆದಿರುವುದು ಸ್ತುತ್ಯಾರ್ಹ.

ಜಾನಪದ ಪರಿಷತ್ತು, ವಿಶ್ವಕೋಶ, ಜನಪದಕಲೆ ಮೊದಲಾದ ಮಹತ್ವದ ಪ್ರಕಟಣೆಗಳನ್ನು ನೀಡುವುದರ ಜೊತೆಗೆ ಜಾನಪದ ಲೋಕದ ಮೂಲಕ ತನ್ನ ಸಾಧನೆಯ ಗರಿಯನ್ನು ಬಿಚ್ಚಿದೆ. ಅಕಾಡೆಮಿಯ ಪ್ರಕಟಣೆಗಳು ಜಾನಪದ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ನೀಡುವುದರ ಜೊತೆಗೆ ಪರಂಪರಾಗತ ಜ್ಞಾನ-ವಾಙ್ಮಯದ ಪ್ರಚಾರಕ್ಕೆ ಕೂಡ ಒತ್ತಾಸೆ ನೀಡಿದೆ. ಹಾಗೆಯೇ ಜಿಲ್ಲಾವಾರು ನಡೆದಂತಹ ಸಂಗ್ರಹ ಕಾರ್ಯಕ್ಕೆ ಮತ್ತೆ ಚಾಲನೆ ದೊರೆಯಬೇಕಾಗಿದೆ.

ಕ್ಷೇತ್ರಕಾರ್ಯದ ಬಗೆಗೆ ಪ್ರಸ್ತಾಪ ಮಾಡುತ್ತ ಇಂದಿನ ದಿನಗಳಲ್ಲಿ ಕ್ಷೇತ್ರಕಾರ್ಯ ಸ್ಥಗಿತಗೊಂಡಿದೆ ಎಂಬ ಮಾತು ಕೇಳಿ ಬರುತ್ತಿದೆ. ಇದಕ್ಕೆ ಕಾರಣ ಶ್ರಮವಹಿಸಿ ಕ್ಷೇತ್ರಕಾರ್ಯ ಮಾಡಿ ಕೃತಿಗಳನ್ನು ಹೊರತಂದವರ ಬಗೆಗೆ, ಅವರ ಕೆಲಸದ ಬಗೆಗೆ ನಮ್ಮ ವಿದ್ವತ್‌ವಲಯದಲ್ಲಿ ಮಾನ್ಯತೆ ಸಿಗದಿರುವುದು ಎಂದರು.

ಜಾನಪದ ಅಧ್ಯಯನದತ್ತ ಹಿನ್ನೋಟ ಬೀರಿದಾಗ ಅಲ್ಲಿ ಜಾನಪದವು ಒಂದು ವಿಜ್ಞಾನವಾಗಿ ಬೆಳೆದು ನಿಂತಿರುವುದು ರೋಮಾಂಚನವನ್ನುಂಟು ಮಾಡಿದರೂ ಅದರ ಇತಿಮಿತಿಗಳನ್ನು ಕೂಡ ತಳ್ಳಿಹಾಕುವ ಹಾಗಿಲ್ಲ. ಮತ್ತೆ ಮೌಖಿಕ ಸಾಹಿತ್ಯ ಕುರಿತು ನಡೆದಷ್ಟು ವಿಪುಲವಾದ ಅಧ್ಯಯನ ಪ್ರದರ್ಶನಕಲೆಗಳನ್ನು ಕುರಿತಂತೆ ಅಥವಾ ಭೌತಿಕ ಸಂಸ್ಕೃತಿಯನ್ನು ಕುರಿತಂತೆ ನಡೆದಿಲ್ಲವೆಂದರೆ ತಪ್ಪಾಗಲಾರದು. ದಾಖಲೀಕರಣ ಕೂಡ ಇನ್ನಷ್ಟು ನಡೆಯಬೇಕಾಗಿದೆ. ಕೆಲವೊಮ್ಮೆ ೧೯೬೦ ಕ್ಕಿಂತ ಹಿಂದೆ ಬಂದಿರುವ ಗ್ರಂಥಗಳೂ ಅಪ್ರಯೋಜಕ ಎನಿಸಿದರೂ ಅವು ಅಂದಿನ ಆಶೋತ್ತರಗಳಿಗೆ ಅನುಗುಣವಾಗಿ ಅಂದಂದಿನ ಅಧ್ಯಯನ ನಡೆದಿದೆ ಎನ್ನಬಹುದು. ಏಕೆಂದರೆ ಬದುಕು ಎನ್ನುವುದು ನಿಂತ ನೀರಲ್ಲ, ಅದು ಚಲನಶೀಲವಾದುದು. ಜಾನಪದ ಸಂಗ್ರಹಗಳನ್ನು ಹೊಸಕಾಲದ ಚಿಂತನೆಯ ಹಿನ್ನೆಲೆಯಲ್ಲಿ ಮರುಪರಿಶೀಲಿಸುವ ಕಾರ್ಯ ನಡೆಯಬೇಕಿದೆ. ಕರ್ನಾಟಕ ಜಾನಪದ ಅಧ್ಯಯನ ವ್ಯಾಪಕವಾಗಿ ನಡೆದಿದ್ದರೂ ಕೂಡ ನಿರ್ಲಕ್ಷಿತವಾಗಿರುವ ಕೊಂಕಣಿ ಜಾನಪದ, ಕೊಡವ ಜಾನಪದ, ಮುಸ್ಲಿಂ ಜಾನಪದ ಮೊದಲಾದ ಸಮುದಾಯಗಳ ಅಧ್ಯಯನಗಳು ಇನ್ನಷ್ಟು ವಿಸ್ತಾರಗೊಳ್ಳಬೇಕಿದೆ. ಒಟ್ಟಾರೆಯಾಗಿ ಹೇಳುವುದಾದರೆ ಈವರೆಗೆ ನಡೆದಂತಹ ಜಾನಪದ ಅಧ್ಯಯನ ಮಹತ್ವಪೂರ್ಣವಾದುದು ಎನ್ನುವುದರಲ್ಲಿ ಎರಡು ಮಾತಿಲ್ಲ ಎಂದರು.

ಜಯಲಕ್ಷ್ಮೀ ಸೀತಾಪುರ ಅವರು ಜಾನಪದ ಅಧ್ಯಯನದ ಮೂಲ ಕ್ಷೇತ್ರ ಕಾರ್ಯ.

ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಸಂಗ್ರಹಕಾರ ಒಂದೇ ಪ್ರಕಾರ ಅಥವಾ ವಿಷಯವನ್ನು ಸಂಗ್ರಹಿಸುತ್ತೇನೆಂದು ಸೀಮಿತ ಆಸಕ್ತಿಯಿಂದ ಕ್ಷೇತ್ರಕ್ಕಿಳಿಯದೆ, ವಕ್ತೃವಿನಿಂದ ದೊರೆಯುವ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿಕೊಂಡ ನಂತರ ಸಂಗ್ರಹಕಾರ ತನಗೆ ಬೇಕಾದ ಮಾಹಿತಿಯನ್ನು ವಿಂಗಡಿಸಿಕೊಳ್ಳಬೇಕಾದುದು ಅಗತ್ಯ. ಹೀಗೆ ಅಧ್ಯಯನ ಮಾಡಿದಾಗ ಮಾತ್ರ ಕ್ಷೇತ್ರಕಾರ್ಯದ ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವೆಂದು ಕ್ಷೇತ್ರಕಾರ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಮಾತನಾಡಿದರು.

ಎ.ಸಿ. ಲಲಿತ ಅವರು ಮಾತನಾಡಿ ಕರ್ನಾಟಕ ಜಾನಪದ ಎಂಬುದು ಒಂದು ಪ್ರಾದೇಶಿಕ ಪರಿಕಲ್ಪನೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ೧೯೬೬ರ ವೇಳೆಗೆ ಹಾ.ಮಾ.ನಾ. ಅವರಿಂದ 'ಜಾನಪದ' ಎಂಬ ಪದ ರೂಪುಗೊಂಡಿತು. ಪ್ರಾದೇಶಿಕ ನೆಲೆಗಳಲ್ಲಿ ಕನ್ನಡ ಜಾನಪದ ಅಧ್ಯಯನ ರೂಪುಗೊಂಡು ಆ ಕ್ಷೇತ್ರವನ್ನು ಮತ್ತಷ್ಟು ವೈಜ್ಞಾನಿಕ ಅಧ್ಯಯನಕ್ಕೆ ಎಡೆಮಾಡಿಕೊಟ್ಟಿರುವುದಲ್ಲದೆ ವಿವಿಧ ಸಾಂಸ್ಥಿಕ ನೆಲೆಯಲ್ಲಿ ಅದು ರೂಪುಗೊಂಡು ಭೌಗೋಳಿಕವಾಗಿ, ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ ಮತ್ತು ಸಾಹಿತ್ಯಿಕವಾಗಿ ಶ್ರೀಮಂತಗೊಂಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಟ್ರಸ್ಟ್, ಕನ್ನಡ ಸಾಹಿತ್ಯ ಪರಿಷತ್ತು, ಉಡುಪಿಯ ಜನಪದ ರಂಗಕಲೆಗಳ ಪ್ರಾದೇಶಿಕ ಕೇಂದ್ರ, ಜಾನಪದ ಲೋಕ, ಮಂಜೂಷ ಮೊದಲಾದ ಕೇಂದ್ರಗಳು - ದಾಖಲಾತಿ ಕೇಂದ್ರಗಳಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹ ಎಂದು ತಿಳಿಸಿದರು.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬುಡಕಟ್ಟು ಅಧ್ಯಯನವನ್ನು ಪ್ರಮುಖವಾಗಿ ಉಲ್ಲೇಖಿಸಬೇಕಾಗಿದೆ. ಜಾನಪದದ ಇತರ ಪ್ರಕಾರಗಳಂತೆಯೇ ಬುಡಕಟ್ಟು ಕ್ಷೇತ್ರವು ವಿವಿಧ ಅಧ್ಯಯನಾಸಕ್ತರನ್ನು ತನ್ನತ್ತ ಆಕರ್ಷಿಸುತ್ತಲೇ ಬಂದಿದೆ. ಯಾವುದೇ ಸಂಸ್ಕೃತಿಯ ಅಧ್ಯಯನ ಪರಿಪೂರ್ಣತೆಯನ್ನು ಸಾಧಿಸಬೇಕಾದಲ್ಲಿ ಬುಡಕಟ್ಟು ಸಂಸ್ಕೃತಿಯ ಅಧ್ಯಯನಗಳು ಅದಕ್ಕೆ ಸೇರ್ಪಡೆ ಗೊಳ್ಳಲೇಬೇಕು. ಈ ನಿಟ್ಟಿನಲ್ಲಿ ನೋಡಿದರೆ ಇಲ್ಲಿಯೂ ಕೂಡ ವಿದೇಶಿ ವಿದ್ವಾಂಸರೇ ಮೇಲುಗೈ ಸಾಧಿಸಿದ್ದಾರೆ. ಇದರಿಂದ ಪ್ರೇರಿತರಾದ ದೇಶೀ ವಿದ್ವಾಂಸರು ಯಶಸ್ವಿಯಾಗಿ ಕರ್ನಾಟಕ ಬುಡಕಟ್ಟುಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಮುಖ್ಯವಾಗುತ್ತದೆ. ಕರ್ನಾಟಕ ಜಾನಪದ ಅಧ್ಯಯನವನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಶ್ರೀಮಂತಗೊಳಿಸುವುದರಲ್ಲಿ ನಮ್ಮ ಮಾಧ್ಯಮದವರ ಪಾತ್ರ ಕೂಡ ಹಿರಿದಾದುದು. ಆಕಾಶವಾಣಿ, ದೂರದರ್ಶನ, ದಿನಪತ್ರಿಕೆಗಳು ನಿರಂತರವಾಗಿ ಜಾನಪದ ಸಂಬಂಧಿ ಚಿಂತನೆಗಳನ್ನು ಜನತೆಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿವೆ.

ವ.ನಂ. ಶಿವರಾಮು ಅವರು ತಮ್ಮ ಟಿಪ್ಪಣಿಯನ್ನು ಮಂಡಿಸುತ್ತ ಕರ್ನಾಟಕ ಜಾನಪದದ ಬಗೆಗೆ ಮೊದಲು ಕೆಲಸ ಮಾಡಿದವರು ವಿದೇಶಿ ವಿದ್ವಾಂಸರಲ್ಲ,

ಭಾರತೀಯರಲ್ಲ, ಸ್ಥಳೀಯರಾದ ಶ್ರೀಕಂಠೇಶಗೌಡ ಹಾಗೂ ಮಧುರಚನ್ನರು. ಆದರೆ ಜಾನಪದ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ವಿದ್ವಾಂಸರು ಇದನ್ನೆಲ್ಲ ಪ್ರಸ್ತಾಪ ಮಾಡದಿರುವುದು ಅವರಿಗೆ ಬಗೆದ ದ್ರೋಹವೆಂದು ಅಭಿಪ್ರಾಯಪಟ್ಟರು.

ನವೋದಯ ಸಂದರ್ಭದ ಕನ್ನಡದ ಸಾಹಿತಿಗಳು ಜಾನಪದ ಸಂಗ್ರಹಕ್ಕೆ ಉತ್ತಮ ಕೊಡುಗೆಯನ್ನು ನೀಡಿದ್ದಾರೆ. ಬೇಂದ್ರೆಯವರಿಂದ ಹಿಡಿದು ಆ ಸಂದರ್ಭದ ಎಲ್ಲ ಕವಿಗಳು ಜಾನಪದ ಕ್ಷೇತ್ರದತ್ತ ಒಲವು ತೋರಿಸಿದರು. ಈ ಕಾರ್ಯ ನಡೆಯದಿದ್ದರೆ ಇಂದು ಜಾನಪದ ಇಷ್ಟೊಂದು ಹುಲುಸಾಗಿ ಬೆಳೆಯುತ್ತಿರಲಿಲ್ಲವೇನೊ ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಿದ್ಧಾಂತಗಳನ್ನನುಸರಿಸಿ ಕೆಲಸ ಮಾಡಿರುವ ಅಂಬಳಿಕೆ ಹಿರಿಯಣ್ಣ ಅವರ ಹಾಗೆಯೇ ದೇಶೀ ಸಂಸ್ಕೃತಿಯಲ್ಲಿ ಜಾನಪದವನ್ನು ಕಟ್ಟಿಕೊಡುವಂತಹ ಕಾರ್ಯದಲ್ಲಿ ಅರವಿಂದ ಮಾಲಗತ್ತಿಯವರನ್ನು ಸ್ಮರಿಸಬಹುದು. ಕ್ಷೇತ್ರಕಾರ್ಯದ ಬಗ್ಗೆ ಮಾತನಾಡುತ್ತ ಈಗಾಗಲೇ ಜಾನಪದದ ಎಲ್ಲ ಪ್ರಕಾರಗಳನ್ನು ನಮ್ಮ ವಿದ್ವಾಂಸರು ಗುರುತಿಸಿದ್ದಾರೆ. ಅದರಲ್ಲಿಯೂ ಸಂಧ್ಯಾರೆಡ್ಡಿಯವರು ಹೊಸ ಹೊಸ ಪ್ರಕಾರಗಳ ಬಗ್ಗೆ ಕೆಲಸ ಮಾಡಿದ್ದಾರೆ. ಆದರೆ ಕ್ಷೇತ್ರಕಾರ್ಯ ಸ್ಥಗಿತಗೊಂಡಿರುವ ಕಾರಣ ನಾವಿಂದು ಕ್ಷೇತ್ರಕಾರ್ಯಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಮುಂದೇನಾದರೂ ಪುರುಸೊತ್ತಿದ್ದರೆ ವಿಶ್ಲೇಷಣೆ ಮಾಡುವ ಕೆಲಸವನ್ನು ಕೈಗೆತ್ತಿಕೊಳ್ಳಬಹುದು ಎಂದರು.

ಈ ಚರ್ಚಾಗೋಷ್ಠಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ ಪದ್ಮಾಶೇಖರ್ ಅವರು ಮಹಿಳಾ ಸಂವೇದನೆಗೆ ಹೆಚ್ಚು ಒತ್ತು ನೀಡಿ ಮಾತನಾಡಿದರು. ಜಾನಪದದಲ್ಲಿ ಸ್ತ್ರೀಸಂಬಂಧವಾದ ವಿಚಾರಗಳು ಅವಜ್ಞೆಗೆ ಒಳಗಾಗಿದೆ. ಜಾನಪದದಲ್ಲಿ ಸಕಾರಾತ್ಮಕವಾಗಿ ಮಹಿಳೆಯ ಧ್ವನಿಯನ್ನು ಗುರುತಿಸುವ ಕಾರ್ಯ ನಡೆದಿಲ್ಲ. ಒಂದು ವೇಳೆ ನಡೆದಿದ್ದರೂ ಅದು ಮಹಿಳೆಯರಿಂದಲೇ ಆಗಿದೆ. ಆದುದರಿಂದ ಪುರುಷರು ಈ ಬಗೆಗೆ ದೃಷ್ಟಿ ಹಾಯಿಸುವ ಗುರುತರವಾದ ಕೆಲಸವನ್ನು ಮಾಡಬೇಕಾಗಿದೆ ಎಂದರು.

ಎಂ.ಎನ್. ತಳವಾರ ಅವರು ತಮ್ಮ ಪ್ರತಿಕ್ರಿಯೆಯಲ್ಲಿ ಈಗಾಗಲೇ ಜಾನಪದದ ಕೆಲಸ ಸಾಕಷ್ಟು ನಡೆದಿದ್ದರೂ ಆಗ ಬೇಕಾದ ಕೆಲಸವಿನ್ನೂ ಬಹಳಷ್ಟಿದೆ. ಸಂಗ್ರಹಕಾರ್ಯ ಪೂರ್ಣವಾಗಿಲ್ಲ, ವಿಶ್ಲೇಷಣೆಯಂತೂ ಪ್ರಾರಂಭದ ಹಂತದಲ್ಲಿಯೇ ಇದೆ ಎಂದರು.

ಹಾ. ತಿ. ಕೃಷ್ಣೇಗೌಡ ಅವರು ಪ್ರತಿಕ್ರಿಯಿಸುತ್ತಾ ಜಾನಪದದಲ್ಲಿ ಸಮಗ್ರವಾದ ಕ್ಷೇತ್ರಕಾರ್ಯ ನಡೆದಿಲ್ಲ. ಮುಂದೆ ಒಂದು ಯೋಜನೆಯನ್ನು ಹಾಕಿಕೊಂಡು ಆ ಮೂಲಕ ಕ್ಷೇತ್ರಕಾರ್ಯಕ್ಕೆ ಮುಂದಾದರೆ ಜಾನಪದವನ್ನು ಅಭ್ಯಸಿಸಿದಂತಹ ವಿದ್ಯಾರ್ಥಿಗಳಿಗೆ ಇದರಿಂದ ಸಹಾಯವಾಗುತ್ತದೆಂಬ ಕಳಕಳಿಯನ್ನು ವ್ಯಕ್ತಪಡಿಸಿದರು.

ಆರ್. ರಾಮಕೃಷ್ಣ ಅವರು ಜಾನಪದವನ್ನು ಆನ್ವಯಿಕ ದೃಷ್ಟಿಕೋನದಿಂದ ನೋಡಿದಾಗ ಅಲ್ಲಿ ಭಾಷಿಕ ನೆಲೆಯಿಂದ ಆಗಿರುವಂತಹ ಅಧ್ಯಯನ ಬಹಳ ಕಡಿಮೆ. ಸಾಂದರ್ಭಿಕ ಸಿದ್ಧಾಂತದ ಬಗೆಗೆ ಕೆಲಸ ನಡೆದಿಲ್ಲವೆಂದೇ ಹೇಳಬಹುದೆಂದು ಪ್ರತಿಕ್ರಿಯಿಸಿದರು.

ವಾಸುದೇವಮೂರ್ತಿಯವರು ಜಾನಪದ ವಿದ್ಯಾರ್ಥಿಗಳ ಭವಿಷ್ಯದ ಬಗೆಗೆ ಆತಂಕವನ್ನು ವ್ಯಕ್ತಪಡಿಸುತ್ತ, ಇದರ ಬಗೆಗೆ ವಿಶ್ವವಿದ್ಯಾನಿಲಯ ಹಾಗೂ ಸರ್ಕಾರ ಗಮನಹರಿಸಬೇಕೆಂದು ಅಲವತ್ತುಕೊಂಡರು. ಅಲ್ಲದೆ ಕ್ಷೇತ್ರಕಾರ್ಯವನ್ನು ಕೈಗೊಳ್ಳುವಾಗ ಜಾನಪದ ವಿದ್ವಾಂಸರು ವಿದ್ಯಾರ್ಥಿಗಳ ಸಮೂಹವನ್ನು ರಚಿಸಿ ಅವರ ಮೂಲಕ ಕ್ಷೇತ್ರಕಾರ್ಯ ಮಾಡಿಸಿದರೆ ಜಾನಪದ ಪಠ್ಯಸಂಗ್ರಹವಾದಂತಾಗುತ್ತದೆ ಹಾಗೂ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜೇನಹಳ್ಳಿ ಸಿದ್ಧಲಿಂಗಪ್ಪ ಅವರು ಮಾತನಾಡಿ ಜಾನಪದ ಸಂಗ್ರಹ ಕಾರ್ಯದ ಬಗ್ಗೆ ಹೆಚ್ಚು ಹೆಚ್ಚು ಮಾತುಗಳು ಕೇಳಿ ಬರುತ್ತಿವೆ, ಈಗಾಗಲೇ ಸಂಗ್ರಹಕಾರ್ಯ ಮಾಡಿ ಪುಸ್ತಕ ಪ್ರಕಟಿಸಿದ ಮಹನೀಯರು ಆ ಪುಸ್ತಕಗಳನ್ನು ಮಾರಾಟಮಾಡಲಾಗದೆ ಅನುಭವಿಸುತ್ತಿರುವ ಪಾಡು ಯಾರಿಗೂ ಬರಬಾರದೆಂದು ನೊಂದು ನುಡಿದರು.

‘ಕರ್ನಾಟಕ ಜಾನಪದ ಅಧ್ಯಯನ : ಒಂದು ಹಿನ್ನೋಟ’ ಎಂಬ ಗೋಷ್ಠಿಯ ಅಧ್ಯಕ್ಷ ಭಾಷಣ ಮಾಡಿದ ಪ್ರೊ. ಸುಧಾಕರ ಅವರು ಜಾನಪದ ವಿದ್ವಾಂಸರು ಹಲವು ಸಿದ್ಧಾಂತ ಪುಸ್ತಕಗಳನ್ನಿಟ್ಟುಕೊಂಡು ಮೇಜಿನ ಮೇಲೆ ಕುಳಿತು ಕುರ್ಚಿಕ್ಷೇತ್ರ ಕಾರ್ಯಮಾಡಿ ದೊಡ್ಡ ದೊಡ್ಡ ವಿದ್ವಾಂಸರೆನಿಸಿಕೊಳ್ಳುತ್ತಿದ್ದಾರೆ. ಆದರೆ ಇಂದು ಅಹರ್ನಿಶಿ ಹಳ್ಳಿ ಹಳ್ಳಿ ತಿರುಗಿ ಕ್ಷೇತ್ರಕಾರ್ಯ ಮಾಡುತ್ತಿರುವ ಸಂಗ್ರಹಕಾರರಿಗೆ ಮಾನ್ಯತೆ ಇಲ್ಲದಂತಾಗಿದೆ. ಜಾನಪದ ಕ್ಷೇತ್ರ ಕಾರ್ಯದ ಸ್ಥಿತಿ ಇಂದು ‘ಅಟ್ಟಿಕ್ಕಿದವಳಿಗಿಂತ ಆರಿಸಿಕ್ಕಿದವಳೇ ಹೆಚ್ಚು’ ಎನ್ನುವಂತಾಗಿದೆ. ಆದುದರಿಂದ ಶ್ರಮವಹಿಸಿ ಕ್ಷೇತ್ರಕಾರ್ಯ ಮಾಡಿದ ಸಂಗ್ರಹಕಾರರಿಗೆ ಮಾನ್ಯತೆ ದೊರೆಯುವಂತಾಗಬೇಕು. ಹಾಗೆಯೇ ವಿದ್ವಾಂಸರು ದಲ್ಲಾಳಿಗಳಿಂದ ಮಾಹಿತಿ ತರಿಸಿಕೊಂಡು ಪುಸ್ತಕ ಪ್ರಕಟಿಸುವುದರ ಬದಲು ಸ್ವತಃ ಖುದ್ದಾಗಿ ಕ್ಷೇತ್ರಕಾರ್ಯ ಮಾಡಬೇಕೆಂದು ಕರೆಕೊಟ್ಟರು.

ಅಪರಾಹ್ನದ ಗೋಷ್ಠಿಯಲ್ಲಿ ‘ಕರ್ನಾಟಕ ಜಾನಪದ ಅಧ್ಯಯನ ಒಂದು ಮುನ್ನೋಟ’ ಕುರಿತ ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ಹಿ.ಚಿ. ಬೋರಲಿಂಗಯ್ಯನವರು ವಹಿಸಿದ್ದು, ವೀರಣ್ಣದಂಡೆಯವರು ವಿಷಯ ಮಂಡಿಸಿದರು. ವೀರಣ್ಣದಂಡೆಯವರು ಮಾತನಾಡಿ ಜಾನಪದವನ್ನು ಬಲ್ಲ ವಿದ್ವಾಂಸರು ಜಾನಪದದ ಬಗೆಗೆ ಮಾತನಾಡುವುದು ಬೇರೆ, ಆದರೆ ಆ ಕ್ಷೇತ್ರದಿಂದ ಹೊರಗಿರುವ ಜನರು ಜಾನಪದದ ಬಗೆಗೆ ತಳೆದಿರುವ ಒಲವು ನಮಗೆ ಬಹಳ ಮುಖ್ಯವಾಗುತ್ತದೆ. ಉದಾಹರಣೆಗಾಗಿ ಜಿ.ಬಿ. ಜೋಷಿಯವರು ಚಂದ್ರಶೇಖರಕಂಬಾರರ ‘ಉತ್ತರ ಕರ್ನಾಟಕ ಜನಪದ ರಂಗಭೂಮಿ’ ಕೃತಿಯ ಬಗ್ಗೆ ಹೀಗೆ ಬರೆಯುತ್ತಾರೆ. “ಕನ್ನಡದ ಜನಪದ ರಂಗಭೂಮಿ ನಮ್ಮ ಸಂಸ್ಕೃತಿಯ ಉಳಿದ ಅನೇಕ ಸಂಸ್ಥೆಗಳಂತೆ ಇಂದು ಅನವಸ್ಥೆಗೆ ಈಡಾಗಿದೆ. ಈ ರಂಗಭೂಮಿ ನಮ್ಮ ಜೀವನಕ್ಕೆ ಅವಶ್ಯಕವಾದ ಕಾಲವೊಂದಿತ್ತು. ಕವಿ, ಕಲಾವಿದ, ಸಹೃದಯರ ಜೀವಂತಸಂಬಂಧದಲ್ಲಿ ಹುಟ್ಟಿ ಬೆಳೆಯಬೇಕಾದರೆ ಈ ಕಲೆ ಇಂದು ತನ್ನ ಅಸ್ತಿತ್ವಕ್ಕಾಗಿ ರಾಷ್ಟ್ರೀಯ ಯೋಜನೆಯ

ಸಹಾಯ ಬೇಡುವ ಹಂತಕ್ಕೆ ಬಂದಿದೆ" ಎಂದು ಖೇದ ವ್ಯಕ್ತಪಡಿಸಿದರು. ಇಲ್ಲಿ ಜಾನಪದದ ಜೊತೆಗೆ ಸಂಬಂಧವುಳ್ಳವರ ಕಾಳಜಿಗಿಂತ ಅದರ ಹೊರಗಿರುವವರ ಕಾಳಜಿಯನ್ನು ಗಮನಿಸಿದರೆ ಜಾನಪದದ ಅರಿವು ಬಹಳ ವ್ಯಾಪಕವಾಗಿ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ತಿಳಿಸಿದರು.

ಮೊದಲಿನಿಂದಲೂ ದೇಶೀಯತೆಯ ಬಗೆಗೆ ಕಾಳಜಿವುಳ್ಳಂತಹ ತಮಗೆ ೧೯೮೨ರಲ್ಲಿಯೇ 'ಜನಪದ ಕಾವ್ಯಮೀಮಾಂಸೆ' ಬರೆಯಲು ಸಾಧ್ಯವಾಯಿತು. ಇದರ ಉದ್ದೇಶ ಭಾರತೀಯ ಕಾವ್ಯಮೀಮಾಂಸೆಯ ಚೌಕಟ್ಟಿನೊಳಗಡೆ ಜನಪದರೇನಾದರೂ ತಮ್ಮ ಕಾವ್ಯದ ಬಗೆಗೆ ಶಾಸ್ತ್ರೀಯವಾದ ಆಲೋಚನೆಯನ್ನು ಹರಿಯಬಿಟ್ಟಿದ್ದಾರೆಯೇ ಎನ್ನುವುದನ್ನು ಶೋಧಿಸುವುದಾಗಿತ್ತು. ಏಕೆಂದರೆ ಭಾರತೀಯ ಕಾವ್ಯಮೀಮಾಂಸೆ ಶಬ್ದ ಅರ್ಥಗಳನ್ನು ಬಿಟ್ಟು ಬೇರೆ ಕಡೆಗೆ ತನ್ನ ದೃಷ್ಟಿ ಹಾಯಿಸುವುದಿಲ್ಲ. ಹಾಗಾದರೆ ಕಾವ್ಯದೊಳಗಡೆ ಶಬ್ದ ಅರ್ಥಗಳನ್ನು ಬಿಟ್ಟು ಬೇರೆ ಏನೂ ಇರುವುದಿಲ್ಲವೇ? ಎಂಬ ಪ್ರಶ್ನೆ ಕಾಡಿದ್ದರ ಪರಿಣಾಮವಾಗಿ ಅದಕ್ಕೆ ಉತ್ತರ ಹುಡುಕುವುದಕ್ಕೆ ಜಾನಪದದ ಮೊರೆ ಹೋಗಬೇಕಾಯಿತು ಎಂದು ಸ್ಪಷ್ಟಪಡಿಸಿದರು.

ಜಾನಪದದ ಅಭ್ಯಾಸದಿಂದಾಗಿ ನಮ್ಮಲ್ಲಿ ಕುದುರುವಂತಹ ದೇಶೀ ಸಂಸ್ಕೃತಿಯ ದೃಷ್ಟಿಯಲ್ಲಿ ಬೇರೆಯದನ್ನು ನೋಡುವಂತಹ ಭಿನ್ನ ಆಲೋಚನಾ ಕ್ರಮ ಬೆಳೆಸಿಕೊಂಡರೆ ಇಡೀ ಕನ್ನಡದ ಸಾಹಿತ್ಯ ಮತ್ತು ಸಂಸ್ಕೃತಿಯೊಳಗಡೆ ಹೊಸ ಆಲೋಚನಾ ದೃಷ್ಟಿ ಬೆಳೆಯುವುದಕ್ಕೆ ಸಾಧ್ಯವಿದೆ. ದೇಶೀವಾದ ಅನ್ನುವಂತಹ ಪರಿಕಲ್ಪನೆ ಭಾರತಕ್ಕೆ ಅಥವಾ ಕರ್ನಾಟಕಕ್ಕೆ ಮಾತ್ರ ಸೀಮಿತವಾದುದಲ್ಲ. ಬದಲಾಗಿ ಹೊಸ ಹೊಸ ಆಲೋಚನೆಗಳು ಎಲ್ಲೆಲ್ಲಿ ಹುಟ್ಟಿಕೊಳ್ಳುತ್ತವೆಯೋ ಅವೆಲ್ಲವೂ ದೇಶೀಯವಾಗಿರುತ್ತವೆ. ಅಲ್ಲಿ ದೇಶೀಯವಸ್ತು ಮತ್ತು ಸಂಸ್ಕೃತಿಯ ಜೊತೆಗೆ ಅಲ್ಲಿಯ ವಿದ್ವಾಂಸನ ಒಡನಾಟದಿಂದ ಆ ಹೊಳಹುಗಳು ಹೊಳೆದಿರುತ್ತವೆ. ಹಾಗಾಗಿ ಜಾನಪದಕ್ಕೆ ದೇಶೀಯತೆ ಬಹಳ ಮುಖ್ಯವಾದ ಆಲೋಚನೆಯನ್ನು ತಂದುಕೊಡುತ್ತದೆ.

ಟಿಪ್ಪಣಿ ಮಂಡನಾಕಾರರಾದ ಅಭಯಕುಮಾರ್, 'ಕರ್ನಾಟಕ ಜಾನಪದ ಅಧ್ಯಯನ: ಒಂದು ಮುನ್ನೋಟ' ಕುರಿತು ಮಾತನಾಡುತ್ತ ಇದುವರೆಗೆ ಕರ್ನಾಟಕ ಜಾನಪದ ಅಧ್ಯಯನದಲ್ಲಿ ವಿವರಣಾತ್ಮಕ ಅಧ್ಯಯನ ಮಾದರಿಯನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ೧೯೮೮ರ ನಂತರದ ಕಾಲ ಕರ್ನಾಟಕ ಜಾನಪದ ಅಧ್ಯಯನದ ಇತಿಹಾಸದಲ್ಲಿ ಮಹತ್ವದ ಬದಲಾವಣೆಯ ಘಟ್ಟ ಎಂಬುದನ್ನು ಗುರುತಿಸಬಹುದು ಎಂದರು. ಮುಂದುವರೆದು ಮಾತನಾಡುತ್ತ ಅದುವರೆವಿಗೆ ನಮ್ಮದೇ ಆದಂತಹ ಮಾನದಂಡ, ಯೋಜನೆ, ಯೋಚನೆಗಳ ಮೂಲಕ ಸಂಗ್ರಹಿಸಿ ಅನ್ವಯಿಸುವ ಮತ್ತು ವಿಶ್ಲೇಷಿಸುವ ಪ್ರಯತ್ನ ಒಂದು ಕಡೆ ನಡೆದಿದ್ದರೆ ೧೯೮೮ರಲ್ಲಿ ಅಂತಾರಾಷ್ಟ್ರೀಯ ಕಮ್ಮಟಗಳ ಮೂಲಕ ಜಾನಪದ ಸಿದ್ಧಾಂತಗಳನ್ನು ಅರಿತುಕೊಂಡು ಆ ಮೂಲಕ

ತಮ್ಮದೇ ಆದ ನೆಲೆಯಲ್ಲಿ ಜಾನಪದವನ್ನು ವಿಶ್ಲೇಷಣೆ ಮಾಡುವಂತಹ ಇನ್ನೊಂದು ಘಟ್ಟ ಆರಂಭವಾಯಿತು. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿವರಣಾತ್ಮಕ ಅಧ್ಯಯನವನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು : ೧. ಪಿಎಚ್.ಡಿ.ಗಾಗಿ ನಡೆದಂತಹ ಸಂಶೋಧನೆಗಳು, ೨. ಸಿದ್ಧಾಂತಗಳನ್ನು ಅಳವಡಿಸಿಕೊಂಡು ನಮ್ಮ ದೇಶೀಯ ವಸ್ತುವನ್ನು ಅನ್ವಯಗೊಳಿಸಿ ವಿಶ್ಲೇಷಿಸುವಂತಹದ್ದು.

ಯಾವುದೇ ದೇಶದ ಸಿದ್ಧಾಂತಗಳನ್ನು ಯಥಾವತ್ತಾಗಿ ಜಾನಪದಕ್ಕೆ ಅನ್ವಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ನಮ್ಮ ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಬಳಸಿಕೊಂಡು ಸಂಸ್ಕೃತಿಯ ನೆಲೆಯಲ್ಲಿ ಸಿದ್ಧಾಂತಗಳನ್ನಿಟ್ಟು ಸಂಸ್ಕೃತಿಯ ವಿಶ್ಲೇಷಣೆ ಮಾಡುವಂತಹದ್ದು ಕರ್ನಾಟಕ ಜಾನಪದ ಇತಿಹಾಸದ ಸಂದರ್ಭದಲ್ಲಿ ಬಹಳ ಮುಖ್ಯವಾಗುತ್ತದೆ. ಹಾಗಾಗಿ ನಾವು ವಿಸ್ತೃತ ಅಧ್ಯಯನವನ್ನು ಕೈಬಿಟ್ಟು ಮುಂದೆ ನಿರ್ದಿಷ್ಟವಾದಂತಹ ವಿಷಯವನ್ನು ಆರಿಸಿಕೊಂಡು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಬೇಕಾದ ಆವಶ್ಯಕತೆಯಿದೆ. ಯಾವುದೇ ಜಾನಪದ ಪ್ರಕಾರದ ಭಾಷಿಕ ಮೌಲ್ಯವಷ್ಟೇ ಪ್ರಮುಖವಾಗದೆ ಅದರ ಸಾಂಸ್ಕೃತಿಕ, ಚಾರಿತ್ರಿಕ ಮಹತ್ವವನ್ನು ಅರಿತುಕೊಳ್ಳುವುದರ ಮೂಲಕ ನಮ್ಮ ಮುಂದಿನ ಜಾನಪದ ಅಧ್ಯಯನದ ದಾರಿ ಸಾಗಬೇಕಾಗಿದೆ ಎಂದು ತಿಳಿಸಿದರು.

ಜಾನಪದ ಇವತ್ತು ಜಾಗತೀಕರಣಕ್ಕೆ ಒಳಗಾಗುತ್ತಿದೆ ಎಂಬ ಮಾತು ಅಕ್ಷರಶಃ ಸತ್ಯ. ಇದಕ್ಕೆ ರೈತರ ಆತ್ಮಹತ್ಯೆ ಪ್ರಕರಣ ಪುರಾವೆಯನ್ನು ಒದಗಿಸುತ್ತದೆ. ಇವತ್ತು ಕರ್ನಾಟಕಕ್ಕೆ ಬಂದಿರುವ ಅಂತಾರಾಷ್ಟ್ರೀಯ ಮಾರುಕಟ್ಟೆಯ ಬೀಜಗಳನ್ನು ನಮ್ಮ ಭೂಮಿಯಲ್ಲಿ ಬಿತ್ತಿ ಬೆಳೆ ತೆಗೆಯುತ್ತಿರುವುದರಿಂದ ದಿನಗಳೆದಂತೆ ಅದು ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು ಇದ್ದಕ್ಕಿದ್ದ ಹಾಗೆ ಬೆಳೆ ನಾಶವಾಗುತ್ತದೆ. ಹಾಗಾಗಿ ಸ್ಥಳೀಯವಾಗಿ ಸಿಗುವ ಅನೇಕ ತಳಿಗಳನ್ನು ಬಳಸಿಕೊಂಡು ಬೆಳೆ ಬೆಳೆದು ಭೂಮಿಯನ್ನು ಸಂರಕ್ಷಣೆ ಮಾಡುವುದರ ಮೂಲಕ ಜಾಗತೀಕರಣಕ್ಕೆ ಮುಖಾಮುಖಿಯಾಗಬೇಕಾಗಿದೆ. ಇದು ಕೇವಲ ಕೃಷಿಗೆ ಮಾತ್ರವಲ್ಲದೆ ಪ್ರತಿಯೊಂದು ವಿಷಯಕ್ಕೂ ಅನ್ವಯಿಸುತ್ತದೆ.

ಟಿ. ಗೋವಿಂದರಾಜು ಅವರು ಟಿಪ್ಪಣಿ ಮಂಡಿಸುತ್ತಾ ಈ ಹೊತ್ತು ಜಾನಪದ ನಶಿಸುತ್ತಿದೆ ಅದನ್ನು ಸಂರಕ್ಷಿಸಬೇಕೆಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ಪ್ರಸ್ತುತಕ್ಕೆ ಅನ್ವಯವಾಗದಿರುವಂತಹ ನಂಬಿಕೆ ಆಚರಣೆಗಳು ಜಾನಪದದಲ್ಲಿವೆ. ಅವು ಜನರನ್ನು ಇನ್ನಷ್ಟು ಆದಿಮಕ್ಕೆ ಕೊಂಡೊಯ್ಯುತ್ತವೆ. ಇಂತಹ ಸಂಕ್ರಮಣ ಸಂದರ್ಭದಲ್ಲಿ ಕೆಲವು ಆಚರಣೆಗಳನ್ನು ಉಳಿಸಿಕೊಳ್ಳಬೇಕೇ? ಬೇಡವೇ ? ಎಂಬುದನ್ನು ಮುಂದೆ ಜಾನಪದದ ಅಧ್ಯಯನ ಕೈಗೊಳ್ಳುವ ವಿದ್ವಾಂಸರು ಇದರತ್ತ ಗಮನಹರಿಸಿ ಜನರಿಗೆ ತಿಳಿವಳಿಕೆ ಮೂಡಿಸುವುದು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಕ್ಷೇತ್ರ ಕಾರ್ಯವೆಂದರೆ ಯಾವುದೋ ಒಂದು ಬುಡಕಟ್ಟನ್ನು ಹುಡುಕಿಕೊಂಡು ಹೋಗಿ ಸಂಗ್ರಹಿಸುವುದು ಎಂಬ ಅಭಿಪ್ರಾಯವೊಂದಿತ್ತು. ಆದರೀಗ ನಮ್ಮಲ್ಲಿಯೇ ಇರುವ ನಮ್ಮ ಸುತ್ತಮುತ್ತಲಿನ ಹೊಸ ಸಂಗತಿಗಳನ್ನು ಜಾನಪದೀಯ ನೆಲೆಯಲ್ಲಿ ಗುರುತಿಸುವಂತಹ ಕೆಲಸ ನಡೆಯಬೇಕು. ಇವತ್ತು ಕ್ಷೇತ್ರಕಾರ್ಯಕ್ಕೆ ಹೋಗಲು ಜನರು ಹೆದರುತ್ತಾರೆ. ಕಾರಣವೆಂದರೆ ಕಲಾವಿದರು ಕೂಡ ಸಂಗ್ರಹವಾದ ಮಾಹಿತಿಯನ್ನು ತೆಗೆದುಕೊಂಡು ಹೇಗೋ ಹಣ ಮಾಡಿಕೊಳ್ಳುತ್ತಾರೆಂಬ ತಪ್ಪುಗ್ರಹಿಕೆ ಹೊಂದಿದ್ದು ಮಾಹಿತಿಯನ್ನು ನೀಡುವುದಿಲ್ಲ. ಹಾಗಾಗಿ ಸಂಗ್ರಹಕಾರರಿಗೆ ವಿಶ್ವವಿದ್ಯಾಲಯಗಳು ಧನಸಹಾಯ ನೀಡುವುದರ ಮೂಲಕ ಕ್ಷೇತ್ರಕಾರ್ಯ ಕೈಗೊಳ್ಳಲು ಅನುವು ಮಾಡಿ ಕೊಡಬೇಕು. ಇಲ್ಲದಿದ್ದರೆ ಇವತ್ತಿನ ಮಾದರಿಗಳು ಕೂಡ ಕೈ ತಪ್ಪಿ ಹೋಗುವುದರಲ್ಲಿ ಅನುಮಾನವಿಲ್ಲ ಎಂದರು.

ಎಂ.ಎಸ್. ಶೇಖರ್ ಅವರು ಟಿಪ್ಪಣಿ ಮಂಡಿಸುತ್ತ ಜಾನಪದದ ಬಗೆಗಿನ ಚಿಂತನೆ ಚರ್ಚೆ ಅಂದರೆ ಅದು ಬೇರೇನೂ ಆಗಿರದೆ ಬದುಕಿನ ಬಗೆಗಿನ ಚಿಂತನೆ ಚರ್ಚೆಯೇ ಆಗಿದೆ. ಸಾಮಾಜಿಕ ನ್ಯಾಯ, ಸಾಮಾಜಿಕ ನೆಲೆಯಲ್ಲಿ ಜಾನಪದವನ್ನು ಅರ್ಥೈಸುವಂಥ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಜಾನಪದ ಪುನರ್‌ಸೃಷ್ಟಿಯಾಗಬೇಕಾದ ಅಗತ್ಯವಿದೆ. ಜಾನಪದವನ್ನು ಸಂಸ್ಕೃತಿಯೊಳಗಡೆ, ಬದುಕಿನೊಳಗಡೆ ಉಳಿಸಿಕೊಳ್ಳಬೇಕೇ ವಿನಹ ವಿದ್ವತ್‌ನಿಂದ ಅದನ್ನು ಉಳಿಸಲು ಸಾಧ್ಯವಿಲ್ಲ. ಮಾತೃತ್ವ ಹೃದಯ ಗರ್ಭವನ್ನು ಕೂಡಿಸುವ ಮನಸ್ಸು ಎಲ್ಲಿ ಇರುವುದಿಲ್ಲವೊ ಅಲ್ಲಿ ಜಾನಪದ ಮಾತ್ರವಲ್ಲ, ಬದುಕಿನ ಎಲ್ಲ ಹೊಳಹುಗಳೂ ಕೂಡ ಸರ್ವನಾಶವಾಗುತ್ತವೆ. ಆ ದೃಷ್ಟಿಯಿಂದ ಜಾನಪದದ ಚಿಂತನೆಯಾಗಲಿ, ಸಂಸ್ಕೃತಿಯ ಚಿಂತನೆಯಾಗಲಿ, ಸಾಹಿತ್ಯದ ಬಗ್ಗೆಯಾಗಲಿ ಒಟ್ಟಾರೆ ಇಡೀ ಬದುಕನ್ನು ಕಟ್ಟುವ ಕ್ರಿಯೆ ಮುಂದೇನು? ಎನ್ನುವಾಗ ಇಂದಿನ ಮತ್ತು ನಮ್ಮೊಳಗಿನ ಕಟುಸತ್ಯವನ್ನು ನೋಡದಿದ್ದರೆ ಯಾವುದೂ ಉಳಿಯುವುದಿಲ್ಲ. ಈ ಜಾನಪದ ಎಂಬುದು ಗರಿಕೆ ಸಂಸ್ಕೃತಿ. ಇದು ಯಾವಾಗಲೂ ಚಿಗುರುತ್ತದೆ. ಇದಕ್ಕೆ ನಾಶವೆಂಬುದೇ ಇಲ್ಲವೆಂದು ಜಾನಪದದ ಅಳಿವು-ಉಳಿವಿನ ಬಗೆಗೆ ತಮ್ಮದೇ ನಿಲುವನ್ನು ತಳೆದರು.

ಕೆ.ಆರ್. ಸಂಧ್ಯಾರೆಡ್ಡಿಯವರು ಮಾತನಾಡಿ ಕರ್ನಾಟಕದಲ್ಲಿ ಜಾನಪದ ಅಧ್ಯಯನ ಮೊದಮೊದಲು ಯಾವ ಉದ್ದೇಶದಿಂದ ಹುರುಪಿನಿಂದ ಆರಂಭವಾಯಿತೋ. ಅದು ಇಂದು ಜಡ್ಡುಗಟ್ಟಿ ನಿಂತಿದೆ. ಹಿಂದೆ ಹೆಚ್ಚು ಜನಪದ ಸಾಹಿತ್ಯ ಸಂಗ್ರಹಕ್ಕೆ ಮಹತ್ವ ಕೊಟ್ಟು, ಜಾನಪದದ ಇನ್ನೊಂದು ಮುಖದ ಸಂಗ್ರಹವನ್ನು ಕಡೆಗಣಿಸಿದರು. Folklife, Folkliterature ಎರಡೂ ಸೇರಿ ಜಾನಪದವಾಗುವುದರಿಂದ ಬದುಕು ಮತ್ತು ಜನಪದ ಜೀವನದ ಪುನರುಜ್ಜೀವನಕ್ಕೆ ಹೆಚ್ಚು ಗಮನ ಕೊಡಬೇಕಾದ ನಿರ್ಣಾಯಕ ಘಟ್ಟದಲ್ಲಿ ನಾವಿದ್ದೀವಿ ಎಂದು ಹೇಳಿದರು.

ಇಂದು ಜಾಗತೀಕರಣ ಎನ್ನುವುದು ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಮ್ಮ ಸಂಸ್ಕೃತಿಯ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿದೆ. ಜಾನಪದ ಎನ್ನುವುದು ಕೇವಲ ಅಧ್ಯಯನದ ವಿಷಯವಲ್ಲ ಎನ್ನುವುದನ್ನು ಮನವರಿಕೆ ಮಾಡಿಕೊಂಡು ಆ ಮೂಲಕ ಸಂಸ್ಕೃತಿಯ ಎಲ್ಲ ಮುಖಗಳನ್ನು ಸಂಗ್ರಹಿಸಬೇಕಾಗಿದೆ. ಅದಕ್ಕಾಗಿ ವಿಶ್ಲೇಷಣೆ, ವಿಮರ್ಶೆಯನ್ನು ಹತ್ತು ವರ್ಷಗಳವರೆಗೆ ನಿಲ್ಲಿಸಿ ಸಾಮೂಹಿಕವಾಗಿ ಒಂದು ಯೋಜನೆಯನ್ನು ರೂಪಿಸಿಕೊಂಡು ವ್ಯವಸ್ಥಿತವಾಗಿ ಸಂಗ್ರಹಕಾರ್ಯಕ್ಕೆ ತೊಡಗಬೇಕು. ಇಲ್ಲದಿದ್ದರೆ ಎಲ್ಲವೂ ಕೈಗೆ ಸಿಗದೆ ಕಣ್ಮರೆಯಾಗುವುದರಲ್ಲಿ ಅನುಮಾನವಿಲ್ಲ. ಕೇವಲ ಗ್ರಾಮೀಣ ಜನರಲ್ಲಿರುವುದು ಮಾತ್ರವೇ ಜಾನಪದವೆಂಬ ತಪ್ಪು ಕಲ್ಪನೆಯನ್ನು ಹೋಗಲಾಡಿಸುವ ಕೆಲಸವಾಗಬೇಕು ಎಂದು ಕ್ಷೇತ್ರಕಾರ್ಯಕ್ಕೆ ಹೆಚ್ಚು ಮಹತ್ವಕೊಟ್ಟು ಮಾತನಾಡಿದರು.

ಶ್ರೀಪಾದ್‌ಭಟ್ ಅವರು ಮಾತನಾಡುತ್ತ, ಕರ್ನಾಟಕದಲ್ಲಿ ಜಾನಪದ ಅಧ್ಯಯನ ೧೯೭೦ರ ದಶಕದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಂಡು ೧೯೮೦ರ ದಶಕದ ಪೂರ್ವದಲ್ಲಿ ಕುಂಠಿತಗೊಳ್ಳುತ್ತಾ ಸಾಗಿ ಉತ್ತರಾರ್ಧದ ತರುವಾಯ ಸ್ತಬ್ಧವಾಗಿಬಿಟ್ಟಿತು. ಇದಕ್ಕೆ ಆಡಳಿತಾತ್ಮಕವಾದ ಕಾರಣಗಳು ಒಂದು ಕಡೆಯಾದರೆ, ಬದಲಾದ ಅಧ್ಯಯನದ ಧೋರಣೆಗಳು ಮತ್ತೊಂದು ಕಾರಣ. ಅದರಂತೆ ವಿಶ್ಲೇಷಣೆ ಮುಖ್ಯವೆಂದು ಬಗೆದು, ಕ್ಷೇತ್ರ ದತ್ತಾಂಶ ಸಂಗ್ರಹಣೆಗೆ ಮಹತ್ವ ನೀಡದಿದ್ದುದು ಈ ಹಿಂದಿನ ಅಧ್ಯಯನ ಧೋರಣೆಯ ಮುಖ್ಯ ಕೊರತೆಯಾಗಿದೆ. ಆಯಾಯ ಕಾಲದ ಅಗತ್ಯ ಪೂರೈಕೆ ಒಂದು ಶಿಸ್ತಿನ ಬೆಳವಣಿಗೆ ಹಾಗೂ ಉಳಿವಿಗೆ ಪ್ರಮುಖ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಹಿಂದಿನವರು ಸೃಷ್ಟಿಸಿದ ತಲೆಮಾರು ಇಂದಿನ ಬೇಡಿಕೆ ಮತ್ತು ಅಗತ್ಯಗಳನ್ನು ಪೂರೈಸುತ್ತಿದೆಯೇ? ಎನ್ನುವುದು ಜಾನಪದ ಮುನ್ನೋಟದ ಮುಖ್ಯಪ್ರಶ್ನೆಯಾಗಿದೆ. ಇಂದು ಅಸ್ತಿತ್ವದಲ್ಲಿರುವ ಪೀಳಿಗೆ ಮುಂದಿನ ಅಧ್ಯಯನ ಪರಂಪರೆಯನ್ನು ಆಯಾಕಾಲದ ಸನ್ನಿವೇಶವನ್ನು ಎದುರಿಸುವಂತೆ ಸೃಷ್ಟಿಸಿ ರೂಪಿಸದಿದ್ದರೆ, ಯಾವುದೇ ಶಿಸ್ತು ಕಾಲಪ್ರವಾಹದಲ್ಲಿ ಉಳಿಯಲಾರದು. ಇನ್ನು ಹತ್ತಿಪ್ಪತ್ತು ವರ್ಷಗಳ ತರುವಾಯ ಕರ್ನಾಟಕದ ಜಾನಪದ ಅಧ್ಯಯನದ ಸ್ಥಿತಿ ಏನಾಗಬಹುದೆಂದು ಊಹಿಸಿದರೆ ಈ ಪ್ರಶ್ನೆಗೆ ಗುಣಾತ್ಮಕ ಉತ್ತರ ಖಂಡಿತ ದೊರೆಯುವುದಿಲ್ಲ. ಇದಕ್ಕನುಗುಣವಾಗಿ ಇಂದಿನ ಅಧ್ಯಯನ ವಿಧಾನಗಳೂ ರೂಪುಗೊಳ್ಳಬೇಕಾದ ಜರೂರಿದೆ.

ಇಂದು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರು ಖಾಸಗಿ ಸಂಸ್ಥೆಗಳಲ್ಲಿ, ಸಂಘಸಂಸ್ಥೆಗಳಲ್ಲಿ ವ್ಯಷ್ಟಿ ಪ್ರಯತ್ನ ಮಾಡುತ್ತ ಸಾಗುತ್ತಿದ್ದಾರೆ. ಹೀಗಾಗಿ ಇಂಥ ಅಧ್ಯಯನಗಳಿಗೆ ಏಕಸೂತ್ರತೆ ಇಲ್ಲದಂತಾಗಿದೆ. ವೈಯಕ್ತಿಕ ಸಂಪರ್ಕ, ಆಸಕ್ತಿಗಳ ಹೊರತು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಅಧ್ಯಯನದ ಬಗೆಗೆ ಪರಸ್ಪರ ವಿಚಾರವಿನಿಮಯ ನಡೆಯುತ್ತಿಲ್ಲ. ಇದರಿಂದ ಮಾಹಿತಿ ತಂತ್ರಜ್ಞಾನದ ಈ

ಯುಗದಲ್ಲಿ ಜಾನಪದ ಅಧ್ಯಯನ ಮ್ಯೂಸಿಯಂನ ಅಧ್ಯಯನ ವಸ್ತುವಾಗುತ್ತಿದೆಯೇನೋ ಎಂಬ ಗುಮಾನಿ ಕಾಡುತ್ತಿದೆ. ಇದಕ್ಕಾಗಿ ಮುಂದೆ ನಾವು ಅನುಸರಿಸಬೇಕಾದ ಕ್ರಮಗಳೆಂದರೆ - ಕರ್ನಾಟಕದ ಜಾನಪದ ಅಧ್ಯಯನದ ವೆಬ್‌ಸೈಟ್ ತೆರೆದು ಅದರಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಜಾನಪದದ ಯಾವ ಯಾವ ವಿಷಯಗಳಿವೆ, ಆ ಬಗೆಗೆ ಪಠ್ಯಕ್ರಮದ ವಿವರವನ್ನು ಅಳವಡಿಸುವುದು. ಹಾಗೆಯೇ ಕರ್ನಾಟಕ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ ಪ್ರಮುಖ ವಿದ್ವಾಂಸರ ಚಿತ್ರಸಹಿತ ಮಾಹಿತಿ ಒದಗಿಸುವುದು. ಜೊತೆಗೆ ಕರ್ನಾಟಕ ಜಾನಪದ ಉಗ್ರಾಣದ ಮಾಹಿತಿ ನೀಡುವುದು. ಮೈಸೂರು ವಿಶ್ವವಿದ್ಯಾನಿಲಯ, ಜಾನಪದಲೋಕ, ಮಂಜೂಷ ಕೇಂದ್ರ, ಚಿತ್ರದುರ್ಗ, ಪುತ್ತೂರು ವಸ್ತು ಸಂಗ್ರಹಾಲಯಗಳ ಬಗೆಗೆ ಮಾಹಿತಿ ಒದಗಿಸುವುದಲ್ಲದೆ ಇದುವರೆಗಿನ ಪಿಎಚ್.ಡಿ.ಗಳ ಗಂಭೀರವಾದ ಮಾಹಿತಿಯನ್ನು ನೀಡುವುದು. ಅಲ್ಲದೆ ವಿಶ್ವವಿದ್ಯಾನಿಲಯಗಳಿಗೆ ಸೇರುವ ವಿದ್ಯಾರ್ಥಿಗಳಿಗೆ ಬೋಧನೆಗೆ ಮುಂಚೆಯೇ Folklore orientation workshop ನ ಬಗೆಗೆ ಮನವರಿಕೆ ಮಾಡಿಕೊಡುವುದು. ಜಾನಪದ ಪದವಿ ಪಡೆದ ಬಳಿಕವೂ ಆರ್.ಆರ್.ಸಿ., ಫಾಸಿಲ್ಸ್, ಎನ್.ಎಫ್.ಎಸ್.ಸಿ. ಮೊದಲಾದ ಪ್ರತಿಷ್ಠಾನಗಳಲ್ಲಿ ಲಭ್ಯವಿರುವ ಫೆಲೋಶಿಪ್ ಬಗೆಗೆ ವಿದ್ಯಾರ್ಥಿಗಳಿಗೆ ಮಾಹಿತಿ ದೊರಕಿಸಿಕೊಡುವುದು. ಕೊನೆಯದಾಗಿ ಯಾವುದೇ ಸಂಶೋಧನೆಗೆ ಅಕ್ಷರರೂಪ ಖಂಡಿತ ಅಂತ್ಯವಲ್ಲ. ಅದು ಸಮಾಜಕ್ಕೆ ಒಳಿತಾಗುವಂತೆ ಲಭ್ಯವಾಗಬೇಕು. ಆ ಹಿನ್ನೆಲೆಯಲ್ಲಿ ಜನಪದ ವೈದ್ಯ, ಅಡುಗೆ, ತಂತ್ರಜ್ಞಾನ ಇತ್ಯಾದಿಗಳಿಗೆ ಸಂಬಂಧಿಸಿದ ಸಂಶೋಧನೆಗಳು ಸಮಾಜಕ್ಕೆ ದೊರಕುವ ಹಾಗೆ ಸಕ್ರಿಯ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. ವಿಜ್ಞಾನದ ಸಂಶೋಧನೆಗಳನ್ನು ಸಿ.ಎಫ್.ಟಿ.ಆರ್.ಐ. ನಂಥ ಸಂಸ್ಥೆಗಳು ಆವಿಷ್ಕಾರ ಮಾಡಿ ಸಮಾಜಕ್ಕೆ ವಾಪಸ್ಸು ನೀಡುವಂತೆಯೇ ಜಾನಪದ ಸಂಶೋಧನೆಗಳು ಕೂಡ ಇಂಥ ಆಯಾಮಗಳನ್ನು ಪಡೆಯದಿದ್ದರೆ ಮುಂದಿನ ದಿನಗಳು ಜಾನಪದಕ್ಕೆ ದುಃಸ್ವಪ್ನವಾಗುವುದರಲ್ಲಿ ಸಂಶಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಎಸ್.ಎ. ಕೃಷ್ಣಯ್ಯ ಅವರು ತಮ್ಮ ಟಿಪ್ಪಣಿ ಮಂಡಿಸುತ್ತ 'ಕರ್ನಾಟಕ ಜಾನಪದ ಅಧ್ಯಯನ : ಒಂದು ಮುನ್ನೋಟ' ಎಂದು ಹೇಳುವಾಗ ಪ್ರಸ್ತುತ ಜಾನಪದ ಅಧ್ಯಯನದ ಗ್ರಹಿಕೆ ಕಾಲಕ್ಕೆ ತಕ್ಕಹಾಗೆ ಬದಲಾಗಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಒಲವು ಜಾನಪದ ಕ್ಷೇತ್ರಕಾರ್ಯ, ಸಂಗ್ರಹಕಾರ್ಯ, ದಾಖಲೀಕರಣದತ್ತ ಹರಿದಿದ್ದರೂ ಅದರ ಕುರಿತಾಗಿ ಅನೇಕ ದೋಷಗಳಿವೆ. ಈ ತಾಂತ್ರಿಕ ದೋಷಗಳಿಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಸಂರಕ್ಷಿಸದಿದ್ದರೆ ನಾವು ಸರ್ವವನ್ನೂ ಕಳೆದುಕೊಳ್ಳುವುದರಲ್ಲಿ ಅನುಮಾನವಿಲ್ಲ. ಆ ನಿಟ್ಟಿನಲ್ಲಿ ಅಕಾಡೆಮಿಗಳು, ವಿಶ್ವವಿದ್ಯಾಲಯಗಳು ಎಚ್ಚರವಹಿಸಬೇಕಾಗಿದೆ. ನಮ್ಮ ಜನಗಣತಿ ಸಮೀಕ್ಷೆ ನಡೆಯುವ ಹಾಗೆಯೇ ಐದ್ಹತ್ತು ವರ್ಷಗಳಿಗನುಗುಣವಾಗಿ ಜಾನಪದ ಪ್ರಕಾರಗಳ ಸಮೀಕ್ಷೆ

ನಡೆಯುವಂತಹ ಯೋಜನೆ ರೂಪುಗೊಳ್ಳಬೇಕು. ಇನ್ನು ಮುಂದೆ ಪ್ರಕಟಗೊಳ್ಳುವ ಕೃತಿಗಳು ಸಿ.ಡಿ. ಮಾಧ್ಯಮದಲ್ಲಿ ಪ್ರಕಾಶನಗೊಂಡರೆ ಕಡಿಮೆ ವೆಚ್ಚದಲ್ಲಿ ಮುದ್ರಣಗೊಂಡು ಪ್ರಸಾರಗೊಳ್ಳಲು ಸಹಾಯಕವಾಗುತ್ತದೆ. ಹಾಗೆಯೇ ಜಾನಪದ ಪ್ರಕಾರದಲ್ಲಿ ವಿಶ್ಲೇಷಣೆ ನಡೆಯುವ ಮುನ್ನ ನಿರ್ದಿಷ್ಟ ಪ್ರಕಾರ ಕುರಿತು ಒಂದು ಬಾರಿ ಮಾಡಿದಂತಹ ಕ್ಷೇತ್ರಕಾರ್ಯವನ್ನು ಕೊನೇಪಕ್ಷ ಹತ್ತುಬಾರಿಯಾದರೂ ಕೈಗೊಳ್ಳಬೇಕು. ಹೀಗೆ ಮಾಡಿದಾಗ ಒಳ್ಳೆಯ ಫಲಿತಗಳು ದೊರಕುವುದಕ್ಕೆ ಸಾಧ್ಯ ಎಂದು ಹೇಳಿದರು.

ಇಂದು ವಿಶ್ವವಿದ್ಯಾನಿಲಯದ ಅನೇಕ ವಿದ್ವಾಂಸರು, ಕಲಾವಿದರನ್ನು ತಾವಿದ್ದಲ್ಲಿಗೇ ಕರೆಸಿಕೊಂಡು ಕೃತಕ ವಾತಾವರಣದಲ್ಲಿ ಸಂಗ್ರಹ ಕಾರ್ಯ ಮಾಡಿದರೂ ಪುಸ್ತಕ ಹೊರಬರುವ ಸಂದರ್ಭದಲ್ಲಿ ಎಲ್ಲಿಯೂ ಕೂಡ ಆ ಬಗ್ಗೆ ಪ್ರಸ್ತಾಪ ಮಾಡದಿರುವುದು ವಿಷಾದದ ಸಂಗತಿ. ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕಲಾವಿದರಿಗೆ ನೀಡುವ ಸಂಭಾವನೆಯನ್ನು ಕುರಿತ ಹಾಗೆ Cultural policy ನಮ್ಮಲ್ಲಿಲ್ಲದಿರುವುದರಿಂದ ಆ ಬಗೆಗೆ ಒಂದು ಸಮಿತಿ ರಚಿಸಿಕೊಂಡು ಅಕಾಡೆಮಿಗಳು ಅದರತ್ತ ಗಮನಹರಿಸಬೇಕಾಗಿದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಇತ್ತೀಚೆಗೆ ಕೃಷಿವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ ಬೆಳಕಿಗೆ ಬಂದು ಅಸ್ತಿತ್ವ ಪಡೆದುಕೊಂಡಿರುವಂತೆಯೇ ಕರ್ನಾಟಕದಲ್ಲಿ ಪ್ರತ್ಯೇಕವಾಗಿ 'ಜಾನಪದ ವಿಶ್ವವಿದ್ಯಾನಿಲಯ' ಸ್ಥಾಪನೆಯಾಗುವುದರ ಬಗೆಗೆ ಸರ್ಕಾರ ಯೋಚಿಸಿ ನಿರ್ಧಾರ ತಳೆಯಬೇಕಿದೆ. ಜಾನಪದವನ್ನು ಕಲಿಯುವ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರಗಳನ್ನೇರ್ಪಡಿಸಿ ತರಬೇತಿ ಕೊಡುವುದರ ಜೊತೆಯಲ್ಲಿ ತಾಂತ್ರಿಕ ಉಪಕರಣಗಳನ್ನು ಕುರಿತು ಮಾಹಿತಿ ಮತ್ತು ತರಬೇತಿ ಕೊಡಬೇಕು. ಇಂದು ಜಾನಪದದ ಹೆಸರಿನಲ್ಲಿ ಮಾರುಕಟ್ಟೆಗೆ ಬರುವ ಮುನ್ನ ಧ್ವನಿಸುರುಳಿ ಕ್ಯಾಸೆಟ್ ಸ್ಟುಡಿಯೋಗಳ ಮಾಲೀಕರುಗಳಿಗೆ ಅಕಾಡೆಮಿ ಮತ್ತು ವಿಶ್ವವಿದ್ಯಾನಿಲಯಗಳು ಸೂಚನೆ ನೀಡಿ ಜಾನಪದದ ಹೆಸರಿನಲ್ಲಿ ಆಗುವ ಅಪಚಾರವನ್ನು ತಪ್ಪಿಸುವ ಅಗತ್ಯವಿದೆ. ಇದರ ಬಗೆಗೆ ಗಮನ ಸೆಳೆಯುವ ಕಾನೂನಿನ ಚೌಕಟ್ಟು 'ಸೆನ್ಸಾರ್ ಮಂಡಳಿ' ರಚನೆಗೊಳ್ಳಬೇಕಾಗಿದೆ.

ಜಾನಪದ ಅಧ್ಯಯನಕ್ಕೆ ಸಂಬಂಧಿಸಿದ ಹಾಗೆ ಹಿಂದೆ ಸ್ನಾತಕೋತ್ತರ ಪದವಿಯಲ್ಲಿ ಐದು ವಿದ್ಯಾರ್ಥಿಗಳಿಗೆ ಮಾತ್ರ ಕಲಿಯುವಂಥ ಅವಕಾಶ ಕಲ್ಪಿಸಲಾಗಿತ್ತು. ಆದರಿಂದು ಈ ಸಂಖ್ಯೆ ಇಪ್ಪತ್ತಕ್ಕೇರಿದೆ. ಇವರು ನಿರುದ್ಯೋಗಿಗಳಾಗಿ ಹೊರ ಬರುತ್ತಿದ್ದಾರೆ. ಅಂಥ ವಿದ್ಯಾರ್ಥಿಗಳಿಗೆ ತಾಂತ್ರಿಕ ಉಪಕರಣಗಳನ್ನು ಕೊಟ್ಟು ಶಿಸ್ತುಬದ್ಧವಾಗಿ ತರಬೇತುಗೊಳಿಸಿದರೆ ಅನೇಕ ಚಾನಲ್‌ಗಳಲ್ಲಿ ಅವರಿಗೆ ಕೆಲಸ ದೊರೆಯುತ್ತದೆ. ಈ ನಿಟ್ಟಿನಲ್ಲಿ ಕಾಲಕ್ಕೆ ತಕ್ಕಂತೆ ಜಾನಪದ ಅಧ್ಯಯನದ ಗತಿಯನ್ನು ಸಜ್ಜುಗೊಳಿಸಬೇಕಾಗಿದೆ.

ಈ ಗೋಷ್ಠಿಗೆ ಪ್ರತಿಕ್ರಿಯಿಸಿದ ಮಲ್ಲೇಶಗೌಡರು ಮಾತನಾಡುತ್ತ ಎಷ್ಟೋ ಶಿಷ್ಟ

ಸಾಹಿತಿಗಳಿಗೆ ಬದುಕೇ ಬೇರೆ ಬರಹವೇ ಬೇರೆಯಾಗಿದೆ. ಜನಪದರು ತೋರಿಕೆಯ ದಡ್ಡರು. ಆದರೆ ಅವರಲ್ಲಿ ಅಗಾಧವಾದ ಅನುಭವ ಬುದ್ಧಿವಂತಿಕೆಯಿದೆ. ನಾವು ತೋರಿಕೆಯ ಬುದ್ಧಿವಂತರು. ಅಂತರಂಗದಲ್ಲಿ ದಡ್ಡತನವಿದೆ - ಇವೆರಡರ ತುಲನಾತ್ಮಕವಾದ ಅಧ್ಯಯನ ನಡೆಯಬೇಕಾದ ಅಗತ್ಯವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸೋಮಶೇಖರಗೌಡರು ಪ್ರತಿಕ್ರಿಯಿಸುತ್ತಾ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಜಾನಪದದ ಕೆಲಸ ಆಗಬೇಕೆಂದು ಸಲಹೆ ನೀಡಿದರು.

ಪಿ. ಗೌರೀಶ್ ಅವರು ಜಾನಪದ ಕ್ಷೇತ್ರ ಈ ಹೊತ್ತು ಬಹು ಮಾಧ್ಯಮಗಳಲ್ಲಿ ಕೆಲಸ ಮಾಡುವುದಕ್ಕೆ ಆಹ್ವಾನ ನೀಡುತ್ತಿದೆ. ಈ ಬಹುಮಾಧ್ಯಮ ಆರ್ಥಿಕವಾಗಿ ಕೈಗೆಟುಕದಿರುವ ಕ್ಷೇತ್ರವಾದರೂ ಈ ಜ್ಞಾನ ಜಾನಪದ ವಿದ್ಯಾರ್ಥಿಗಳಿಗೆ, ಅಧ್ಯಯನಾಕಾರರಿಗೆ ಉಪಯುಕ್ತವಾದುದು ಮತ್ತು ಉದ್ಯೋಗದ ದೃಷ್ಟಿಯಲ್ಲೂ ಕೂಡ ಸ್ಥಳೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಅವಕಾಶ ದೊರಕಿಸಿಕೊಡುತ್ತದೆ. ಹಾಗಾಗಿ ಸಂಪ್ರದಾಯದ ಜೊತೆ ಜೊತೆಗೆ ತಂತ್ರಜ್ಞಾನದ ಅಧ್ಯಯನ ಬಹಳ ಅವಶ್ಯಕವೆಂದೇ ಹೇಳಬಹುದೆಂದರು.

ಪಂಡಿತಾರಾಧ್ಯ ಅವರು ಜಾನಪದದ ಅಳಿವು-ಉಳಿವಿನ ಬಗ್ಗೆ ಹಾಗೂ ಕ್ಷೇತ್ರಕಾರ್ಯ ಕುರಿತು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು.

ವಿಜಯಲಕ್ಷ್ಮಿ ಮಾನಾಪುರ ಅವರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತ ಕರ್ನಾಟಕ ಜಾನಪದವನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸುವ, ವಿಮರ್ಶಿಸುವ ಕ್ರಮ ಚಾಲ್ತಿಯಲ್ಲಿದೆ. ಈ ಕ್ರಮ ಜಾನಪದದ ಮಟ್ಟಿಗೆ ಅಪ್ರಸ್ತುತ ಎಂತಲೇ ನನ್ನ ಭಾವನೆ. ಏಕೆಂದರೆ ನಮ್ಮ ಇಡೀ ಸಮಾಜವನ್ನು ವೈದಿಕ ಮತ್ತು ಅವೈದಿಕ ಎಂದು ಎರಡು ಭಾಗವಾಗಿ ವಿಂಗಡಿಸಿಕೊಳ್ಳಬಹುದು. ಈ ಅವೈದಿಕದಡಿಯಲ್ಲಿ ಕಂಡುಬರುವ ಜನಪದ ಸಂಸ್ಕೃತಿ ಮೂಲತಃ ಮಾತೃಪ್ರಧಾನವಾದುದು. ಅದರಲ್ಲಿ ಬಹುಪಾಲು ಸ್ತ್ರೀಪರವಾದ ನಿಲುವುಗಳನ್ನು ಕಾಣಬಹುದು. ಆದುದರಿಂದ ಅಸಮಾನತೆಯ ಬೀಜಹುಟ್ಟಿಕೊಂಡಿದುದೇ ವೈದಿಕ ಸಮಾಜದಿಂದ. ಅಂಥ ಸಂದರ್ಭದಲ್ಲಿ ಒಂದು ಜನಸಮುದಾಯದಲ್ಲಿರುವಂತಹ ಸಮಸ್ಯೆಯನ್ನು ಇಡೀ ಮಹಿಳಾ ಸಮಾಜಕ್ಕೆ ಆರೋಪಿಸಿದೆ ಆಯಾಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ನಡೆಯಬೇಕಾದುದು ಅತ್ಯವಶ್ಯಕ ಎಂದರು.

ಈ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಹಿ.ಚಿ. ಬೋರಲಿಂಗಯ್ಯನವರು ಜಾಗತೀಕರಣದ ಸಂಕ್ರಮಣ ಸಂದರ್ಭಕ್ಕೆ ಹೆಚ್ಚು ಒತ್ತುಕೊಟ್ಟು ಮಾತನಾಡಿದರು. ಇತಿಹಾಸದಲ್ಲಿ ಬಹಿರಂಗಚರಿತ್ರೆ ಮತ್ತು ಅಂತರಂಗಚರಿತ್ರೆ ಎಂದು ಎರಡು ವಿಧ. ಈ ಅಂತರಂಗಚರಿತ್ರೆಯೇ ನಮ್ಮ ನಿಜವಾದ ಜಾನಪದ. ಅಂತರಂಗಚರಿತ್ರೆಯನ್ನು ಬಹಿರಂಗಪಡಿಸಿ ಇತಿಹಾಸಕ್ಕೆ ಸೇರ್ಪಡೆಗೊಳಿಸಿದರೆ ಇದುವರೆವಿಗೆ ಕಂಡಂತಹ

ಅರ್ಧಸತ್ಯದ ಇತಿಹಾಸ ಪೂರ್ಣಗೊಳ್ಳುತ್ತದೆ. ಹಾಗಾಗಿ ಆ ಕಡೆ ಗಮನಹರಿಸಬೇಕಾಗಿದೆ. ನಮ್ಮ ಪುರುಷಪ್ರಧಾನ ವ್ಯವಸ್ಥೆ, ಆರ್ಯೀಕರಣದಿಂದ ಬಂದ ಬಳುವಳಿ. ಅಂಥ ಪುರುಷ ಪ್ರಧಾನ ವ್ಯವಸ್ಥೆಗೆ ಸಂಪೂರ್ಣ ಪ್ರತಿಭಟನೆಯನ್ನು ಜನಪದ ಮಹಾಕಾವ್ಯಗಳಲ್ಲಿ ಕಾಣಬಹುದು. ಅಲ್ಲಿ ಒಂದು ಯುಗದ ಇತಿಹಾಸ ಅಡಗಿದೆ. ಏಕಸಂಸ್ಕೃತಿಗೆ ಮಹತ್ತಾದ ಕೊಡಲಿಪೆಟ್ಟನ್ನು ಕೊಡುವಂತಹ ಸಂಗತಿಗಳು ನಮ್ಮ ಜನಪದ ಸಂಪ್ರದಾಯ ಆಚರಣೆಗಳಲ್ಲಿ ದೊರಕುತ್ತದೆ. ಅಂತಹದಕ್ಕೆ ವಿಶೇಷವಾಗಿ ಗಮನಕೊಟ್ಟು ಅಧ್ಯಯನ ಮಾಡಿದ್ದಾದರೆ ಎಲ್ಲ ಅವಗುಣಗಳಿಗೆ ಉತ್ತರ ದೊರಕುತ್ತದೆ. ಇಂದು ಇಂತಹ ಮೌಲ್ಯಗಳಿರುವ ಜನಪದ ಮಹಾಕಾವ್ಯಗಳನ್ನು ಹೊರಗಿಟ್ಟು ಶಿಷ್ಟ ಮಹಾಕಾವ್ಯಗಳನ್ನು ರಾಜಮಹಾರಾಜರ ಸಂಸ್ಕೃತಿಯನ್ನು ಮೇಳೈಸುವಂತಹ ಕಥೆಗಳನ್ನು ಇಟ್ಟುಕೊಂಡು ಸಂಸ್ಕೃತಿಯನ್ನು ಕಟ್ಟಲಿಕ್ಕೆ ಮುಂದಾಗಿದ್ದೇವೆ. ಇದು ಮೂರ್ಖತನದ ಪರಮಾವಧಿ ಯೆಂದೇ ಹೇಳಬೇಕು. ಹಾಗಾಗಿ ಇವತ್ತಿನ ದೃಷ್ಟಿಕೋನ ಬದಲಾಗಿ ಪುನರ್‌ವ್ಯಾಖ್ಯಾನ ಕ್ಕೊಳಪಡಿಸಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ನಾವು ಜಾನಪದಕ್ಕೆ ಮೊರೆಹೋಗ ಬೇಕು. ಈ ಹಿನ್ನೆಲೆಯಲ್ಲಿ ಪ್ರಾಮಾಣಿಕ ಕ್ಷೇತ್ರಕಾರ್ಯಕ್ಕೆ ತೊಡಗಿಸುವುದರ ಮೂಲಕ ವಿಶ್ವವಿದ್ಯಾಲಯಗಳು ಪ್ರಧಾನ ಸಂಸ್ಕೃತಿ, ಪ್ರತಿಸಂಸ್ಕೃತಿಗಳ ಮೇಲೆ ಹೇರಿರುವಂತಹ ಒತ್ತಡಗಳನ್ನು ನಿವಾರಿಸಿಕೊಳ್ಳಲು ಅಂತಹ ಸಂಸ್ಕೃತಿಯ ವಿರುದ್ಧ ಸಣ್ಣ ಸಂಸ್ಕೃತಿಗಳಲ್ಲಿ ಆತ್ಮವಿಶ್ವಾಸ ತುಂಬುವಂತಹ ಕೆಲಸ ಮಾಡಬೇಕಾಗಿದೆ.

ಸಮಾರಂಭದ ಕಡೆಯ ಘಟ್ಟವಾದ ಸಮಾರೋಪ ಸಮಾರಂಭದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದಂತಹ ಚರ್ಚೆಯ ಒಟ್ಟಾರೆ ಫಲಿತಗಳನ್ನು ಕುರಿತು ಪ್ರೊ. ಎ.ವಿ. ನಾವಡ ಅವರು ಮಾತನಾಡಿದರು. ಮೈಸೂರು ಕರ್ನಾಟಕ ಜಾನಪದಕ್ಕೆ ದಿಕ್ಕು ದೆಸೆಯನ್ನು ಒಂದು ರೀತಿಯ ಕಾಯಕಲ್ಪವನ್ನು ದೊರಕಿಸಿಕೊಟ್ಟಂತಹ ನೆಲ. ಇಲ್ಲಿ ಮೊದ ಮೊದಲು ಜೀ. ಶಂ. ಪ. ಅವರ ಕಾಲದಲ್ಲಿ ಅತ್ಯಂತ ವೇಗವಾಗಿ ನಡೆದಂತಹ ಕೆಲಸ ನಂತರದಲ್ಲಿ ಒಂದು ರೀತಿಯ ವಿಸ್ಮೃತಿಗೆ ಒಳಗಾಯಿತು. ಅಂತಹ ವಿಸ್ಮೃತಿಗೆ ಹೊಸ ರೀತಿಯ ಆಲೋಚನೆಗೆ ಈ ವಿಚಾರಸಂಕಿರಣ ದಾರಿಮಾಡಿಕೊಟ್ಟಿದೆ ಎಂದರೆ ಅತಿಶಯೋಕ್ತಿ ಯಾಗಲಾರದು ಎಂದರು.

ಕ್ಷೇತ್ರಕಾರ್ಯ ಎಂದೂ ಮುಗಿಯದ ಕೆಲಸ. ಹಿಂದಿನ ದಿನಗಳಲ್ಲಿ ಜಾನಪದ ಅಧ್ಯಯನ ಮಾದರಿ ಪಠ್ಯಕೇಂದ್ರಿತ ಆಲೋಚನೆಗಳಿಗೆ ಒಳಪಟ್ಟಿತ್ತೇ ಹೊರತು ಅಲ್ಲಿ ಸಂಸ್ಕೃತಿ ಶೋಧಿತವಾದಂತಹ ಆಲೋಚನೆಗಳಿರಲಿಲ್ಲ. ಜಾನಪದ ಸಂಗ್ರಹ ಸಂದರ್ಭದಲ್ಲಿ ಒಂದೇ ಪಠ್ಯವನ್ನು ಹಲವು ಬಾರಿ ಒಬ್ಬನಿಂದಲೇ ಸಂಗ್ರಹ ಮಾಡಿದ್ದಾದರೆ ನೂರು, ಸಾವಿರ ಪಠ್ಯಗಳು ದೊರಕುತ್ತವೆ. ಆ ಭಿನ್ನ ಪಠ್ಯಗಳನ್ನು ಇಟ್ಟುಕೊಂಡು ಅಧ್ಯಯನ ಕೈಗೊಂಡರೆ ಒಳ್ಳೆಯ ಫಲಿತಗಳನ್ನು ಪಡೆಯಲು ಸಾಧ್ಯ. ಈ ದೃಷ್ಟಿಯಲ್ಲಿ ಜಾನಪದಕ್ಕೆ ಕಾಲದ ಸೂತಕ ಇಲ್ಲ ಅಂತ ಹೇಳಬಹುದು.

ಜನಪದ ಕಲಾವಿದರಿಗೆ ಎರಡನೆಯ ಸ್ಥಾನ ಕೊಡದೆ ಅವರನ್ನು ಗೌರವಿಸುವುದರ ಮೂಲಕ ಬಹುಪಠ್ಯಗಳ ಸಂಗ್ರಹಕ್ಕೆ ತೊಡಗಬೇಕು. ಕಲಾವಿದರ ಹೆಸರನ್ನು ಪುಸ್ತಕದಲ್ಲಿ ಪ್ರಕಟಪಡಿಸುವುದಷ್ಟೇ ಅಲ್ಲದೇ ಅವರನ್ನು ಸಹ ಸಂಶೋಧಕರಾಗಿ ಪರಿಗಣಿಸಿ, ಅವರ ಬಗೆಗಿನ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ಕಲಾವಿದ ಕೇಂದ್ರಿತ ಅಧ್ಯಯನಕ್ಕೆ ತೊಡಗಬೇಕು. ಹಾಗೇಯೇ ಬಹುಕಾಲ ಅವರೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡು ಅಧ್ಯಯನಕ್ಕೆ ತೊಡಗಿದ್ದಾದರೆ ಜಾನಪದಕ್ಕೆ ಹೊಸ ಆಯಾಮ ಕೊಡಲು ಸಾಧ್ಯವಾಗುತ್ತದೆ.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಸಿದ್ಧಾಂತಗಳ ಬಗೆಗೆ ಒಂದು ರೀತಿಯ ಭ್ರಮೆ ಆವರಿಸಿದೆ. ಹಾಗಾಗಿ ಸಿದ್ಧಾಂತಗಳ ಮೂಲಕ ಪಠ್ಯಕ್ಕೆ ಹೋಗುವುದು ಅಪಾಯಕಾರಿ. ಆದರೆ ನಮ್ಮ ಪಠ್ಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಪಠ್ಯದಿಂದ ಸಿದ್ಧಾಂತಗಳ ಕಡೆಗೆ ಹೋಗಬೇಕಾಗಿದೆ. ನಮ್ಮ ಪಠ್ಯಕ್ಕೆ ಸಿದ್ಧಾಂತಗಳನ್ನು ನೇರವಾಗಿ ಅನ್ವಯಿಸದೆ ಅವು ನಮ್ಮ ಅಧ್ಯಯನಕ್ಕೆ ಸಹಾಯಕವಾಗಬೇಕಷ್ಟೆ. ಯಾವುದೇ ಸಿದ್ಧಾಂತಗಳನ್ನು ಯಥಾವತ್ತು ಸ್ವೀಕಾರ ಮಾಡದೆ, ನಮ್ಮ ಆಲೋಚನೆಗಳಿಗೆ ಸಿದ್ಧಾಂತಗಳು ಹೊಂದದಿದ್ದಾಗ ಅವುಗಳನ್ನು ಮುರಿದುಕಟ್ಟುವ ಕೆಲಸ ಮಾಡಬೇಕಾಗಿದೆ.

ಇಂದು ಜಾನಪದದ ಮೂಲಕ ಚರಿತ್ರೆ ಕಟ್ಟುವ ಕೆಲಸ ಬಾಕಿಯಿದೆ. ಹಿಂದೆ ಇತಿಹಾಸದ ವಿದ್ವಾಂಸರು ಜಾನಪದವನ್ನು 'ಕಾಗಕ್ಕ ಗೂಬಕ್ಕ'ನ ಕಥೆಯೆಂದು ಲೇವಡಿ ಮಾಡುತ್ತಿದ್ದುದುಂಟು. ಆದರೆ ಅದೇ ವಿದ್ವಾಂಸರು ಇಂದು ಮೌಖಿಕ ಇತಿಹಾಸವನ್ನು ಒಪ್ಪಿಕೊಂಡಿದ್ದಾರೆ. ಈ ಮೌಖಿಕ ಆಕರಗಳು ಲಿಖಿತ ಆಕರಗಳಿಗೆ ಒಂದು ರೀತಿಯ ಪೂರಕ ಮಾಹಿತಿಯನ್ನು ಒದಗಿಸುವುದರ ಮೂಲಕ ಅದನ್ನು ಬಲಿಷ್ಠಗೊಳಿಸುತ್ತದೆಂದು ಹೇಳಲು ಬರುವುದಿಲ್ಲ. ಮೌಖಿಕಚರಿತ್ರೆ ಹೆಚ್ಚು ವಾಸ್ತವಿಕ. ಆದುದರಿಂದ ಮೌಖಿಕ ಚರಿತ್ರೆ ಭೂತದಿಂದ ವರ್ತಮಾನದ ಜೊತೆಗೆ ಸಂವಾದ ಮಾಡುವ ಇಂದಿನ ಚರಿತ್ರೆಯಾಗಿದೆ. ಆ ದೃಷ್ಟಿಯಲ್ಲಿ ಸಾಂಸ್ಕೃತಿಕ ಪಠ್ಯವಾಗಿ ಜಾನಪದ ಹೆಚ್ಚು ಮಹತ್ವ ಪೂರ್ಣವಾದುದು. ಹಾಗಾಗಿ ಇಂದು ಮೌಖಿಕ ಚರಿತ್ರೆಯ ಮೂಲಕ ಇತಿಹಾಸವನ್ನು ಮರುಸ್ಥಾಪಿಸಬೇಕಾಗಿದೆ. ಜಾನಪದವನ್ನು ಬಹುರೂಪಿಯಾಗಿ ಅನ್ವಯಿಕಗೊಳಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸಮಾರೋಪ ಭಾಷಣ ಮಾಡಿದ ಪ್ರೊ. ಎಚ್.ಜೆ. ಲಕ್ಕಪ್ಪಗೌಡರು ಜಾನಪದದ ಬಹುತ್ವದ ಕುರಿತು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಜಾನಪದ ಒಳಸೊರಗಿ ಹೋಗುತ್ತಿರುವ ಹಿನ್ನೆಲೆಯಲ್ಲಿ ಅದು ಮತ್ತೆ ಗರಿಗೆದರಿ ಸತ್ವಪೂರ್ಣವಾಗಿ ಚಲಿಸಬೇಕೆಂಬುದೇ ಎಲ್ಲರ ಆಶಯ. ಜಾನಪದ ಒಮ್ಮೆ ಹುಟ್ಟಿ ಸತ್ತುಹೋಗುವಂತಹದ್ದಲ್ಲ; ನಿತ್ಯ ಪರಿವರ್ತನಶೀಲವಾದುದು. ಅದು ಮನುಷ್ಯನ ಹುಟ್ಟಿನೊಂದಿಗೆ ಹುಟ್ಟಿ, ಹೊಸಕಾಲಮಾನಗಳೊಂದಿಗೆ ಹೊಸದಾಗುತ್ತ ಕಳಕಳಿಯಿಂದ ಬದುಕನ್ನು ಪ್ರವಹಿಸುತ್ತದೆ. ಬದುಕಿಗೆ ಪೂರಕವಾಗಿ ಆಲೋಚನೆಗಳನ್ನು ತಿದ್ದಿ ತೀಡುತ್ತ ಹರಿತಗೊಳಿಸುತ್ತದೆ.

ಆರಂಭ ಕಾಲದಲ್ಲಿ ತ್ವರಿತ ಗತಿಯಲ್ಲಿ ಜರುಗಿದಂತಹ ಕ್ಷೇತ್ರಕಾರ್ಯ ಇಂದು ನಡೆಯುತ್ತಿಲ್ಲವೆನ್ನುವದು ದುರ್ದೈವದ ಸಂಗತಿ. ಇವತ್ತು ಆಧುನಿಕ ಬದುಕನ್ನು ಕುರಿತಂತಹ ಕಾವ್ಯಗಳು, ಹೊಸಕಥೆ, ಕವಿತೆಗಳು, ಹೊಸ ದೇವತೆಗಳು ಹುಟ್ಟಿಕೊಂಡಿವೆ. ಇವುಗಳ ಬಗೆಗೆ ಮಾಹಿತಿ ಸಂಗ್ರಹಿಸಿ ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಿಕೊಳ್ಳದಿದ್ದರೆ ಜಾನಪದದ ಪೂರ್ಣತೆಯನ್ನು ಸಾಧಿಸಲು ಸಾಧ್ಯವಿಲ್ಲ. ಹಾಗಿಲ್ಲದಿದ್ದರೆ ಪ್ರಾಚೀನ ವೈಭವದಿಂದ ಬೆಳಚಿಕೊಂಡ ಹೆಣ್ಣು ಮಗಳಾಗಿ ಜಾನಪದ ಒಂದು ಕಾಲಕ್ಕೆ ಕಂಡುಬಿಡಬಹುದೇನೊ? ಎಂಬ ಆತಂಕ ಕಾಡದಿರದು. ಹಾಗಾಗಿ ಹೊಸ ಕ್ಷೇತ್ರಕಾರ್ಯದತ್ತ ದೃಷ್ಟಿ ಹಾಯಿಸುವುದರ ಮೂಲಕ ಹೊಸ ರಕ್ತ, ಜೀವವನ್ನು ಜಾನಪದಕ್ಕೆ ದಾನಮಾಡಬೇಕಾದಂತಹ ಅಗತ್ಯವಿದೆ. ಇದುವರೆವಿಗೆ ನಡೆದಿರುವಂತಹ ಸ್ಥೂಲ ಅಧ್ಯಯನಗಳನ್ನು ಅತ್ತಸರಿಸಿ ಮುಂದೆ ಸೂಕ್ಷ್ಮ ಅಧ್ಯಯನಗಳತ್ತ ಗಮನಹರಿಸಿ ಆಧುನಿಕ ಬದುಕಿನ ಚಿತ್ರವಿಚಿತ್ರಗಳೆಲ್ಲವನ್ನು ದಾಖಲಿಸಬೇಕಾಗಿದೆ.

ಜಾನಪದದಲ್ಲಿ ಕ್ಷೇತ್ರಕಾರ್ಯದ ಮಹತ್ವವನ್ನು ವಿದ್ವಾಂಸರು ಪ್ರತಿಪಾದಿಸಿರುವುದರಿಂದ ಮತ್ತು ಕ್ಷೇತ್ರಕಾರ್ಯ ಅಗತ್ಯವಾಗಿರುವುದರಿಂದ ರಾಜ್ಯ ಸರ್ಕಾರ ರಾಜ್ಯಮಟ್ಟದ ಕ್ಷೇತ್ರ ಕಾರ್ಯ ಘಟಕವನ್ನು ತುರ್ತಾಗಿ ಪ್ರಾರಂಭಿಸುವುದು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಸಮಾರೋಪ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರೊ. ಸಿ. ಪಿ. ಸಿದ್ಧಾಶ್ರಮ ಅವರು ಜಾನಪದ ಅಧ್ಯಯನ ಸಂಸ್ಕೃತಿಯ ಅಧ್ಯಯನವೇ ಆಗಿರುವುದರಿಂದ ಆ ಬಗೆಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಒಂದನೆಯ ತರಗತಿಯಿಂದ ಪಿ.ಯು.ಸಿ. ವರೆಗಿನ ಪಠ್ಯಪುಸ್ತಕದಲ್ಲಿ ಸಂಸ್ಕೃತಿಯ ಬಗೆಗೆ ಪಠ್ಯವನ್ನು ಅಳವಡಿಸಬೇಕು. ಈ ಪಠ್ಯರಚನೆ ಪರಿಣಿತ ಜಾನಪದ ವಿದ್ವಾಂಸರಿಂದಲೇ ರಚಿತವಾಗಬೇಕಾಗಿರುವುದರಿಂದ ಪಠ್ಯರಚನಾ ಸಮಿತಿಯಲ್ಲಿ ಜಾನಪದ ವಿದ್ವಾಂಸರನ್ನು ಸೇರಿಸಿಕೊಳ್ಳುವುದರತ್ತ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಇಂದಿನ ಜಾಗತೀಕರಣ ಸಂದರ್ಭದಲ್ಲಿ ಸಂಸ್ಕೃತಿಯ ಉಳಿವಿಗೆ ಶೀಘ್ರವಾಗಿ ಜಾನಪದ ಅಧ್ಯಯನವನ್ನು ಕೇಂದ್ರವಾಗಿಸಿಕೊಂಡು ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಈಗಿನ ಜರೂರು. ಜಾನಪದದಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಅಗತ್ಯ. ಸರ್ಕಾರವು ಕಾಳಜಿವಹಿಸಿ ಕ್ಷೇತ್ರಕಾರ್ಯಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದಷ್ಟೇ ಅಲ್ಲದೆ ಪದವಿ ತರಗತಿಗಳಲ್ಲಿ ಜಾನಪದವನ್ನು ಅಧ್ಯಯನ ವಿಷಯವಾಗಿ ಸೇರ್ಪಡೆಗೊಳಿಸಬೇಕೆಂದು ಸಲಹೆ ನೀಡಿದರು.

ಒಟ್ಟಾರೆ ಈ ವಿಚಾರಸಂಕಿರಣದಲ್ಲಿ ಕ್ಷೇತ್ರಕಾರ್ಯದ ವಿವಿಧ ಆಯಾಮಗಳ ಚಿಂತನೆ ನಡೆಸಲಾಯಿತು. ಪ್ರಸ್ತುತಕ್ಕೆ ಇದು ಅಗತ್ಯವೂ ಹೌದು. ಇದುವರೆವಿಗೆ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ ಸ್ವರೂಪದ ಜಾನಪದ ಅಧ್ಯಯನ ಸಾಕಷ್ಟು ನಡೆದಿದ್ದರೂ, ಸೈದ್ಧಾಂತಿಕ

ಸ್ವರೂಪದ ಅಧ್ಯಯನ ಶಾಸ್ತ್ರೀಯವಾಗಿ ನಡೆದಿಲ್ಲ ಎನ್ನುವುದರ ಬಗೆಗೆ ಗಮನಹರಿಸಲಾಯಿತು. ಹಾಗೆಯೇ ಈವರೆಗೆ ಜಾನಪದ ಅಧ್ಯಯನದಲ್ಲಿ ಪಾಶ್ಚಾತ್ಯರ ನಿಲುವುಗಳನ್ನು ಅನುಸರಿಸುತ್ತ ಬಂದಿದ್ದು, ಇನ್ನಾದರೂ ನಮ್ಮ ಒಲವು-ನಿಲುವುಗಳನ್ನು ಹೊಸ ಸವಾಲುಗಳನ್ನು ಪ್ರಕಟಿಸಬೇಕೆಂಬುದರ ಬಗೆಗೆ ದೃಷ್ಟಿ ಹರಿಸಲಾಯಿತು. ಜಾಗತೀಕರಣದ ಸಂದರ್ಭದಲ್ಲಿ ಜಾನಪದದ ಅಳಿವು ಉಳಿವಿನ ಬಗ್ಗೆ ಪ್ರಸ್ತಾಪ ಮಾಡುತ್ತ ಇಂದು ಜಾಗತೀಕರಣಕ್ಕೆ ಹೇಗೆ ಮುಖಾಮುಖಿಯಾಗಬೇಕು ಎಂಬುದರ ಬಗ್ಗೆ ಹೊಸ ಹೊಳಹುಗಳನ್ನು ಚರ್ಚಾಗೋಷ್ಠಿ ನೀಡಿತೆನ್ನಬಹುದು. ಈವರೆಗೆ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ನಡೆದಂತಹ ಜಾನಪದ ಅಧ್ಯಯನ ಇನ್ನು ಮುಂದೆ ವೈಜ್ಞಾನಿಕ ರೀತಿಯಲ್ಲಿ ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಯಿತು. ಬದಲಾದ ಸಂದರ್ಭಕ್ಕನುಗುಣವಾಗಿ ಸ್ತ್ರೀಕೇಂದ್ರಿತ ನೆಲೆಯಲ್ಲಿಯೂ ಜಾನಪದ ಅಧ್ಯಯನ ವಿಶ್ಲೇಷಣೆಗೆ ಒಳಪಡಬೇಕು. ಜಾನಪದವನ್ನು ಒಂದು ಶಿಸ್ತಾಗಿ ಅಧ್ಯಯನ ಮಾಡಿದಂತಹ ವಿದ್ಯಾರ್ಥಿಗಳ ಬದುಕು – ಭವಿಷ್ಯದತ್ತ ಗಂಭೀರವಾದ ಒಂದು ಚಿಂತನೆಯನ್ನು ಮಾಡಲಾಯಿತು.

ಈ ಸಂಚಿಕೆಯ ಬರಹಗಾರರು

೧. **ಪ್ರೊ. ವಿ.ಎಸ್. ಶೇಷಗಿರಿರಾವ್**
ಅಧ್ಯಕ್ಷರು : ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

೨. **ಡಾ. ಎಸ್. ವೆಂಕಟೇಶ್**
ಪ್ರವಾಚಕ : ತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೩. **ಜಿ.ಟಿ. ಸೋಮಶೇಖರ್**
ಅಧ್ಯಾಪಕ : ಇತಿಹಾಸ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೪. **ಡಾ. ಟಿ. ಗೋವಿಂದರಾಜು**
ಎಂ. ಎಫ್. ೩೨/೮, ನಂದಿನಿ ಬಡಾವಣೆ
ಬೆಂಗಳೂರು-೫೬೦ ೦೯೬

೫. **ಡಾ. ಆರ್. ರಾಮಕೃಷ್ಣ**
ಪ್ರವಾಚಕ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೬. **ಡಾ. ಬಿ.ಕೆ. ರವೀಂದ್ರನಾಥ್**
ಅಧ್ಯಾಪಕ : ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು -೫೭೦ ೦೦೬

೭. **ವಿ. ವಿಜಯಮ್ಮ**
ಸಂಶೋಧನಾ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೮. **ಡಾ. ಮ.ಸು. ಕೃಷ್ಣಮೂರ್ತಿ**
ಕೆ/ಆ ಪ್ರೊ. ವಿ.ಡಿ. ಹೆಗಡೆ
ಅಧ್ಯಕ್ಷರು : ಹಿಂದಿ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೯. **ಪಿ. ಶಶಿಕಲಾ**
ಕೆ/ಆ ಸಿ. ಪುಟ್ಟಸ್ವಾಮಿ
ಕಡತನಾಳು, ಶ್ರೀರಂಗಪಟ್ಟಣ ತಾಲ್ಲೂಕು
ಮಂಡ್ಯ ಜಿಲ್ಲೆ.

೧೦. **ಮಹಾದೇವಿಬಾಯಿ / ವಿಜಯಲಕ್ಷ್ಮಿ ಮನಾಪುರ**
ಸಂಶೋಧನಾ ವಿದ್ಯಾರ್ಥಿಗಳು : ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬.

ಕೆ.ಸಂ. ೮೨೨೬-ಎಂ.ಯು.ಪಿ.ಎಂ.-೨೦೦ ಪ್ರತಿಗಳು-೧.೧೦.೨೦೦೪